
ಟಿಪಿಬಳಗ ಅರ್ಪಿಸುವ
ನಿರಂತರ..
ಯುಗಾದಿ ವಿಶೇಷಾಂಕ ಮಾರ್ಚ್ ೨೦೦೬
ಸಂಪುಟ:೧ ಸಂಚಿಕೆ:೩

## ಸೂರ್ಯಾಸ್ತ

ಆಗಸದ ಅಂಗಳದಿ ಮರೆಯಾಗುತಿಹ ನೇಸರ
ಹಗಲೆಲ್ಲ ಮೆರೆದು ತನ್ನ ಶಾಖವ ಎರೆದು
ಸಕಲ ಜೀವಿಗಳಿಗೂ ಹೊಸ ಜೀವ ತುಂಬಿ
ಹೋಗುತಿಹನೇ ಕಳೆಯಲು ಕೆಲಸದ ಬೇಸರ!

ಹೋಗುವ ಮುಂಚೆ ಅದೆಂತಹಾ ಸಡಗರ
ಮೂಡಿಸುವನು ಬಣ್ಣಗಳ ತರ ತರ
ಆಕಾಶವ ಮಾಡುವನು ಕಲೆಗಳ ಆಗರ
ಇಲ್ಲವೇಕೆ ಇವನಿಗೆ ಹೋಗಲು ಅವಸರ!

ದಿನ ದಿನವೂ ಹೀಗೆಯೋ ಈ ದಿನಕರ
ರಚಿಸುವ ಕಲೆಯು ಬಲು ಸುಂದರ
ನೋಡುತಿರೆ ತೊಳೆಯುವುದು ಮನದ ವಿಕಾರ
ಮನ ಮುಟ್ಟಿ ತುಂಬುವುದು ಕಣ್ಣ ಪ್ರಾಕಾರ

– ಶ್ರೀಮತಿ. ಶುಭಶ್ರೀ ಜಿ. ಬೆಳಂದೂರ

## ಹಾಡು ಮುಗಿಯಲೇ ಇಲ್ಲ

ನಾ ಹಾಡಬೇಕೆಂದ ಹಾಡು
ಮುಗಿಯಲೇ ಇಲ್ಲ

ತನು ನಿನ್ನ ತಂಬೂರಿ
ನರ ನಾಡಿ ತಂತಿಗಳು
ಬಿಟ್ಟಿ ಕಟ್ಟಿ ಬಿಗಿದರೂ
ಮಿಡಿದರೂ ಅದರದೇ ನಾ

ಮಣ್ಣು ಮಳೆ ಎಲ್ಲ ಇದೆ
ಬೀಜ ಸಸಿಯಾಗಿದೆ
ತಿನ್ನಲಿದೆ ಉಣ್ಣಲಿದೆ
ಹೂವು ಹಣ್ಣಾಗದೇ ನಾ



ಜೀವ ಇದೆ ಭಾವ ಇದೆ
ಮನಸಿದೆ ಕನಸಿದೆ
ತನುವೆಲ್ಲ ನಡುಗಿದರೂ
ದನಿ ಹೊರಗೆ ಬಾರದೇ ನಾ

ಹಸಿರಿಗೂ ಉಸಿರಿದೆ
ಗಿಣಿ ಗಾನ ಹಾಡಿದೆ
ನಾ ಹಾಡಬೇಕೆಂದೆ
ಶಬ್ದಗಳು ಬಾರದೇ ನಾ

ಹಣತಿ ಇದೆ ಬತ್ತಿ ಇದೆ
ತುಂಬೆಲ್ಲ ಎಣ್ಣೆ ಇದೆ
ಬತ್ತಿ ಮಿಂದಾಗಿದೆ
ನೀ ದೀಪ ಹಚ್ಚದೇ ನಾ

– ಪ್ರೊ. ಆರ್. ಓ. ಪುನಗಿನ


ಟಿಪಿಬಳಗ ಅರ್ಪಿಸುವ
ನಿರಂತರ..
ಯುಗಾದಿ ವಿಶೇಷಾಂಕ ಮಾರ್ಚ್ ೨೦೦೬
ಸಂಪುಟ:೧ ಸಂಚಿಕೆ:೨
ಶ್ರೇಯಾ ಪಾಟೀಲ
ನೇಹಾ ಅಣ್ಣಿಗೇರಿ
ಸೌದಾಮಿನಿ ಬೆಳಂದೂರ
ಸೃಜನಾ ಮೆಟಗುಡ್ಡಮಠ
ಶುಚಿ ಕರಗುದರಿ
ಅಪೇಕ್ಷಾ ಯಾದವಾಡ
ಮೋಕ್ಷಾ ಅಣ್ಣಿಗೇರಿ
ಅನುಶ್ರೀ ಯಾದವಾಡ
ಮಹೀ ಗುಡಿ
ತನ್ವಿ ಮಿಸ್ರಾ
ಶ್ರೀದೀಪ್ತಿ ಶ್ರೀಕಾಂತ್


ಟಿಪಿಬಳಗ ಅರ್ಪಿಸುವ
ನಿರಂತರ..
ಯುಗಾದಿ ವಿಶೇಷಾಂಕ ಮಾರ್ಚ್ ೨೦೦೬
ಸಂಪುಟ:೧ ಸಂಚಿಕೆ:೨
ಚೇತನ್ ಹಿರೇಮಠ
ಸಿದ್ಧಾಂತ ಸತ್ಯನಾಯಕ
21 1 2005
ಅರುಣ–ತೇಜಸ್ವಿನಿ
ಅವರ ಎರಡನೇ ಮಗು
ಅನೀಶ್ ಹಿರೇಮಠ
ಸಂಕಲ್ಪ ಹಿರೇಗೌಡರ
ಆಕಾಶ ಬೇವೂರ

## ಈ ಸಂಚಿಕೆಯಲ್ಲಿ . . .





**ಗೌರವ ಸಂಪಾದಕ**

ಬಸವರಾಜ. ಆರ್.ಯಾದವಾಡ

**ಉಪ–ಸಂಪಾದಕಿ**

ಶುಭಶ್ರೀ. ಜಿ. ಬೆಳಂದೂರ

**ಸಂಪಾದಕೀಯ ವಿಭಾಗ**

ಅರುಣ. ಆರ್.ಯಾದವಾಡ

ಮೃಣಾಲಿನಿ. ಎಸ್. ಗುಡಿ.

ಪ್ರಕಾಶ. ಸಿ. ರಾಜಗೋಳಿ.

**ಸಲಹೆ–ಸೂಚನೆ**

ಶ್ರೀನಿವಾಸ. ಆರ್. ಗುಡಿ.

ಶ್ರೀಕಾಂತ್. ಎಸ್. ಕೆ.

ಗಿರೀಶ. ಮೆಟಗುಡಮಠ.

ತಾಹೀರ್. ಏ. ಸನದಿ.

ಗಿರೀಶ. ಎಸ್. ಬೆಳಂದೂರ.

ರಾಜು ಹಿರೇಗೌಡರ.

**ಮುಖಪುಟ/ಸಂಚಿಕೆ ವಿನ್ಯಾಸ**

ಅರುಣ. ಆರ್.ಯಾದವಾಡ



- ಸಂಪಾದಕೀಯ
- ಬಂತಿದೋ ಯುಗಾದಿ.. – ತಳಕು ಶ್ರೀನಿವಾಸ
- ಕ್ಷಣ ಕ್ಷಣ – ಪ್ರಕಾಶ ಸಿ ರಾಜಗೋಳಿ.
- ಹೆಸರಿನಲ್ಲಿ ಹೆಮ್ಮೆ, ಹಾಸ್ಯ, ಹತಾಶ!! – ಗಿರೀಶ. ಬೆಳಂದೂರ.
- ಸಿರಿವಂತನಾದರೂ .. – ಶ್ರೀನಿವಾಸ. ಆರ್. ಗುಡಿ.
- ನಾವು..ನಮ್ಮನಂಬಿಕೆಗಳು. – ಅರುಣ ಆರ್. ಯಾದವಾಡ.
- ನೆನಪಿನಂಗಳದಿಂದ ಹೀಗೊಂದು ಕಥೆ – ಶುಭಶ್ರೀ ಜಿ. ಬೆಳಂದೂರ.
- ಒಗಟುಗಳು – ಶ್ರೀಮತಿ. ದೀಪಾ ಪಿ.ರಾಜಗೋಳಿ
- ಅಂತರ್ಜಾಲ ಪ್ರಪಂಚದ ಇನ್ನೊಂದು ಮುಖ – ಪ್ರೊ. ಆರ್. ಪಿ. ಪುನಗಿನ
- ಮುದ್ದಣ ಮನೋರಮೆಯರ ಸಂಡೆ ಕಾರ್ ಕಾರ್ ಸಂವಾದ
  ಬಸವರಾಜ. ಆರ್.ಯಾದವಾಡ
- ಬದುಕು. . . . . ಶ್ರೀ ತಳಕು ಶ್ರೀನಿವಾಸ
- ಮಹಾಶಿವರಾತ್ರಿ – ಬ್ರಹ್ಮಕುಮಾರಿ ಮಾಲಾ
- ಹೀಗೊಂದು ಮಾರವಾಡಿ ಸಂಸಾರ– ತಳಕು ಶ್ರೀನಿವಾಸ್
- ಯುಗ ಯುಗಾದಿ ಕಳೆದರೂ . . . . – ಪ್ರಕಾಶ ಸಿ.ರಾಜಗೋಳಿ
- ನಮ್ಮ ಭಾಷೆಗೆ ನಾವೇನು ಮಾಡಬಲ್ಲೆವು..? – ಅರುಣ ಆರ್. ಯಾದವಾಡ.
- 'ಮನಸೆಲ್ಲಾ ಅವಳೇ..' ಟಿವಿ ಮೆಗಾ ಧಾರಾವಾಹಿ
- ಊಟವಾದ ಮೇಲೆ ಇವನ್ನಂತೂ ಖಂಡಿತ ಮಾಡಬೇಡಿ.. – ಪುಂಡಲೀಕ ಡಿ. ಸತ್ಯನಾಯಕ.
- ನಗೆಹೂವಿನ ಬಳ್ಳಿ – ಶ್ರೀಮತಿ. ಶುಭಶ್ರೀ ಜಿ. ಬೆಳಂದೂರ
- ಅಂತರ್ಮುಖಿಗಳಾಗಿ – ಪ್ರಶಾಂತ್ ಶಿವಶಂಕರ್
- ಸ್ವರ್ಗ ಬೇಕೋ, ಏನ್ ನರಕ ಬೇಕೋ? – ಪ್ರೊ. ಆರ್. ಪಿ. ಪುನಗಿನ
- ಐಕ್ಯೈಕ ಪರಮಾತ್ಮನನ್ನು ಗುರುತಿಸುವದು ಹೇಗೆ? – ಬ್ರಹ್ಮಕುಮಾರಿ ಮಾಲಾ
- ಪ್ರಭಾವಳಿ – ಶ್ರೀಮತಿ ಶುಭಶ್ರೀ ಜಿ. ಬೆಳಂದೂರ. ಯು.ಎಸ್.ಏ.
- ಬೆಂಗಳೂರೆಂಬ ದ್ರೌಪದಿ – ಬಸವರಾಜ. ಯಾದವಾಡ
- ಸಾವು – ಹತ್ತು ಹಲವು ವಿಧ – ಅರುಣ. ಆರ್. ಯಾದವಾಡ
- ತಾಹೀರ ಸನದಿ – ಟೆನಿಸ್ ಕೆರಿಯರನ ಆರಂಭದಲ್ಲಿ
- ಸುಖಿಸು – ತಳಕು ಶ್ರೀನಿವಾಸ
- ನಿರಂತರ ಕಳೆದ ಸಂಚಿಕೆಯ ಪದ ಬಂಧಕ್ಕೆ ಸರಿಯುತ್ತರಗಳು.
- ಬೆಂಗಳೂರು ದೂರದರ್ಶನ –ಬಸವರಾಜ. ಆರ್. ಯಾದವಾಡ
- ನಿಮ್ಮ ಅನಿಸಿಕೆಗಳು



**ಟಿಪಿಬಳಗ ಇಂಟರ್‌ನೆಟ್ ವಿಳಾಸ**

http://groups.yahoo.com/group/tpbalaga/

**ಟಿಪಿಬಳಗ ಈ–ಮೇಲ್ ವಿಳಾಸ**

tpbalaga@yahoo.com



ಆತ್ಮೀಯರೆ,

ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ.. ಮತ್ತೇ ಕೇಳಿ ಬರುತಿದೆ.. ಅದೇ ರೀತಿ ನಮ್ಮ ಈ ನಿರಂತರವೂ ಸಹ ತಪ್ಪದೆ ಬರುತ್ತಿದೆ. ಕಳೆದ ವರ್ಷ ದೀಪಾವಳಿಯಂದು ಮೊದಲ ಸಂಚಿಕೆಯೊಂದಿಗೆ ಪ್ರಾರಂಭವಾದ 'ನಿರಂತರ'ದ ಮೂರನೆಯ ಸಂಚಿಕೆಯನ್ನು ತಮ್ಮ ಮುಂದಿರಿಸಲು ತುಂಬಾ ಸಂತಸವಾಗುತ್ತದೆ. ಕೇವಲ ನಮ್ಮ ಗೆಳೆಯರ ಸಂಘಕ್ಕೆ (ಟಿ.ಪಿ ಬಳಗ) ಮಾತ್ರ ಸೀಮಿತವಾಗಿದ್ದ ನಮ್ಮ ಬರಹ, ಆಚಾರ ವಿಚಾರಗಳನ್ನು ಬಳಗದಿಂದಾಚೆ ಕೊಂಡೊಯ್ದು ಇತರರಿಗೆ ಪರಿಚಯಿಸಿ ಬಳಗದ ವೈಚಾರಿಕ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಅರುಣ ಹೆಚ್ಚಿಸಿದ್ದಾರೆ. ನಮ್ಮ ಬರಹಗಳು ಹೆಚ್ಚು ಹೆಚ್ಚು ಓದುಗರನ್ನು, ವಿಮರ್ಶಕರನ್ನು ತಲುಪುತ್ತಿರುವುದೇ ಒಂದು ಪುಳಕಿತ ಅನುಭವ ಹಾಗೂ ಸ್ಫೂರ್ತಿಯ ಸೆಲೆ.

ಹಿಂದಿನ ಸಂಚಿಕೆಗಳಿಗಿಂತ ಈ ಸಂಚಿಕೆಯನ್ನು ಭಿನ್ನವಾಗಿ ಹೊರತರಲು ಅದಕ್ಕೂ ಮುಖ್ಯವಾಗಿ ನಿರ್ಧಾರಿತ ದಿನದಂದೇ ಬಿಡುಗಡೆ ಮಾಡಲು ನಿರಂತರ-ಯುಗಾದಿ ತಂಡ ಪ್ರಯತ್ನ ಮಾಡಿದೆ. ಈ ದಿಸೆಯಲ್ಲಿ ತಮ್ಮ ಅಮೂಲ್ಯ ಸಮಯವನ್ನು ಈ ಸಂಚಿಕೆಗಾಗಿ ಮುಡಿಪಾಗಿಟ್ಟು ಕೊನೆಯ ಕ್ಷಣದವರೆಗೂ ನಿರಂತರವಾಗಿ ಕಾರ್ಯಮಗ್ನರಾಗಿದ್ದವರು ಶ್ರೀಮತಿ. ಶುಭಶ್ರೀ ಬೆಳಂದೂರ ಹಾಗೂ ಅರುಣ ಯಾದವಾಡ. ತಮ್ಮ ವಿಶೇಷ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದವರು ಶ್ರೀಮತಿ ಮೃಣಾಲಿನಿ ಗುಡಿ, ಶ್ರೀ ಪ್ರಕಾಶ ರಾಜಗೋಳಿ, ಶ್ರೀ ಗಿರೀಶ ಮೆಟಗುಡ್ಡಮಠ(ಸ್ವಾಮಿ), ಶ್ರೀ ಗಿರೀಶ ಬೆಳಂದೂರ (ಸದ್ದಾಂ) ಹಾಗೂ ಶ್ರೀಕಾಂತ ಎಸ್.ಕೆ(ಗುರು). ಈ ಬಾರಿಯ ವಿಶೇಷ ಆಹ್ವಾನಿತರಾಗಿ ಬರೆಯಲು **www.thatskannada.com** ನ ಕನ್ನಡದ ಅಂಕಣಕಾರ ಶ್ರೀ. ತಳಕು ಶ್ರೀನಿವಾಸ ಹಾಗೂ ಹಲವಾರು ಇಂಜಿನಿಯರಿಂಗ್ ಪುಸ್ತಕಗಳ ಲೇಖಕರಾಗಿರುವ ಪ್ರೊಫೆಸರ್ ಪುನಗಿನ ಅವರು ಒಪ್ಪಿದ್ದಾರೆ. ಇವರೆಲ್ಲರಿಗೂ ನನ್ನ ಹೃದಯಪೂರ್ವಕ ಧನ್ಯವಾದಗಳು.

ಅಲ್ಲದೇ ಈ ಸಂದರ್ಭದಲ್ಲಿ ನಮ್ಮ ಟಿಪಿಬಳಗ ಗೆಳೆಯರ ಗುಂಪಿನಲ್ಲಿ ನಡೆದ/ನಡೆಯಲಿರುವ ಕೆಲವು ಒಳ್ಳೆಯ ಸಂಗತಿಗಳನ್ನು ನಿಮ್ಮೊಡನೆ ಹಂಚಿಕೊಳ್ಳಲು ಬಹಳ ಸಂತೋಷವಾಗುತ್ತದೆ.

- ಇಬ್ಬರು ಹೊಸ ಮರಿ ತಾರೆಗಳ ಸೇರ್ಪಡೆಯಿಂದ ಟಿಪಿಬಳಗದ ಚಿಣ್ಣರ ಗುಂಪು ಮತ್ತಷ್ಟು ಸಮೃದ್ಧಿಗೊಂಡಿದೆ. ಇವರು ಯಾರೆಂದರೆ, ನಿರಂತರದ ಜನಕ ಮತ್ತು ಜೀವನಾಡಿಯಾಗಿರುವ ಅರುಣ ಮತ್ತು ತೇಜಸ್ವಿನಿಯವರ ಜೀವನದಲ್ಲಿ ಆಗಮಿಸಿದ ಹೊಸ ಕಂದ ಹಾಗು ಪುಟ್ಟ ಅನುಶ್ರೀಗೆ ದೊರಕಿದ ಮುದ್ದು ತಮ್ಮನ ಅನುಬಂಧ. ಇನ್ನೊಬ್ಬ ಪುಟ್ಟ ತಾರೆ ತಾಹಿರ ಸನದಿ ಮತ್ತು ನೂರ್‌ಜಹಾನರ ದಾಂಪತ್ಯಕ್ಕೆ ಹೊಸದೊಂದು ತಿರುವು ತಂದು ಕೊಟ್ಟ ಮುದ್ದು ಮಗು. ಇವರಿಬ್ಬರೂ ಕೇವಲ ಎರಡೇ ದಿನಗಳ ಅಂತರದಲ್ಲಿ ಈ ಬಳಗಕ್ಕೆ ಬೆಸೆದುಕೊಂಡಿದ್ದು ಇನ್ನೊಂದು ವಿಶೇಷ.

- ಟಿ ಪಿ ಬಳಗದ ಸ್ಯಾಪ್ ರಾಜ ಎಂದೇ ಪ್ರಖ್ಯಾತಿಯಾಗಿರುವ ಪ್ರಕಾಶ್ ರಾಜಗೋಳಿ ಮತ್ತು ದೀಪಾ ರಾಜಗೋಳಿ ಹಾಗು ಪ್ರಕಾಶ್‌ರ ತಂಗಿ ಮೀನಾಕ್ಷಿ ಮತ್ತು ಅನಿಲ್ ಅಂಗಡಿ ಅವರು ತಮ್ಮ ಜೀವನದ ಹೊಸ ಚಿಗುರಿನ ನಿರೀಕ್ಷೆಯಲ್ಲಿ, ಮಗುವಿನ ಮುದ್ದು ಮುಖವನ್ನು ಕಾಣುವ ತವಕದಿಂದ ಜೂನ್/ಜುಲೈ ತಿಂಗಳನ್ನು ಬಹಳ ಉತ್ಸುಕತೆಯಿಂದ ಕಾಯುತ್ತಿರುವ ದಂಪತಿಗಳು.

- ಟಿ ಪಿ ಬಳಗದ ತಾರೆಯರೆಲ್ಲರೂ ಬಹಳ ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ಅತೀ ಪ್ರಮುಖವಾದ ಸಂತೋಷದ ವಿಷಯ ನಮ್ಮೆಲ್ಲರ ಮಿತ್ರ ಗಂಗಾಧರ ವಾಲಿಯವರು ವೈವಾಹಿಕ ಜೀವನಕ್ಕೆ ಪಾದಾರ್ಪಣೆ ಮಾಡುತ್ತಿರುವುದು.

ವಾಲಿಯವರ ಬಾಳಿನಲ್ಲಿ 'ಅಶ್ವಿನಿ' ತಾರೆಯ ಉಗಮವಾಗಿದೆ. ವ್ಯಯನಾಮ ಸಂವತ್ಸರದ ಮೇ ತಿಂಗಳ ೧೮ರ ಶುಭ ಘಳಿಗೆಯಲ್ಲಿ ಹುಬ್ಬಳ್ಳಿಯಲ್ಲಿ ಪ್ರಾರಂಭವಾಗುವ ಈ ತಾರೆಯರ ವೈವಾಹಿಕ ಜೀವನ ಸುಖ, ಸಂತೋಷ, ಸಮೃದ್ಧಿಯಿಂದ ಕೂಡಿ ನಿರಂತರವಾಗಿ ಸಾಗುತ್ತಿರಲಿ ಎಂದು ಬಳಗದ ಎಲ್ಲಾ ತಾರೆಯರ ಪರವಾಗಿ ಶುಭ ಹಾರೈಕೆಗಳು.

- ಬಳಗದ ಸದಸ್ಯ ಆನಂದ ಯಾದವಾಡರ ಸ್ನೇಹಿತ ಪುರುಷೋತ್ತಮ್ ಅವರ ತಾಯಿಯ ಅನಾರೋಗ್ಯದ ನಿಮಿತ್ತ ಅವರ ವೈದ್ಯಕೀಯ ಶುಶ್ರೂಷೆಗಾಗಿ ಹಲವಾರು ಸ್ನೇಹಿತರಿಂದ ಹಣ ಸಹಾಯ ಮಾಡಲಾಗಿದೆ. ಇನ್ನೂ ಯಾರಾದರೂ ಸಹಾಯ ಮಾಡಬಯಸಿದರೆ ಹೆಚ್ಚಿನ ವಿವರಗಳನ್ನು ಈ ಸಂಚಿಕೆಯಲ್ಲಿ ಕೊಡಲಾಗಿದೆ.

ನಮ್ಮ ಬಳಗದ ಸದಸ್ಯರು ವೃತ್ತಿ ಮತ್ತು ವೈಯಕ್ತಿಕ ಜೀವನದ ಕಾರ್ಯಗಳಲ್ಲಿ ಸದಾ ನಿರತರಾಗಿದ್ದರೂ ತಮ್ಮ ಅತ್ಯಮೂಲ್ಯ ಸಮಯದಲ್ಲೇ ಸ್ವಲ್ಪ ಬಿಡುವು ಮಾಡಿಕೊಂಡು ಈ ಯುಗಾದಿ ವಿಶೇಷಾಂಕಕ್ಕೋಸ್ಕರ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಮುಂದೆಯೂ ಇದೇ ರೀತಿ ಅವರ ಸಹಕಾರವನ್ನು ಅಪೇಕ್ಷಿಸುತ್ತಾ, ಅವರ ದೈನಂದಿನ ಚಟುವಟಿಕೆಗಳ ಮೇಲೆ ನಿರಂತರದ ಒತ್ತಡವನ್ನು ಸ್ವಲ್ಪ ಕಡಿಮೆ ಮಾಡಿ ಅವರಿಗೂ ಸ್ವಲ್ಪ ಹೆಚ್ಚಿನ ಕಾಲಾವಕಾಶ ಕೊಟ್ಟು ಇನ್ನೂ ಉತ್ತಮವಾದ ಪ್ರತಿಕ್ರಿಯೆ/ಬರಹಗಳು ಹೊರಬರಲಿ ಎನ್ನುವ ಉದ್ದೇಶದಿಂದ ಹಾಗು ನಿರಂತರದ ಎರಡು ಸಂಚಿಕೆಗಳ ಮಧ್ಯೆ ಒಳ್ಳೆಯ ಅಂತರವಿರಲಿ ಎನ್ನುವ ಕಾರಣದಿಂದ ಇನ್ನು ಮುಂದೆ ವರ್ಷಕ್ಕೆ ಎರಡೇ ಬಾರಿ ಅಂದರೆ **ಯುಗಾದಿ** ಮತ್ತು **ದೀಪಾವಳಿ**ಯ ಸಂದರ್ಭದಲ್ಲಿ ಮಾತ್ರ ನಿರಂತರವನ್ನು ಹೊರತರಬೇಕೆಂದು ಯೋಚಿಸಿದ್ದೇವೆ. ಈ ವಿಚಾರದ ಬಗ್ಗೆ ನಿಮ್ಮಂತ ಸಹೃದಯ ಓದುಗರ ಅಭಿಪ್ರಾಯ ನಮಗೆ ಬಹಳ ಮುಖ್ಯ. ಆದ್ದರಿಂದ ಇದರ ಬಗ್ಗೆ ನಿಮ್ಮ ಅನಿಸಿಕೆಗಳೇನು ಎಂಬುದನ್ನು ನಮಗೆ ದಯವಿಟ್ಟು ಬರೆದು ತಿಳಿಸಿ.

ಅಂದುಕೊಂಡ ಸಮಯಕ್ಕೆ ಸರಿಯಾಗಿ ನಿಮ್ಮ ಕೈಗಳಿಗೆ ಈ ಸಂಚಿಕೆಯನ್ನು ಇಡುತ್ತಿದ್ದೇವೆ. ಇಗೋ ನಿಮ್ಮ ಮುಂದಿದೆ ಯುಗಾದಿಗಾಗಿ ನಾವು ಬಡಿಸುತ್ತಿರುವ ಈ ವಿಶೇಷ ನಿರಂತರ ರಸದೂಟ..! ತಾವೆಲ್ಲರೂ ಇದರ ರುಚಿ ನೋಡಿ ಎರಡು ಮಾತು ನಮಗೆ ಬರೆದು ತಿಳಿಸಿದರೆ, ನಮ್ಮ ತಂಡದ ಪಾಕ ಪ್ರವೀಣರು ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ಬದುಕು ಬಂಜರವಾಗದಿರಲಿ
ಬದುಕು ನಿಂತ ನೀರಾಗದಿರಲಿ
ನಿಂತ ನೀರಾದರೂ ಚಿಂತೆಯಿಲ್ಲ
ಬಿದ್ದಾಗ ಒಂದು ಕಲ್ಲು, ಕೊಂಚ ಅಲೆಗಳೇಳಲಿ
ಕ್ರಿಯಾ ಶೀಲತೆಯ ಚಕ್ರ ತಿರುಗುತಿರಲಿ ಓಡುತಿರಲಿ
ಬದುಕು ನಿಂತ ನೀರಾಗದಿರಲಿ
ನೀರು ಹರಿಯುತಿರಲಿ .. ಚಕ್ರ ತಿರುಗುತಿರಲಿ

ಎಲ್ಲರಿಗೂ ಯುಗಾದಿಯ ಹಾರ್ದಿಕ ಶುಭಾಶಯಗಳು.

**ಬಸವರಾಜ ಯಾದವಾಡ**
ಸಂಪಾದಕ
ನಿರಂತರ, ಯುಗಾದಿ ವಿಶೇಷಾಂಕ.
೨೯ನೇ ಮಾರ್ಚ್ ೨೦೦೬

## ಬಂತಿದೋ ಯುಗಾದಿ.. ಮತ್ತೊಂದು ಯುಗಾದಿ – ಶ್ರೀ ತಳಕು ಶ್ರೀನಿವಾಸ, ಮುಂಬೈ



Thatskannada.com ಗೆ ಅಂಕಣಕಾರರಾಗಿರುವ **ತಳುಕು ಶ್ರೀನಿವಾಸ್** ಕನ್ನಡದ ಒಬ್ಬ ಉತ್ಸಾಹಿ ಬರಹಗಾರರು. ಅವರ ಪರಿಚಯವನ್ನ ಅವರ ಮಾತುಗಳಲ್ಲೇ ಕೇಳಿ.

ನನ್ನ ಮೂಲ ತಳುಕಿನ ವಂಶ. ಮನೆಯ ಮಾತು ತೆಲುಗು. ನನ್ನ ಮೊದಲನೆಯ ದೊಡ್ಡಪ್ಪನವರು ಕನ್ನಡದ ಮೊದಲ ಪ್ರೊಫೆಸರ್ ಆಗಿದ್ದ **ತಳುಕಿನ ವೆಂಕಣ್ಣಯ್ಯನವರು**. ಎರಡನೆಯ ದೊಡ್ಡಪ್ಪನವರಾಗಿದ್ದ ರಾಮಸ್ವಾಮಯ್ಯನವರ ಎರಡನೆಯ ಮಗ **ತ.ರಾ.ಸುಬ್ಬರಾಯರು** ನನಗೆ ಅಣ್ಣನ ಸಮಾನ. ಇನ್ನೊಬ್ಬ ದೊಡ್ಡಪ್ಪನವರಾದ **ತ.ಸು.ಶಾಮರಾಯರೂ** ಕನ್ನಡದ ಪ್ರೊಫೆಸರ್ ಆಗಿದ್ದವರು. ತಂದೆಯ ಸೋದರಮಾವನವರಾಗಿದ್ದ ಪ್ರೊಫೆಸರ್ **ಕೆ.ವೆಂಕಟರಾಮಪ್ಪನವರು** ಇವರಿಗೆ ತಾತನವರು ಹಾಗೂ ತಂದೆಯ ತಂಗಿಯವರಲ್ಲೊಬ್ಬರಾದ **ಶ್ರೀಮತಿ ವಿಶಾಲಾಕ್ಷಿ ದಕ್ಷಿಣಾಮೂರ್ತಿ** ನನ್ನ ಸೋದರತ್ತೆ. ಸಾಕಲ್ವೇ ನನ್ನ ಪ್ರವರ. ಇನ್ನು ನನ್ನ ಸರದಿ. ನನ್ನ ಹೆಸರು ತಳುಕು ವಿಶ್ವೇಶ್ವರಯ್ಯ ಶ್ರೀನಿವಾಸ ಎಂದು.

1982ರಲ್ಲಿ ಬೆಂಗಳೂರಿನ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ನೋಟು ನಾಣ್ಯ ಪರೀಕ್ಷಕನಾಗಿ ಸೇರಿದೆ.ಸದ್ಯದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿ ಮುಂಬಯಿಯಲ್ಲಿ ಕೆಲಸ ಮಾಡುತ್ತಿರುವೆ.

ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ

ಹೊಸ ವರುಷದಿ ಹೊಸ ಹರುಷವ ಹೊಸತು ಹೊಸತು ತರುತಿದೆ

ಪ್ರತಿ ವರುಷ ಯುಗಾದಿ ಹಬ್ಬದ ದಿನ ರೇಡಿಯೋ ಮತ್ತು ಟಿವಿಗಳಲ್ಲಿ ಈ ಹಾಡು ಪ್ರಸಾರವಾಗುತ್ತದೆ. ಎಷ್ಟೇ ಬಾರಿ ಕೇಳಿದರೂ ತೃಪ್ತಿಯಾಗದೇ ಮತ್ತೆ ಮತ್ತೆ ಕೇಳಬೇಕೆನಿಸುವ ಸಾಹಿತ್ಯ. ದ.ರಾ.ಬೇಂದ್ರೆಯವರು ಬರೆದ ಈ ಗೀತೆಯನ್ನು ಬೆಳ್ಳಿಮೋಡ ಚಲನಚಿತ್ರಕ್ಕೆ ಅಳವಡಿಸಿಕೊಂಡಿದ್ದಾರೆ. ಹಾಡಿರುವವರು ಎಸ್. ಜಾನಕಿ.

ಮಾರ್ಗಶೀರ್ಷ ಮಾಸದ ಹೋಳಿ ಹುಣ್ಣಿಮೆಯಾದ 15 ದಿನಗಳಿಗೆ ಬರುವುದು ಯುಗಾದಿ. ಯುಗ ಎಂದರೆ ಅದೊಂದು ಕಾಲಗಣನೆ. ತ್ರೇತಾಯುಗ, ಕೃತಯುಗ, ದ್ವಾಪರಯುಗ, ಕಲಿಯುಗಗಳಿಗೆ ಯುಗವೆಂದರೆ 5000ಕ್ಕೂ ಹೆಚ್ಚಿನ ವರುಷಗಳಂತೆ. ಆದರೆ ಇಲ್ಲಿ ಹಾಗಲ್ಲ. ಒಂದು ವರುಷ ಕಳೆದರೆ ಒಂದು ಯುಗವಾದಂತೆ ಎಂದು ಗಣಿಸುವರು.

ಚಾಂದ್ರಮಾನ ಪಂಚಾಂಗ ರೀತ್ಯಾ ಚೈತ್ರ ಮಾಸದ ಶುದ್ಧ ಪಾಡ್ಯದ ದಿನದಂದು ಬ್ರಹ್ಮ ಈ ಲೋಕವನ್ನು ಸೃಷ್ಟಿಸಿದ ಎಂಬ ಪ್ರತೀತಿ ಇದೆ. ಇಂದೇ ಸೂರ್ಯನು ತನ್ನ ಮೊದಲ ಕಿರಣವನ್ನು ಭೂಮಿಯ ಮೇಲೆ ಹರಿಸಿದ ಎಂಬ ಮಾತೂ ಇದೆ. ಇವೆಲ್ಲವೂ ಇಂದು ನಂಬಲಶಕ್ಯ. ಆದರೂ ಮುಂದಿನ ಪೀಳಿಗೆಗೆ ಇದರ ಬಗ್ಗೆ ಸ್ವಲ್ಪವಾದರೂ ತಿಳಿದಿರಲಿ ಎಂದು ಹೇಳಬೇಕಿದೆ. ಇಂದಿನ ದಿನದಿಂದ ವಸಂತ ಮಾಸ ಪ್ರಾರಂಭವಾಗಿ ತರು ಲತೆಗಳು ಚಿಗುರುತ್ತವೆ. ಹೊಸ ಹೊಸ ಹೂಗಳು ಕಂಪನ್ನು ಬೀರುತ್ತವೆ. ಹಳೆಯ ತರಗೆಲೆಗಳು ಉದುರಿ ಗಿಡ ಮರಗಳು ಮತ್ತೆ ಮರಳಿ ಹೊಸ ಚೈತನ್ಯ ಪಡೆಯುತ್ತವೆ. ಜೀವನದಲ್ಲಿ ಒಂದು ವರುಷದಲ್ಲಿ ಕಂಡ ಸುಖ ದು:ಖಗಳನ್ನು ಮರೆತು ಹೊಸ ಬಾಳನ್ನು ನೋಟ್‌ಬುಕ್ಕಿನ ಹೊಸ ಪುಟದಂತೆ ಪ್ರಾರಂಭಿಸುವ ಸೂಚನೆಯ ಈ ದಿನವನ್ನು ಹಬ್ಬವನ್ನಾಗಿ ಆಚರಿಸುತ್ತಾರೆ.

ಈ ಹಬ್ಬವನ್ನು ಹೆಚ್ಚಾಗಿ ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಆಚರಿಸುವರು. ಆಂಧ್ರ ಮತ್ತು ಕರ್ನಾಟಕಗಳಲ್ಲಿ ಇದು ಯುಗಾದಿಯಾದರೆ, ಮಹಾರಾಷ್ಟ್ರದಲ್ಲಿ ಗುಡಿಪಡ್ವ. ಪಾಡ್ಯಮಿ ದಿವಸ ಗುಡಿಯನ್ನು ಏರಿಸುವುದೇ ಗುಡಿಪಡ್ವ – ಒಂದು ಕೋಲಿಗೆ ವಸ್ತ್ರವನ್ನು ಕಟ್ಟಿ, ಹೂವಿನ ಹಾರವನ್ನು ಏರಿಸಿ 'ಗುಡಿ' ಎಂದು ಮೂಲೆಯಲ್ಲಿ ಇರಿಸುವರು. ಇದು ಹೊಸ ವರುಷದ ಆಗಮನಕ್ಕೆ ಬಾವುಟವನ್ನು ಹಾರಿಸುವುದರ ಸಂಕೇತ. ಆಂಧ್ರ ಪ್ರದೇಶದಲ್ಲಿ ಹುಣಿಸೇಹಣ್ಣು, ಬೆಲ್ಲ,

ಮಾವಿನಕಾಯಿ, ಉಪ್ಪು, ಮೆಣಸು, ಬೇವು ಇತ್ಯಾದಿಗಳ ಮಿಶ್ರಣ ಮಾಡಿ ಯುಗಾದಿ ಪಚ್ಚಡಿ ಎಂಬ ಹೆಸರಿನ ಪದಾರ್ಥವನ್ನು ಸೇವಿಸುವರು. ಅಂದು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಇರುವುದು.

ತಳಿರು ತೋರಣವನ್ನು (ಎಳೆಯ ಹಸಿರು ಮಾವಿನೆಲೆ ಮಧ್ಯೆ ಮಧ್ಯೆ ಬೇವಿನ ಎಲೆ ಹೂಗಳ ಗೊಂಚಲು) ಮನೆಗಳ ಮುಂಬಾಗಿಲಿಗೆ ಮತ್ತು ದೇವರ ಮನೆಯ ಬಾಗಿಲಿಗೆ ತಳಿರು ತೋರಣವಾಗಿ ಕಟ್ಟುವರು. ಮನೆಯ ಮುಂದೆ ಬಣ್ಣ ಬಣ್ಣದ ರಂಗೋಲಿಯನ್ನಿಡುವರು. ಮುಂಜಾನೆ ಬೇಗನೆದ್ದು ಅಭ್ಯಂಜನ (ಎಣ್ಣೆ ಸೀಗೇಕಾಯಿಯಿಂದ ತಲೆಯನ್ನು ತೊಳೆದುಕೊಳ್ಳುವುದು) ಮಾಡಿ ಪುಣ್ಯಾಹ ಮಂತ್ರಗಳನ್ನು ಉಚ್ಚರಿಸಿ ಮಾವಿನೆಲೆಯಿಂದ ಮನೆಯ ಎಲ್ಲ ಕಡೆ ಕಳಶದ ನೀರನ್ನು ಸಿಂಪಡಿಸುವರು. ನಂತರ ಹೊಸ ಬಟ್ಟೆ ಧರಿಸಿ ಪಂಚಾಂಗವನ್ನು ಮನೆಯ ಹಿರಿಯರು ಓದುವರು ಮತ್ತೆಲ್ಲರೂ ಅದನ್ನು ಕೇಳುವರು.

ಪಂಚಾಂಗ ಹಿಂದೂ ಸಂಪ್ರದಾಯದ ಕ್ಯಾಲೆಂಡರ್. ಇದು ದಿನಸೂಚಿಯಷ್ಟೆ ಅಲ್ಲದೇ ಆ ವರುಷದಲ್ಲಿ ಮಳೆ ಬೆಳೆ ಹೇಗಿದೆ, ರಾಶಿಫಲ, ಮದುವೆ ಉಪನಯನಗಳಿಗೆ ಒಳ್ಳೆಯ ಮುಹೂರ್ತಗಳು, ಒಟ್ಟಾರೆ ಜನಜೀವನದ ಸ್ಥಿತಿಯನ್ನು ಸೂಚಿಸಿರುವುದು. ಅಂದು ಹಿರಿಯ ಕಿರಿಯರೆಲ್ಲರೂ ಹೊಸ ಬಟ್ಟೆಗಳನ್ನು ಧರಿಸಿ ಸಂತೋಷದಿಂದ ಹಾಡಿ ನಲಿವರು. ಅಂದಿನ ವಿಶೇಷ ತಿನಿಸು – ಒಬ್ಬಟ್ಟು ಅಥವಾ ಹೋಳಿಗೆ. ತೆಂಗಿನಕಾಯಿ ಹೂರಣದಲ್ಲಿ ಮಾಡಿದ ಹೋಳಿಗೆ ಬಹಳ ದಿನ ಇರದೇ ಕೆಡುವುದೆಂದು ಬೇಳೆಯ ಹೂರಣಲ್ಲಿ ಮಾಡುವರು. ಇದನ್ನೇ ಮರಾಠಿಯಲ್ಲಿ ಪೂರಣಪೋಳಿ ಎಂದು ಕರೆವರು. ಸಂಜೆಯ ವೇಳೆಯಲ್ಲಿ ಗುರು ಹಿರಿಯರ ಮನೆಗಳಿಗೆ ಹೋಗಿ ಅವರಿಗೆ ಕಾಲುಮುಟ್ಟಿ ನಮಸ್ಕರಿಸಿ ಅವರ ಆಶೀರ್ವಾದ ಪಡೆವರು. ಈಗೀಗ ಟಿವಿಯಲ್ಲಿ ಕವಿಗೋಷ್ಠಿಯನ್ನೂ ಪ್ರಸಾರ ಮಾಡುವರು.

ಇನ್ನೊಂದು ವಿಶೇಷವೆಂದರೆ ಇದೇ ಸಮಯದಲ್ಲಿ ಮಕ್ಕಳಿಗೆ ಪರೀಕ್ಷೆಗಳಿರುವುದರಿಂದ, ಈ ನೆಪದಲ್ಲಾದರೂ ಹಿರಿಯರಿಗೆ ಬಗ್ಗಿ ನಮಸ್ಕರಿಸಿ ಅವರಿಂದ ಒಳ್ಳೆಯದಾಗಲೆಂಬ ಮಾತುಗಳನ್ನು ಸ್ವೀಕರಿಸುವ ಸಂದರ್ಭ ಒದಗಿಬರುವುದು. ಮನೆಯ ಹೆಂಗಸರು ಹೊಸದಾಗಿ ಬರುವ ಮಾವಿನಕಾಯಿಯಿಂದ ಉಪ್ಪಿನಕಾಯಿಯನ್ನು ಮಾಡುವರು.

ಎಲ್ಲರ ಬಾಳಲ್ಲೂ ಸುಖ–ದು:ಖ, ಒಳ್ಳೆಯದು–ಕೆಟ್ಟದ್ದು, ಕರ್ಮ–ಫಲ ಇದ್ದೇ ಇರುವುದು. ಇದೊಂದು ಬ್ಯಾಲೆನ್ಸ್ ಶೀಟು ಇದ್ದ ಹಾಗೆ. ಎಷ್ಟು ಸ್ವೀಕರಿಸುವರೋ ಅಷ್ಟನ್ನೇ ಮರಳಿ ಕೊಡಬೇಕು, ಕೊನೆಯಲ್ಲಿ ಬರುವಾಗ ಏನೂ ತರದೆ ಬಂದಂತೆ ಹೋಗುವುದು. ಅದಕ್ಕೇ ಇಂದಿನ ದಿನ ಸುಖದ ಸಂಕೇತವಾದ ಬೆಲ್ಲವನ್ನೂ ಮತ್ತು ಕಷ್ಟದ ಸಂಕೇತವಾದ ಬೇವನ್ನೂ ಸಮನಾಗಿ ಸ್ವೀಕರಿಸುವರು. ನಿಜವಾಗಿಯೂ ಬೇವಿನಲ್ಲಿ ಇರುವ ಶಕ್ತಿ ಬೆಲ್ಲದಲ್ಲಿಲ್ಲ. ತಿಂದ ಮೇಲೆ ಬೆಲ್ಲವು ಹೊಟ್ಟೆಯೊಳಗೆ ಉರಿಯ ಅಥವಾ ಶಾಖವನ್ನು ಉಂಟು ಮಾಡಿದರೆ ಬೇವು ಆ ಉರಿಯ ಶಮನಕಾರಿ.

ಬೇವು ಬೆಲ್ಲದ ಮಿಶ್ರಣವನ್ನು ತಿನ್ನುವಾಗ ಹೇಳುವ ಒಂದು ಶ್ಲೋಕ ಹೀಗಿದೆ:
***ಶತಾಯು: ವಜ್ರದೇಹಾಯ ಸರ್ವಸಂಪತ್ಕರಾಯಚ।***
***ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ॥***
ಅದರರ್ಥ ಹೀಗಿದೆ – ನೂರು ವರುಷಗಳ ಆಯುಷ್ಯೆ, ಸದೃಢ ಆರೋಗ್ಯ, ಸಕಲ ಸಂಪತ್ತುಗಳ ಪ್ರಾಪ್ತಿಗಾಗಿಯೂ, ಸಕಲ ಅರಿಷ್ಟ ನಿವಾರಣೆಗಾಗಿಯೂ ಬೇವು ಬೆಲ್ಲ ಸೇವನೆ ಮಾಡುತ್ತೇನೆ.

ಈ ಶುಭದಿನದಂದು ನಿರಂತರ ಗುಂಪಿನ ಎಲ್ಲ ಗೆಳೆಯ ಗೆಳತಿಯರಿಗೂ, ಮಕ್ಕಳಿಗೂ ಸುಖ ದು:ಖಗಳನ್ನು ಸಮನಾಗಿ ಸ್ವೀಕರಿಸುವ ಶಕ್ತಿಯನ್ನು ಕೊಡಲೆಂದು ನಾನು ಆ ಸರ್ವಶಕ್ತನಲ್ಲಿ ಬೇಡುವೆ.

## ಕ್ಷಣ ಕ್ಷಣ – ಪ್ರಕಾಶ ಸಿ ರಾಜಗೋಳಿ. ಬೆಂಗಳೂರು



ಸದ್ಯ ಬೆಂಗಳೂರಿನ ಬ್ರಿಸಲಕಾನ್ ಇಂಡಿಯಾ ಸಂಸ್ಥೆಯಲ್ಲಿ ಎಸ್.ಎ.ಪಿ ಕನ್ಸಲ್ಟಂಟ್ ಆಗಿ ಕಾರ್ಯ ನಿರ್ವಹಿಸುತ್ತಿರುವ ನಮ್ಮ **ಸ್ಯಾಪ್ ರಾಜ** ಕನ್ನಡದಲ್ಲಿ ಲೇಖನ ಬರೆಯುವ ಪ್ರಮುಖ ಹವ್ಯಾಸ ಹೊಂದಿದ್ದಾರೆ. ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟಗೊಂಡಿವೆಯಲ್ಲದೇ ಕೆಲ ಕಾರ್ಯಕ್ರಮಗಳು ಆಕಾಶವಾಣಿ ಧಾರವಾಡ ಮತ್ತು ಬೆಂಗಳೂರು ಕೇಂದ್ರಗಳಿಂದ ಪ್ರಸಾರಗೊಂಡಿವೆ. ವೈವಾಹಿಕ ಜೀವನಕ್ಕೆ ಕಾಲಿಟ್ಟಿರುವ ರಾಜ್‌ಗೆ ಈಗ ಏಕಕಾಲದಲ್ಲಿ ತಂದೆಯಾಗುವ ಹಾಗೂ ಮಾಮಾನ ಪಟ್ಟಕ್ಕೇರುವ ಇಮ್ಮಡಿ ಸಂಭ್ರಮ.

ಪುರಾಣ ಪ್ರಸಂಗದಲ್ಲಿ ಸಮುದ್ರಮಥನ ನಡೆಯುವಾಗ ದೇವಾನುದೇವತೆಗಳೆಲ್ಲ ಅಮೃತಕ್ಕಾಗಿ ಹಾತೊರೆದರು... ಸೇವನೆ ಮಾಡಿದರು.... ಅಮರತ್ವ ಪಡೆದರು. ಆದರೆ ಸಮುದ್ರಮಥನದ ಬೈ ಪ್ರಾಡಕ್ಟ್ ಆದಂತಹ ಕಾರ್ಕೋಟಕ ವಿಷವನ್ನು ಏನು ಮಾಡುವದು ಎಂದು ದೇವಾನುದೇವತೆಗಳೆಲ್ಲ ಚಿಂತಾಕ್ರಾಂತರಾದ ಆ ಕ್ಷಣದಲ್ಲಿ ಭೋಳೆ ಶಂಕರ ಆ ವಿಷವನ್ನು ಆಪೋಷಣ ಮಾಡಲು ರೇಡಿಯಾಗದೇ ಇದ್ದಿದ್ದರೆsss ಈ ಲೇಖನ ಬರೆಯಲು ನಾನಿರುತ್ತಿರಲಿಲ್ಲ!! ಓದಲು ನೀವಿರುತ್ತಿರಲಿಲ್ಲ!!! ಅಲ್ಲವೇ?

ಪ್ರಥಮವಂದ್ಯ ಗಣೇಶನ ಬುದ್ಧಿ ಸಾಮರ್ಥ್ಯವನ್ನು ಜಗತ್ತಿಗೆ ಸಾರಲು ಪರಮೇಶ್ವರ ಪಾರ್ವತಿಯರು ತಮ್ಮ ಮಕ್ಕಳಿಬ್ಬರಿಗೆ ವಿಶ್ವ ಪ್ರದಕ್ಷಿಣೆಯ ಸವಾಲು ಹಾಕಿದ ಆ ಕ್ಷಣದಲ್ಲಿ ಗಣಪತಿ ತನ್ನ ವಾಹನವಾದ ಇಲಿಯ ಇತಿಮಿತಿಗಳನ್ನರಿತು ಸರ್ವೇಶ್ವರ ಶಿವನ ಮತ್ತು ಆದಿಶಕ್ತಿ ಪಾರ್ವತಿಯರ ಸುತ್ತ ಸುತ್ತುವ ನಿರ್ಧಾರ ತೆಗೆದುಕೊಳ್ಳದೇ ಇದ್ದಿದ್ದರೆsss ಅಂದಿನಿಂದ ಇಂದಿನವರೆಗೆ ಗಣೇಶ ಬುದ್ಧಿಪ್ರದಾಯಕ ಎಂದೆನಿಸಿಕೊಳ್ಳುತ್ತಿರಲಿಲ್ಲವೇನೋ...

ರಾಮಾಯಣದಲ್ಲಿ ಸೀತೆಯು ತನಗೆ ಬಂಗಾರದ ಜಿಂಕೆ ಬೇಕು ಎಂದು ಆ ಕ್ಷಣದಲ್ಲಿ ಹಠ ಹಿಡಿಯದೇ ಇದ್ದಿದ್ದರೆsss ಮತ್ತು ಮೈದುನ ಲಕ್ಷ್ಮಣ ಹಾಕಿದ "ಲಕ್ಷ್ಮಣ ರೇಖೆ"ಯನ್ನು ಆ ಕ್ಷಣದಲ್ಲಿ ದಾಟದೇ ಇದ್ದಿದ್ದರೆ ರಾಮಾಯಣ ಯುದ್ಧವೇ ಆಗುತ್ತಿರಲಿಲ್ಲವೇನೋ.

ಮಹಾಭಾರತದಲ್ಲಿ ಮಯ ನಿರ್ಮಿತ ಅರಮನೆಯ ಚಮತ್ಕಾರಗಳಿಗೆ ಬಲಿಯಾಗಿ ದಾರಿ ಎಂದು ತಿಳಿದು ನೀರಲ್ಲಿ ಬಿದ್ದ ದುರ್ಯೋಧನನನ್ನು ನೋಡಿ ದ್ರೌಪದಿಯು ನಕ್ಕ ಕ್ಷಣದಲ್ಲಿ ಆತ ಅದು ತನ್ನ ಅತ್ತಿಗೆ ನಕ್ಕಿದ್ದಾಳೆ ಬಿಡು ಎಂದು ದೊಡ್ಡ ಮನಸ್ಸು ಮಾಡಿದ್ದರೆsss.... ಇಡೀ ಮಹಾಭಾರತವೇ ನಡೆಯುತ್ತಿರಲಿಲ್ಲವೇನೋ.

ತನ್ನ ಸೋದರ ಸಂಬಂಧಿಗಳೊಂದಿಗೆ ಹೋರಾಡಲು ಅರ್ಜುನ ಕಪಟನಾಟಕ ಸೂತ್ರಧಾರಿ ಕೃಷ್ಣನ ಒಂದೇ ಮಾತಿಗೆ ತಕ್ಷಣವೇ ಒಪ್ಪಿ ಬಿಟ್ಟಿದ್ದರೆsss ಹದಿನೆಂಟು ಅಧ್ಯಾಯಗಳ ಭಗವದ್ಗೀತೆಯ ರಚನೆಯೇ ಆಗುತ್ತಿರಲಿಲ್ಲವೇನೋ.

ಸಿಟ್ಟಿಗೆ ಹೆಸರಾದ ಜಮದಗ್ನಿ ಋಷಿಯು ತನ್ನ ಅರ್ಧಾಂಗಿ ಆದಿಶಕ್ತಿ ರೇಣುಕೆಯ ಮೇಲೆ ಕೋಪಗೊಂಡು ಆ ಕ್ಷಣದಲ್ಲಿ ಪರಶುರಾಮನಿಗೆ ಅವಳ ಶಿರಚ್ಛೇದದ ಆಜ್ಞೆ ನೀಡದೇ ಇದ್ದಿದ್ದರೆsss......... ಪರಶುರಾಮನ ಪಿತೃ ವಾಕ್ಯ ಪರಿಪಾಲನಾ ಮತ್ತು ಮೃತ ತಾಯಿಯನ್ನು ಮತ್ತೆ ಜೀವಂತಗೊಳಿಸಿಕೊಂಡ ನಿದರ್ಶನ ನಮ್ಮ ಮುಂದೆ ಇರುತ್ತಿರಲಿಲ್ಲವೇನೋ.

12 ನೆಯ ಶತಮಾನದಲ್ಲಿ ನಡೆದ ಘಟನೆ: ನಗರ ವೀಕ್ಷಣೆಗೆ ಬಂದ ಮಂತ್ರಿ ಬಸವಣ್ಣನಿಗೆ ಅಂತ್ಯಜ ಡೋಹರ ಕಕ್ಕಯ್ಯ ಶರಣು ಎಂದಿದ್ದಕ್ಕೆ ಪ್ರತಿಯಾಗಿ ಬಸವಣ್ಣ ಶರಣು ಶರಣಾರ್ಥಿ ಎಂದಾಗ ಆ ಕ್ಷಣದಲ್ಲಿ ಆ ದಂಪತಿಗಳು ಮಾಡಿದ ಕಠೋರ ನಿರ್ಧಾರ......... ಮತ್ತು ತನ್ಮೂಲಕ ಅವರ ದೇಹದ ಚರ್ಮದಿಂದ ತಯಾರಾದ ಪಾದುಕೆಗಳನ್ನು ಬಸವಣ್ಣ ಅವರ ಭಕ್ತಿಗೆ

ಮೆಚ್ಚಿ ಆ ಕ್ಷಣದಲ್ಲಿ ತನ್ನ ತಲೆಯ ಮೇಲೆ ಇರಿಸಿಕೊಳ್ಳದೇ ಇದ್ದಿದ್ದರೆsss ಅಂತಹುದೊಂದು ಮಹಾನ್ ಘಟನೆಗೆ ಇತಿಹಾಸ ಸಾಕ್ಷಿಯಾಗುತ್ತಿರಲಿಲ್ಲವೇನೋ...

ಕನ್ನಡ ನಾಡಿನ ಕೆಚ್ಚೆದೆಯ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ತನ್ನ ಪತಿಯ ಮರಣಾನಂತರ ವಾರಸು ಕಾಯಿದೆಯಡಿ ಕುಟಿಲ ಖ್ಯಾತಿಯ ಆಂಗ್ಲರು ರಾಜ್ಯ ಕಬಳಿಸಲು ಹೊಂಚಿಸಿದ ಆ ಕ್ಷಣದಲ್ಲಿ ಅವರ ಬೆದರಿಕೆಗಳಿಗೆ ಜಗ್ಗದೆ ಯುದ್ಧಕ್ಕೆ ಅಣಿಯಾಗದೆ ಇದ್ದಿದ್ದರೆsss......... ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕನ್ನಡ ನಾಡು ಸಾಕ್ಷಿಯಾಗುತ್ತಿರಲಿಲ್ಲವೇನೋ (ಆದರೆ ವಿಪರ್ಯಾಸ ನೋಡಿ ಕಿತ್ತೂರು ಯುಧ್ಧವಾಗಿ(1824) ಎಷ್ಟೋ ವರ್ಷಗಳ ನಂತರ ಕ್ರಿ.ಶ.1857ರಲ್ಲಿ ನಡೆದ ಸಿಪಾಯಿ ದಂಗೆಯನ್ನು ನಾವೆಲ್ಲಾ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಮಾನ್ಯ ಮಾಡಿದ್ದೇವೆ.)

ಅಮೇರಿಕೆಯ ಚಿಕ್ಯಾಗೋದಲ್ಲಿ ನಡೆದ ಜಾಗತಿಕ ಧರ್ಮ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಸ್ವಾಮಿ ವಿವೇಕಾನಂದ ನೆರೆದ ಜನರನ್ನು ಸಂಬೋಧಿಸಲು "ಅಕ್ಕ ತಂಗಿಯರೆ ಅಣ್ಣ ತಮ್ಮಂದಿರೆ" ಎಂಬುದಾಗಿ ಬಳಸದೆ ಇದ್ದಿದ್ದರೆsss ಅವರ ಮಹತ್ವ ವಿದೇಶೀಯರಿಗೆ ಗೊತ್ತಾಗುತ್ತಿರಲಿಲ್ಲವೇನೋ....

ಭಾರತದ ಅಣುಶಕ್ತಿ ಸಾಮರ್ಥ್ಯವನ್ನು ಜಗತ್ತಿಗೆ ತಿಳಿಯಪಡಿಸಿದ ಪೋಖ್ರಾನ್ ಅಣು ಪರೀಕ್ಷೆಯ ಬಗ್ಗೆ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅಚಲವಾದ ನಿರ್ಧಾರವನ್ನು ಆ ಕ್ಷಣದಲ್ಲಿ ತೆಗೆದುಕೊಳ್ಳದೇ ಇದ್ದಿದ್ದರೆsss ಜಗತ್ತಿನ ದೊಡ್ಡಣ್ಣ ಅಮೇರಿಕಾಗೆ ನಮ್ಮ ಶಕ್ತಿ ಸಾಮರ್ಥ್ಯ ತಿಳಿಯುತ್ತಿರಲಿಲ್ಲವೇನೋ.....

ಆಯಾಯಾ ಕ್ಷಣದ ನಿರ್ಧಾರಗಳು ಯಾರನ್ನೇ ಆದರೂ ಎಂಥಾ ಇಕ್ಕಟ್ಟಿಗೆ, ಪೇಚಿಗೆ, ಆಪತ್ತಿಗೆ, ಸಂಭ್ರಮಕ್ಕೆ, ದುಃಖಕ್ಕೆ, ಸಂತಸಕ್ಕೆ ಸಿಕ್ಕಿಸುತ್ತವೆ ಹೇಳಲು ಬಾರದು.

ರಾತ್ರಿ ಊಟವಾದ ಮೇಲೆ ಏಕಾಂತದಲ್ಲಿ ಹೆಂಡತಿ ಗಂಡನ ಮನಸೆಳೆದು ತನ್ನ ರೇಶ್ಮೆ ಸೀರೆ, ಬಂಗಾರದ ಒಡವೆ, ವಜ್ರದ ಓಲೆ ಇತ್ಯಾದಿಗಳಿಗೆ ಬೇಡಿಕೆ ಸಲ್ಲಿಸಿದಾಗ ಆ ಕ್ಷಣದಲ್ಲಿ ಗಂಡ ಎನ್ನುವ ಪ್ರಾಣಿ ಎಚ್ಚೆತ್ತುಕೊಂಡರೆ ಸರಿ ಇಲ್ಲವಾದರೆ ಬೇಡಿಕೆ ಪೂರೈಸಲು ಹರಸಾಹಸ ಮಾಡುವದನ್ನು ನಾವೆಲ್ಲ ಅನುಭವಿಸಿದ್ದೇವೆ ಅಥವಾ ಅನುಭವಿಕರಿಂದ ತಿಳಿದುಕೊಂಡಿದ್ದೇವೆ.

ಪ್ರಿಯಕರನ ಮನೋಸ್ಥಿತಿ ಅರಿಯದೆ ಹಿಂದಿನಿಂದ ಬಂದು ತನ್ನ ಕೈಯಿಂದ ಅವನ ಕಣ್ಣು ಮುಚ್ಚಿ "ಪೆಹಚಾನ್ ಕೌನ್" ಎಂದ ಪ್ರಿಯತಮೆಗೆ ಆತ್ಮೀಯ ಇಲ್ಲವೆ ಸಿಡಿಮಿಡಿ ಮಾತುಗಳು ಸಿಗಬಹುದು. ಅದು ಆ ಕ್ಷಣ ಪ್ರಿಯಕರ ಪ್ರತಿಕ್ರಿಯಿಸುವ ರೀತಿಯ ಮೇಲೆ ನಿರ್ಧಾರಿತವಾಗುತ್ತದೆ.

ಹೊಟ್ಟೆ ಹಸಿದು ತಟ್ಟೆಯಲ್ಲಿರುವದನ್ನು ಗಬಗಬನೆ ತಿನ್ನುವಾಗ ತುತ್ತಿನಲ್ಲಿ ಬರುವ ಕಲ್ಲು,
ಬೇಡವಾದ ಅತಿಥಿಯಂತೆ ಬರುವ ಕ್ರೆಡಿಟ್ ಕಾರ್ಡಿನವರ, ಬ್ಯಾಂಕಿನವರ ಮೊಬೈಲ್ ಕಾಲ್ಲು,
ಇಂಪಾರ್ಟಂಟ್ ನ್ಯೂಸ್ ನೋಡುತ್ತಿರುವಾಗ ಮನೆಯ ಸದಸ್ಯರೊಬ್ಬರು ಬದಲಾಯಿಸುವ ಟಿವಿ ಚಾನೆಲ್ಲು,
ಸೇಲ್ಸಮನ್ನುಗಳು ಬಾರಿಸುವ ಮನೆಯ ಕಾಲ್ ಬೆಲ್ಲು,
ಬಾಗಿಲು ತೆಗೆದ ಹೆಂಡತಿಯ ಮುಖದ ಮೇಲಿನ ಡಲ್ಲು,
ಕೋರಿಯರ್ ಇಲ್ಲವೆ ಪೋಸ್ಟಿನಲ್ಲಿ ಬರುವ ಕ್ರೆಡಿಟ್ ಕಾರ್ಡ್ ಬಿಲ್ಲು,
ಅತಿ ಮುಖ್ಯ ಸಂದರ್ಭದ ಫೋಟೋ ತೆಗೆಯುತ್ತಿರುವಾಗ ಕೈಕೊಡುವ ಕ್ಯಾಮೆರಾ ಬ್ಯಾಟರಿ ಸೆಲ್ಲು,
ಆ ಕ್ಷಣದಲ್ಲಿ ಎಷ್ಟೊಂದು ಪಿತ್ತ ನೆತ್ತಿಗೇರಿಸುತ್ತವೆ ಅಲ್ಲವೆ?
ಅವೆಲ್ಲ ಆ ಕ್ಷಣ ನಮ್ಮ ಮನಸ್ಸು ಪ್ರತಿಕ್ರಿಯಿಸುವ ರೀತಿಗೆ ಅನ್ವಯವಾಗಿರುತ್ತವೆ.

"ಪ್ರೀತಿಗೆ ಕಣ್ಣಿಲ್ಲ" ಹಾಗೆ ಆಗುವದು ನಮ್ಮ ಮನದಾಳದಲ್ಲಿ ಉದ್ಭವಿಸುವ ವಿಚಾರಗಳಿಂದ ನಾವು ತೆಗೆದುಕೊಳ್ಳುವ ಆ ಕ್ಷಣದ ನಿರ್ಧಾರಗಳಿಂದ ಅಲ್ಲವೆ? ಒಂದು ಕ್ಷಣ ಯೋಚಿಸಿ ನೋಡಿ.

ಜೀವನವೆಂದ ಮೇಲೆ ಕಷ್ಟ ಕಾರ್ಪಣ್ಯಗಳು, ತೊಂದರೆಗಳು, ಸೋಲುಗಳು, ರೋಗ ರುಜಿನಗಳು ಬರುವದು ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ, ಆ ಕ್ಷಣಗಳಲ್ಲಿ ನಾವು ನಮ್ಮ ಬುದ್ಧಿಗೆ ದೆವ್ವ ಬಡಿದವರಂತೆ ಜೀವನದ ಮುಂದಿನ ಕ್ಷಣ ನಮ್ಮ ಪಾಲಿಗೆ ಇಲ್ಲ ಎಂದು ನಿರ್ಣಯಿಸಿ ಸೇಡಿನ ಕ್ರಮಗಳನ್ನು, ದೇಹದಂಡನೆ ಅಥವಾ ಆತ್ಮಹತ್ಯೆಯಂತಹ ನಿರ್ಧಾರ ಕೈಗೊಂಡರೆsss ಜೀವನಕ್ಕೆ ಅರ್ಥವೆಂಬುದಿದೆಯೆ?

ಅತಿ ಸಂತಸವಾದಾಗ, ಅತಿ ದುಃಖವಾದಾಗ ಆ ಕ್ಷಣದಲ್ಲಿ ಅತಿ ಹೆಚ್ಚಿನ ರಕ್ತ ಪೊರೈಕೆ ನಮ್ಮ ಮೆದುಳಿಗೆ ಆಗುವದರಿಂದ ಬ್ಯಾಲನ್ಸ್ ಕಳೆದುಕೊಳ್ಳುವ ನಮ್ಮ ಮನಸ್ಸು ನಮ್ಮ ಕೈಯಿಂದ ಏನೆಲ್ಲಾ ಮಾಡಿಸುತ್ತದೆ ಒಂದು ಕ್ಷಣ ಯೋಚಿಸಿ ನೋಡಿ....

ಭಾರತ ಪಂದ್ಯ ಗೆದ್ದ ಖುಷಿಯಲ್ಲಿ ನಾಯಕ ಸೌರವ್ ಗಂಗೂಲಿ ಹಾಕಿಕೊಂಡ ಶರ್ಟು ಕಳಚಿ ಮೈದಾನದ ತುಂಬ ನೆರೆದ ಜನರ ಅರಿವೇ ಇಲ್ಲದೆ ಕೈಯಿಂದ ಅದನ್ನು ಸುತ್ತಿಸುತ್ತಾನೆ, ವಿಶ್ವ ಸುಂದರಿ ಐಶ್ವರ್ಯಾ ರೈ ತನಗೆ ಒಲಿಯುತ್ತಿಲ್ಲ ಎಂದು ಕಂಠ ಪೂರ್ತಿ ಕುಡಿದ ಸಲ್ಮಾನ್ ಖಾನ್ ಅಲಿಯಾಸ್ ಸಲ್ಲೂ ಸರಿರಾತ್ರಿಯಲ್ಲಿ ಅವಳ ಮನೆಯೆದುರು ರಂಪಾಟ ಮಾಡುತ್ತಾನೆ, ಶತಾಯ ಗತಾಯ ಚುನಾವಣೆ ಗೆಲ್ಲ ಬಯಸಿದ್ದ ಆಮ್ಚಿ ಮುಂಬೈ ಖ್ಯಾತಿಯ ಬಾಳ್ ಠಾಕ್ರೆ ಉತ್ತರ ಭಾರತೀಯರನ್ನು ಒಲಿಸಿಕೊಳ್ಳಲು ಬಹಿರಂಗ ಸಭೆಯೊಂದರಲ್ಲಿ ಸೇರಿದ ಜನಕ್ಕೆ ದೀರ್ಘದಂಡ ನಮಸ್ಕಾರ ಮಾಡುತ್ತಾನೆ, ವಾದವಿವಾದಗಳಲ್ಲಿ ತೊಡಗಿದ ತಮಿಳುನಾಡಿನ ವಿಧಾನಸಭೆಯಲ್ಲಿ ಬುದ್ಧಿಗೆ ಮಂಕು ಕವಿದ ಸದಸ್ಯನೊಬ್ಬ ಜಯಲಲಿತಾಳ ಸೀರೆ ಸೆಳೆಯಲು ಮುಂದಾಗಿ ಆಧುನಿಕ ದುಶ್ಯಾಸನ ಆಗಬಯಸುತ್ತಾನೆ......

"ಬ್ಯುಟಿ ಲೈಸ್ ಇನ್ ಬಿಹೋಲ್ಡರ್ಸ್ ಐಸ್" ಅನ್ನುವಂತೆ "ಸೌಂದರ್ಯ ನೋಡುಗನ ಕಣ್ಣಲ್ಲಿರುತ್ತದೆ" ಅದೇ ರೀತಿ ಆಯಾಯಾ ಸಂದರ್ಭಗಳಿಗನುಸಾರವಾಗಿ ಆಯಾಯಾ ಕ್ಷಣಗಳಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವದು ಆಯಾಯಾ ವ್ಯಕ್ತಿಗಳ ಮನಸ್ಸಿನಲ್ಲಿ ಅಡಗಿರುತ್ತದೆ ಮತ್ತು ಮನೋಸ್ಥಿತಿಯನ್ನು ಅವಲಂಬಿಸಿರುತ್ತದೆ. ಮುಂದೆ ಉಂಟಾಗುವ ಪರಿಣಾಮಗಳ ಬಗ್ಗೆ ಸ್ವಲ್ಪ ಯೋಚಿಸಿ ನಾವು ನಿರ್ಧಾರಗಳನ್ನು ಕೈಗೊಂಡರೆ ಬಾಳು ಬಂಗಾರವಾಗುತ್ತದೆ ಇಲ್ಲದೆ ಹೋದರೆ ನರಕವಾಗುತ್ತದೆ.

ಈ ಲೇಖನ ಓದಿದ ಮೇಲೆ ನಮ್ಮನ್ನೆಲ್ಲ ಒಟ್ಟಾಗಿಡಲು, ಸದಾ ಸಂಪರ್ಕದಲ್ಲಿರಿಸಲು ಹೆಣಗುವ ನಮ್ಮ ಟಿಪಿ ಬಳಗ ಯಾಹೂ ಗ್ರೂಪ್ ಹಾಗೂ ನಿರಂತರ ವಿಶೇಷಾಂಕಗಳು ಶ್ರಮಪಡುತ್ತಿರುವದು ಸೂಕ್ತ ಎಂದು ಒಂದು ಕ್ಷಣ ನಿಮಗೆ ಅನ್ನಿಸಿದರೆ ನನ್ನ ಶ್ರಮ ಸಾರ್ಥಕ ಅನ್ನಿಸುತ್ತದೆ.

## ಎಮ್–ಜಿ ರೋಡು – ನಡು

ಎಂ.ಜಿ ರೋಡನಲ್ಲಿ ಬಿಕ್ಷುಕರ ಮೈಮೇಲಿಲ್ಲಾ ಬಟ್ಟೆ
ಕಾರಣಾ ಕಾಂಚಾಣವಿರದ ಅವರ ಕಡು ಬಡತನ
ಅಲ್ಲೇ ಷಾಪಿಂಗ್ ಮಾಡೋ ಲಲನೆಯರ ಮೈಮೇಲಿಲ್ಲಾ ಪೂರ್ತಿ ಬಟ್ಟೆ
ಕಾಂಚಾಣವಿದ್ರೂ ಅನುಭವಿಸುತಿದೆ ಅವರ ನಡು ಬಡತನ..

– **ಬಸವರಾಜ ಯಾದವಾಡ, ಬೆಂಗಳೂರು.**

# ಹೆಸರಿನಲ್ಲಿ ಹೆಮ್ಮೆ, ಹಾಸ್ಯ, ಹತಾಶ!!

– ಗಿರೀಶ. ಬೆಳಂದೂರ.(ಸದ್ದಾಮ್), ಡೆನ್‌ವೇರ್, ಕೊಲೆರಾಡೊ, ಯು.ಎಸ್.ಎ.



ಮಹಾ ವಾಗ್ಮಿ, ಒಳ್ಳೆಯ ತಂತ್ರಜ್ಞ, ಮಿತ್ರನಾಗಿರುವ **ಸದ್ದಾಮ್** ಹುಬ್ಬಳ್ಳಿಯ ಬಿ.ವಿ.ಬಿಯಲ್ಲಿ ಓದಿದ್ದು, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಮೂರುವರೆ ವರ್ಷ ಸೇವೆ ಸಲ್ಲಿಸಿದ ನಂತರ ಕಳೆದ ಎಂಟುವರೆ ವರ್ಷಗಳಿಂದ ಸಾಫ್ಟ್‌ವೇರ್ ರಂಗದಲ್ಲಿದ್ದಾರೆ. ಜೀವನವನ್ನು ತಮ್ಮದೇ ಆದ ಒಂದು ಕೌತುಕದ ಕಾತರದ ದೃಷ್ಟಿಯಲ್ಲಿ ನೋಡುವ ಸದ್ದಾಮ್, ಇಲ್ಲಿ ಒಂದು ಸರಳ ಹೆಸರಿನಲ್ಲಿ ಏನೆಲ್ಲ ರಹಸ್ಯ, ಹಾಸ್ಯ, ಹೆಮ್ಮೆ, ಹತಾಶ ಅಡಗಿದೆಯೆಂಬುದನ್ನು ನಮ್ಮ ಈ ಪಕ್ಕಾ ಉತ್ತರ ಕರ್ನಾಟಕದ ಭಾಷೆಯಲ್ಲಿ ತಮ್ಮೊಂದಿಗೆ ಹಂಚಿಕೊಳ್ಳಲು ಪ್ರಯತ್ನಿಸಿದ್ದಾರೆ.

**ಈ** ಪರದೇಸಿಗಳು ಅಲಿಯಾಸ್ ವಿದೇಶಿಗಳು ಅಲಿಯಾಸ್ ಫಾರಿನ್ ಮಂದಿ ನಮ್ಮ ಭಾರತೀಯ ಹೆಸರುಗಳನ್ನ ಉಚ್ಚಾರ ಮಾಡಾಕ ಒದ್ದಾಡೋದು ಕಟು ಸತ್ಯ. ಆದರ ನಮಗ ನಮ್ಮ ಹೆಸರುಗಳನ್ನ ಇವರು ಬರೋಬರೀ ಪ್ರೋನೌನ್ಸ್ ಮಾಡಂಗಿಲ್ಲ ಅನಸಬಹುದು. ಆದರ ಇದು ಎಲ್ಲಾ ದೇಶದವರಿಗೂ ಅನ್ವಯ ಆಗೋ ಅಂತ ವಿಚಾರ. ನಮಗ ಅವ್ರದ್ದು ಸರಿ ಅನಸಂಗಿಲ್ಲ, ಅವ್ರಿಗೆ ನಮ್ದು ಸರಿ ಅನಸಂಗಿಲ್ಲ.

ನಮ್ಮ ಹೆಸರ ಅರ್ಥ ಅಗಾಕ, ಸ್ಪೆಲ್–ಔಟ್ ಮಾಡಾಕ ಬೇಕು. ಎಷ್ಟೋ ಸಲ ಈ ಅಮೇರಿಕದಲ್ಲಿ ಪುರಾತನ ಕಾಲದಿಂದಲೂ ಇರುವ ಜನರ ಹೆಸರನ್ನsss ಇಲ್ಲಿಯೋರು ಸ್ಪೆಲ್–ಔಟ್ ಮಾಡಾಕ ಹೇಳತಾರ. ನನಗಂತೂ ಇಷ್ಟು ರೂಢಾ ಆಗೇತಿ ಅಂದ್ರ.. ಯಾವರ (ಅದರಾಗ ಫೋನ್‌ನ್ಯಾಗ) ಹೆಸರ ಕೇಳಿದ ಅಂದ್ರ .. ಬರೀ "ಗಿರೀಶ್" ಅಂತ ಹೇಳೋದss ಬಿಟ್ಟು ಬಿಟ್ಟೇನಿ.. ಕೇಳಿದ್ ಕೂಡ್ಲೇ ಸ್ಪೆಲ್–ಔಟ್ ಚಾಲೂ ಮಾಡೇ ಬಿಡತನಿ.. GIRISH - "G" - "I" – "R" – "I" – "S" – "H" ಅಂತ.. ಮೊನ್ನೆ ಒಮ್ಮೆ ಹಿಂಗ ಯಾವದೋ ಬ್ಯಾಂಕ್‌ಗೆ ಫೋನ್ ಹಚ್ಚಿ, ಹೆಸರು ಕೇಳಿದಾಗ, ಸ್ಪೆಲ್ ಮಾಡಾಕ ಚಾಲೂ ಮಾಡಿದೆ.. ಅವ ಅರ್ಧಕ್ಕ ನಿಂದ್ರಿಸಿ "got it sir" ಅಂದ. ನೋಡಿದ್ರ, ಆ ಕಾಲ್ ಬೆಂಗಳೂರಿಗೆ ಫಾರ್‌ವರ್ಡ್ ಆಗಿತ್ತು. ಎಲಾ ಇವನ.. ಅಮೆರಿಕದಿಂದ ನಮ್ಮ ಹುಬ್ಬಳ್ಳಿ ಭಾಷೆಯಲ್ಲಿ "ಏನ್ರಿ, ಹೆಂಗದೀರ್ರಿ, ಮಳಿ–ಗಿಳಿ ಹೆಂಗೈತ್ರಿ ಹುಬ್ಳ್ಯಾಗ" ಅಂತ ಮಾತಾಡಬಹುದಾದ ಕಾಲ ದೂರ ಇಲ್ಲ ಅನುಕೊಂಡೆ!!!

ನನಗ ನನ್ನ ಹೆಸರು ಸ್ಪೆಲ್ ಮಾಡಿ ಮಾಡಿ ಸಾಕಾಗಿ ಹೋಗೇತಿ. ಈ ತೆಲಗೂ ಮಂದೀದು ಇಷ್ಟಿಟ್ಟು ಉದ್ದಾ ಹೆಸರು ಇರತಾವ, ಅವರು ಹೆಂಗ ಮ್ಯಾನೇಜ್ ಮಾಡ್ತಾರೋ ಅನ್ನಿಸ್ತೈತಿ. ನಮ್ಮ ಕಂಪನ್ಯಾಗ ನಮ್ಮ ಕೆಲ ತೆಲುಗು ಮಿತ್ರರಿದ್ದರು.. ಒಬ್ಬವಾ.. "ನುನ್ನಾ ಸತ್ಯಶಂಕರ ವೆಂಕಟೇಶ್ವರ ದುರ್ಗಾ ಪ್ರಸಾದ್".. ಇನ್ನೊಬ್ಬವ.. "ಕೊಲ್ಲೂರು ವೆಂಕಟಸಾಯಿ ಲಕ್ಷ್ಮಿ ನರಸಿಂಹ ರಾವ್". ಇವರು ಅದು ಹೆಂಗ ಸ್ಪೆಲ್ ಮಾಡತಿದ್ರೋ ದೇವರಿಗೇ ಗೊತ್ತು.

ಅದಕ್ಕ ಯಾರೋ ಒಂದು ಜೇಮ್ಸ್ ಬಾಂಡ್ ಜೋಕ್ ಬರದಾರ ಇದರ ಬಗ್ಗೆ : ಜೇಮ್ಸ್ ಬಾಂಡ್ ಮತ್ತ ಒಬ್ಬ ತೆಲಗು ಮನಷ್ಯಾ ವಿಮಾನದಾಗ ಹೊಂಟಿದ್ರಂತ. ತೆಲಗು ಮನಷ್ಯಾ ಬಾಂಡ್‌ಗ ನಿನ್ನ ಹೆಸರೇನು ಅಂತ ಕೇಳಿದನಂತ.. ಅದಕ್ಕ ಬಾಂಡ್, ತನ್ನ ಮಾಮೂಲಿ ಸಿನಿಮಾ ಶೈಲಿಯಲ್ಲಿ "ಬಾಂಡ್" – "ಜೇಮ್ಸ್ ಬಾಂಡ್" ಅಂದನಂತ. ಆಮ್ಯಾಲ ಬಾಂಡ್ ತಿರುಗಿ ನಿನ್ನ ಹೆಸರೇನು ಅಂತ ತೆಲುಗು ಮನಷ್ಯಾಗ ಕೇಳಿದನಂತ.. ತೆಲುಗು ಮನಷ್ಯಾ ಬಾಂಡ್‌ನ ಶೈಲಿಯಲ್ಲೇ ಹೇಳೋಣ ಅಂತೇಳಿ : "ಪ್ರಸಾದ್" – "ದುರ್ಗಾ ಪ್ರಸಾದ್" – "ನರಸಿಂಹಲು ದುರ್ಗಾ ಪ್ರಸಾದ್" – "ಅನಂತರಾಯಲು ನರಸಿಂಹಲು ದುರ್ಗಾ

ಪ್ರಸಾದ್'' – ''ಕೋದಂಡರಾಮುಲು ಅನಂತರಾಯಲು ನರಸಿಂಹಲು ದುರ್ಗಾ ಪ್ರಸಾದ್''. . . ಬಾಂಡ್ ಮಾಮೂಲಿ ಫಿಲ್ಮೀ ಸ್ಟೈಲ್‌ನ್ಯಾಗ ಮಂಗಮಾಯ ಆದನಂತ.

ನಮ್ಮ ಪಾಯಿಂಟನ ಸಂಬಂಧಿ ಅಜಿತ್ ಪೂಜಾರ್ ಅವರು ಹೇಳಿದ ಒಂದು ಸತ್ಯ ಘಟನೆ. ಅವರ ಮಿತ್ರ ''ಅಪ್ಪಾ ಪಿಳ್ಳೈ'' ಅನ್ನೋ ಅಮೇರಿಕದಲ್ಲಿರುವರೊಬ್ಬರು, ಫೋನ್‌ನ್ಯಾಗ ತಮ್ಮ ಡೀಟೈಲ್ಸ್ ಕೊಡಾಕತ್ತಿದ್ರಂತ. ಫೋನ್‌ನ್ಯಾಗ ಆಕಡೆ ಇದ್ದಕಿ ಇವರ ಹೆಸರು ಕೇಳಿರಬೇಕು. ಅದಕ್ಕ ಇವರು ''ಅಪ್ಪಾ ಪಿಳ್ಳೈ'' ಅಂತ ಒಂದ ಪಟಿಗೆ ಹೇಳಿದ್ರಂತ. ಆಕಿಗೆ ಏನೂ ತಿಳಿದಿಲ್ಲ ಅನ್ನಸ್ತೈತಿ, ''ಸ್ಪೆಲ್–ಔಟ್'' ಮಾಡ್ರಿ ಅಂದಿರಬೇಕು. ಅದಕ್ಕ ಇವರು A for Apple, P for Pineapple, P for Pineapple, A for Apple, P for Pineapple ಅಂತ ಒಂದ ಸಮನೆ ಬಡಬಡಿಸಿದರಂತ. ಆಕಿ ನಗುತ್ತಾ ನಡಕ ಅವರನ್ನ ನಿಂದ್ರಿಸಿ_ wait .. wait.. wait.. first tell me, how many apples and pineapples are there in your name??!!! ಅಂದಳಂತ.


ನಮ್ಮ ಮತ್ತೊಬ್ಬ ಸಹದ್ಯೋಗಿ ಗಗನ್ .. ಸ್ಪೆಲ್–ಔಟ್ ಮಾಡು ಅಂದಾಗ "G for Gagan" ಅಂದು.. ಸುತ್ತಮುತ್ತ ಇರೋರ್ನೆಲ್ಲ ಘೊಳ್ ಅಂತ ನಗೋ ಹಂಗ ಮಾಡಿದ್ದ.

ಮಂದಿ ಇಷ್ಟೆಲ್ಲಾ ಕಷ್ಟಪಟ್ಟು ಹೆಸರು ಹೇಳಿ, ಬರಸಿ, ಆಮ್ಯಾಲ ಬರೋ ಪೋಸ್ಟ್‌ಗಳಲ್ಲಿ ಪ್ರಿಂಟ್ ಆದ ತಮ್ಮ ಹೆಸರನ್ನು ನೋಡಿ ಬೆಚ್ಚಿ ಬೀಳೋ ಘಟನೆಗಳೆಷ್ಟೋ. ಅಜಿತ್ ಪೂಜಾರರ ಹೆಸರು Ajit Uja ಅಂತ ಪ್ರಿಂಟ್ ಆಗಿತ್ತಂತ. ಅದು ಹೆಂಗ ಅಷ್ಟೊಂದು ಅಕ್ಷರಗಳನ್ನ ನುಂಗಿದರೋ ಗೊತ್ತಿಲ್ಲ. ನನ್ನ ಮನೆಯವಳ ಅಣ್ಣ – ಶ್ರೀರಾಮ.. ಈ ಹೆಸರನ್ನ ಫ್ರೀರಾಮ ಮಾಡಿದ್ದರು. ಇನ್ನು "M" ಇದ್ದಿದ್ದು "N" ಆಗುವದು, "B" ಇದ್ದಿದ್ದು "P" ಆಗುವದು ಭಾಳ ಮಾಮೂಲಿ, ನಾವು ಹೇಳೋ "A" ಅವರಿಗೆ ಅರ್ಥ ಆಗೋದsss ಇಲ್ಲ, "A for Apple" is compulsory!!

ನಾನು ಸೌತ್ ಆಫ್ರಿಕಾದಲ್ಲಿದ್ದಾಗ ನಮ್ಮೊಂದಿಗಿದ್ದ ಮನೋಜ್, ರಾಜ್, ಬಾಲಾಜಿ ಮುಂತಾದವರನ್ನು ಅಲ್ಲಿಯವರು ಮನೋಯ್, ರಾಯ್, ಬಾಲಾಯಿ ಅಂತ ಕರೀತಿದ್ರು. ನಿಮಗೆಲ್ಲಾ ಗೊತ್ತಿರ ಬೇಕು, Kronje ಅನ್ನೊ ಅಲ್ಲಿನ ಮಾಜಿ ಕ್ಯಾಪ್ಟನ್‌ನನ್ನು ''ಕ್ರೋನಿಯೆ'', Boje ಅನ್ನೊ ಒಬ್ಬ ಬೌಲರನನ್ನು ''ಬೋಯೆ'' ಅಂತ ಅವರು ಕರೀತಾರ. ಎಲ್ಲೆಲ್ಲಿ ''J'' ಬರತೈತೋ ಅಲ್ಲೆಲ್ಲಾ ''Y'' ಇರೋ ಗತೆ ಪ್ರೊನೌನ್ಸ್ ಮಾಡತಾರ ಅವರು!!

ಹಿಂಗ ಸ್ಪಾನಿಶ್ ಪ್ರಭಾವ ಇರುವ ಜಾಗಗಳಲ್ಲಿ, ಎಲ್ಲೆಲ್ಲಿ ''J'' ಬರತೈತೋ ಅಲ್ಲೆಲ್ಲಾ ''H'' ಹಾಕತಾರ ಅವರು!! ಮಂಜ ಅನ್ನುವವರನ್ನ ಮನ್‌ಹ ಅಂತ ಹೇಳಿದ್ದು ಕೇಳೇನಿ. ಅದಕ್ಕ ಇನ್ನೊಂದು ಜೋಕ್ ಬರದಾರ.. (ಹಿಂದಿನ ಬಾಂಡ್ ಜೋಕ್ ಮುಂದುರಿಸಿ..) ತೆಲುಗೂ ನಾಮಾವಳಿ ಕೇಳಿ ಮಾಯವಾದ ಬಾಂಡ್ ಎಷ್ಟು ಹೊತ್ತು ಟಾಯಿಲೆಟ್‌ನ್ಯಾಗ ಕುಂತಾನು..!? ತಿರುಗಿ ಸೀಟಿಗೆ ಬಂದನಂತ. ಬಂದಕೂಡಲೇ ತೆಲುಗ ಮಾತು ಮುಂದುವರಿಸಿದನಂತ. ಮಾತಿನ ನಡುವೆ ಬಾಂಡ್ ಕೇಳಿದನಂತ.. ಎಲ್ಲಿಗೆ ಹೊಂಟಿ ಅಂತ.. ಅದಕ್ಕ ತೆಲಗೂ ಹೇಳಿದನಂತ.. ''ಆಯ್ ಯಾಮ್ ಗೋಯಿಂಗ್ ಟು ಸ್ಯಾನ್ ಜೋಸ್ (San Jose)". ಜಗತ್ತೆಲ್ಲಾ ತಿರುಗಾಡಿದ ಬಾಂಡ್‌ಗ ಗೊತ್ತಾತಂತ ಇವ ಏನ್ ಹೇಳಾಕತ್ತಾನು ಅಂತ.. ಅದಕ್ಕ ಅವ ನಕ್ಕೊಂತ ಹೇಳಿದನಂತ.. ಅದು ಸ್ಯಾನ್ ಜೋಸ್ ಅಲ್ಲ ಸ್ಯಾನ್ ಹೋಸೆ.. ಹೋಸೆ ಅಂತ ಪ್ರೊನೌನ್ಸ್ ಮಾಡಬೇಕು ಅಂದನಂತ. ಹಂಗ ಮಾತು ಮುಂದುವರೀತಂತ.. ಅಮ್ಯಾಲ ಬಾಂಡ್, ಯಾವಾಗ ವಾಪಸ್ ಇಂಡಿಯಾಕ್ಕ ಹೊಂಟಿ ಅಂತ ತೆಲುಗೂನ ಕೇಳಿದನಂತ.. ಅದಕ್ಕ ತೆಲುಗು ಸ್ವಲ್ಪ ಯೋಚನಿ ಮಾಡಿ.. ''ಹೂನ್ ಆರ್ ಹುಲೈ'' (June or July) ಅಂದನಂತ!!!!

ನನ್ನ ಸುತ್ತಮುತ್ತ ಕೆಲಸ ಮಾಡುವ ಚೈನಾ, ಕೊರಿಯಾದ ಮಂದಿಗಳ ಹೆಸರೋ – ಸಿನ್, ಜುನ್, ಟ್ಯಾಂಗ್, ಪಿಂಗ್, ಪೆಂಗ್.. ಇನ್ನೂ ವಿಚಿತ್ರ ವಿಚಿತ್ರ ಇರತಾವ. ನನ್ನ ಸಂಬಂಧಿ ಈ ಹೆಸರುಗಳ ಬಗ್ಗೆ ಒಂದು ಜೋಕ್ ಹೇಳತಿದ್ದ.




ಮಗು ಹುಟ್ಟಿದ ಕೂಡಲೇ ಅಡುಗಿ ಮನೆಯಾಗ ಯಾವ್‌ದಾರ ಬಾಂಡೆ–ಸಾಮಾನ ಎತ್ತಿ ಒಗಿತಾರಂತ.. ಅದು ಯಾವ ಸೌಂಡ್ ಬರತೈತೊ ಆ ಹೆಸರು ಇಡತಾರಂತ!! ನಮಗೋ ಇವರ ಹೆಸರುಗಳು ವಿಚಿತ್ರ ಅನ್ನಿಸ್ತಾವ ಆದ್ರ ಅವರಿಗದು ಸಹಜ!!

ಈ ಹೆಸರಿನಲ್ಲಿ ಹಾಸ್ಯಕ್ಕ ಚೈನಾಕ್ಕ ಹೋಗೋದು ಬ್ಯಾಡ... ಚೆನ್ನೈನಿಂದ ಬಂದ ನಮ್ಮ ಕಂಪನಿಯ ಒಬ್ಬಕಿ ಹೆಸರು Rathika. ಏನಪ ಇದು ''ರಥಿಕ'' ಅಂದ್ರ ಅಂತ ನನಗ ವಿಚಿತ್ರ ಅನಿಸಿತ್ತು. ನೋಡಿದರ ಅದು ''ರಾಧಿಕಾ''. ತಮಿಳಿನಲ್ಲಿ ಭಾಳ ಅಕ್ಷರಗಳsssಇಲ್ಲಂತ. ಅವರು ''ದ'' ಮತ್ತ ''ತ'' ಕ್ಕ ಒಂದ ಅಕ್ಷರ ಬಳಸ್ತಾರಂತ. ಹಿಂಗ ಕ, ಗ, ಹ ಕ್ಕೆಲ್ಲಾ ಒಂದsss ಅಕ್ಷರ ಅನ್ನಿಸ್ತೈತಿ. ಮಗೇಶ್ ಅಥವಾ ಮಕೇಶ್ ಅಂದ್ರ ಮಹೇಶ್!! ರಾಗುಲ್ ಅಥವಾ ರಾಕುಲ್ ಅಂದ್ರ ರಾಹುಲ್!!! ವಿಚಿತ್ರ ಆದರೂ ಸತ್ಯ. ನಮ್ಮಣ್ಣ ಒಂದು ಘಟನೆ ಹೇಳತಿದ್ದ. ಒಬ್ಬವ ಮದ್ರಾಸಿ ಅವನ ಹತ್ರ ''ಕಾಂತಿ ನಗರ್'' ಎಲ್ಲೈತಿ ಅಂತ ಕೇಳಿಕೊಂಡು ಬಂದಿದ್ದನಂತ. ಎಲಾ ಇವನ.. ಇಷ್ಟು ವರುಷದಿಂದ ಶಿವೊಗ್ಗಾದಾಗ ಅದನಿ.. ಕಾಂತಿ ನಗರ್ ಅಂತ ಕೇಳಿಲ್ಲಲ ಅಂತ ತಲಿಕೆಡಿಸಿಕೊಂಡ.. ಸುತ್ತಿ ಬಳಸಿ ಕೇಳಿದಮ್ಯಾಲ ಗೊತ್ತಾತಂತ.. ಅವಾ ಕೇಳಾಕತ್ತಿದ್ದು ''ಕಾಂತಿ'' ಅಲ್ಲ, ''ಗಾಂಧಿ''!

ಹಿಂಗ ನಾನಾ ಕಡೆಗಳಲ್ಲಿ ನಾನಾ ತರಹದ ಅನುಭವ ಆಗತೈತಿ. ಈ ಗ್ಲೋಬಲೈಸೇಷನ್ ಗಾಳಿಯಲ್ಲಿ, ದೇಶ ವಿದೇಶಗಳಲ್ಲಿ ಪಸರಿಸಿರುವ ನಮ್ಮ ಜನ ತಮ್ಮ ಮೂಲ ಹೆಸರುಗಳ ಬಗ್ಗೆ ಹೆಮ್ಮೆ, ಹಾಸ್ಯ, ಹತಾಶ ಈ ಎಲ್ಲಾ ಭಾವನೆ ಹೊಂದುವುದು ಸಹಜ. ಕೆಲವರು ಪ್ರವಾಹದಾಗ ಕೊಚ್ಚಿಹೋಗಿ ತಮ್ಮ ಹೆಸರನ್ನ ಚೇಂಜ್ ಮಾಡ್ಕೋತಾರ. ಇಲ್ಲಿ ನಾನು ಕೆಲಸ ಮಾಡೋ ಕಡೆ, ''ರ್‍ಯಾಂಡಿ ಕಾರ್‌ವಾರ್'' ಅನ್ನೋ ಹೆಸರನ್ನ ಭಾಳಕಡೆ – ಮೀಟಿಂಗ್‌ನ್ಯಾಗ, ಅಲ್ಲಿ, ಇಲ್ಲಿ ಕೇಳಿದ್ದೆ. ಯಾರಪಾ ಇವರು ''ಕಾರ್‌ವಾರ್'', ನಮ್ಮ ಕಡೆ ಹೆಸರು ಅನ್ನಿಸತೈತಲ್ಲಾ ಅಂತಾ ವಿಚಾರ ಮಾಡಿದ್ದೆ. ಕೊನೆಗೆ ಗೊತ್ತಾತು.. ರವೀಂದ್ರನಾಥ, ರ್‍ಯಾಂಡಿ ಆಗ್ಯಾರ.

ಹೆಸರಿನ ಬಗ್ಗೆ ಕಾಂಟ್ರಾವರ್ಸಿ ಆಗಾಗ ಕೇಳ್ತನsss ಇರ್ತವಿ. ಲವಪುರ ಲಾಹೋರ್ ಆದಾಗಿನದ್ದರಿಂದ ಹಿಡಿದು, ಮದ್ರಾಸ್‌ನ್ನು ಚೆನ್ನೈ ಅಂತ ತಿದ್ದಿದ್ದು, ಬಾಂಬೆಯನ್ನು ಮುಂಬೈ ಅಂತ ತಿದ್ದಿದ್ದು, ಕಲ್ಕತ್ತಾವನ್ನು ಕೊಲ್‌ಕೋಟಾ ಅಂತ ತಿದ್ದಿದ್ದು, ಇತ್ತೀಚೆಗೆ ಬ್ಯಾಂಗಲೋರ್‌ನ್ನು ಬೆಂಗಳೂರು ಅಂತ ಮಾಡಾಕ ಹೊರಟ ರಾಜಕಾರಣಿಗಳ ಮಾತು ಕೇಳೇವಿ. ಬಂಡೋಪಾಧ್ಯಾಯ – ಬ್ಯಾನರ್ಜಿ, ಚಟ್ಟೋಪಾಧ್ಯಾಯ – ಚಟರ್ಜಿ, ಮುಖ್ಯೋಪಾಧ್ಯಾಯ – ಮುಖರ್ಜಿ, ಧಾರವಾಡ – ಧಾರ್ವಾರ್, ಮಡಿಕೇರಿ ಮರಕೆರಾ (ಕೆರಾ ಅಂದ್ರ ಗೊತ್ತಲ!!!) ಅರ್ಥವೇ ಇಲ್ಲದ ಹೆಸರುಗಳು ಚಾಲ್ತಿಯಲ್ಲಿ ಬಂದುಬಿಟ್ಟಾವು. ಜೂಹೀ ಚಾವ್ಲಾ, ಕನ್ನಡಿಗರಿಗೆ ತನ್ನ ಹೆಸರು ಹೇಳಾಕ ಬರಂಗಿಲ್ಲ ಅಂತ ''ಜೂಲಿ'' ಅಂತ ಹೆಸರು ಚೇಂಜ್ ಮಾಡಿಕೊಂಡೇನಿ ಅಂದು ಕನ್ನಡಿಗರನ್ನ ಕೆಣಕಿದ ಬಗ್ಗೆ ಕೇಳೇವಿ. ಈಗಿನ ಕಾಲದ ಯುವ ಪೀಳಿಗೆಯ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುವ ಹುಡುಗರು ಹೆಸರನ್ನ ಬದಲಾಯಿಕೊಂಡಿದ್ದನ್ನ ಕೇಳ್ತವಿ.

ಇದು ಖರೆ ಅಂದ್ರೂನೂ ಭಾಳ ಸೀರಿಯಸ್ಸಾಗಿ ತಾಸುಗಟ್ಲೆ ಡಿಬೇಟ್ ಮಾಡೋ ಅಂತಾ ವಿಚಾರ. ವಿದ್ಯಾನಂದ ಶೆಣೈ ಅವರ "ಭಾರತ ದರ್ಶನ" ಕೇಳಿದೋರಿದ್ರ ಡಿಬೇಟಿಗೆ ರೆಡಿ ಆಗಿ ನಿಲ್ಲಬಹುದು. ನಾವು ಕಾಲೇಜ್‌ನ್ಯಾಗ ಇದ್ದಿದ್ರ, ಅದು ಸರಿ ಇದು ಸರಿ ಅಂತ, ರೆಡ್ಡಿ ಕ್ಯಾಂಟೀನ್ ಇಲ್ಲಾ ಹಾಸ್ಟೆಲ್‌ನ್ಯಾಗ ತಾಸುಗಟ್ಲೆ ಗದ್ಲ ಮಾಡಿ, ಲಾಸ್ಟಿಗೆ ಚಪ್–ಚಪ್ಪಲ್‌ಲೆ ಹೊಡದಾಡೋ ಮಟ್ಟಕ್ಕ ಬರತಿದ್ವಿ!!! ಈಗ ನಮ್ಮ ಬಳಗದಾಗ ಭಾಳ ಮಂದಿಗೆ ಈ–ಮೈಲ್ ಬರಿಯಾಕsss ಟಾಯಮ್ಮ ಇಲ್ಲ. ಇನ್ನು ಕೆಲವರು ಪ್ರವಾಹದಾಗ ಕೊಚ್ಚಿಹೋಗಿ ತಮ್ಮ ಮೂಲ ಅಭಿಮತನ ಬದಲಾಯಿಸಿರಬಹುದು. ಇನ್ನು ಕೆಲವರು, ಹೊಡದಾಡಿ ಏನೂ ಉಪಯೋಗ ಇಲ್ಲ ಅಂತ ಸುಮ್ಮನಿರಬಹುದು.

ಅದಕ್ಕ ಈ ಲೇಖನನ ನಿಮಗ ಹೆಂಗ ಬೇಕೋ ಹಂಗ ತೊಗೋರಿ.. ಹೆಮ್ಮೆಯಾಗಿ.. ಇಲ್ಲಾ ಹಾಸ್ಯವಾಗಿ.. ಇಲ್ಲಾ ಹಗುರವಾಗಿ ಇಲ್ಲಾ ಹತಾಶೆಯಾಗಿ!!!!

**ಅಂದು**



**ಇಂದು**



**ಪ್ರಕಾಶ . ಸಿ. ರಾಜಗೋಳಿ.**

## ವಕ್ರ ತುಂಡೊಕ್ತಿ:


**ಉತ್ತಮರು ಯಾರು..?**

ಕುಡಿದರೂ ತೂರಾಡದವನು ಬಾರಿನೊಳಗುತ್ತಮನು.
ಪತ್ನಿ ಬಾರಿಸಿದರೂ ಕುಯ್ಯೋ ಎನ್ನದವನು ಸಂಸಾರದೊಳಗುತ್ತಮನು.
ಮೇಷ್ಟ್ರುಗಳ ಕೋಲಿಗೆ ಜಗ್ಗದವನು ಶಾಲೆಯೊಳಗುತ್ತಮನು.
ಪ್ರಿಯತಮೆ ಕೈ ಕೊಟ್ಟರೂ ಬೇರೊಬ್ಬಳ ಕೈ ಹಿಡಿಯುವವನು ಪ್ರೇಮಿಗೊಳಗುತ್ತಮನು.

- **ಮೀನಾಕ್ಷಿ ಟಿ. ಬೆಂಗಳೂರು**

## ಸಿರಿವಂತನಾದರೂ ..

**– ಶ್ರೀನಿವಾಸ. ಆರ್. ಗುಡಿ. ಹರ್ನ್‌ಡಾನ್, ವಾಷಿಂಗ್ಟನ್ ಡಿ.ಸಿ. ಯು.ಎಸ್.ಎ**



ನಮ್ಮ ಟಿಪಿತಾರೆಗಳಲ್ಲಿ ಮಹಾತಾರೆ..ವಿಶೇಷ ತಾರೆಗಳಲ್ಲಿ ಇವರೂ ಒಬ್ಬರು. ಗಾಯಕ, ಕವಿ, ಲೇಖಕ, ವಿಮರ್ಶಕ, ವಿಚಾರವಾದಿ ಹಾಗೂ ಇದಕ್ಕೆಲ್ಲಾ ಅಪವಾದವೆಂಬಂತೆ ಕಟ್ಟಾ ಸಾಫ್ಟ್‌ವೇರ್ ಇಂಜಿನಿಯರ್. ನಮ್ಮ ಬಿ.ಇ. ಸಹಪಾಠಿ, ಟಿಪಿಬಳಗದ ಮೂಲ ಪಿತಾಮಹರಲ್ಲಿ ಒಬ್ಬರಾದ **ಶ್ರೀನಿವಾಸ** ಅಲಿಯಾಸ್ ಗುಂಡು ಅಲಿಯಾಸ್ ಪ್ರೀತಿಯಿಂದ ಪಿವಿಎನ್ (ಈ ಪದವಿಯನ್ನು ಅವರು ಇದುವರೆಗೆ ಬಿಟ್ಟು ಕೊಟ್ಟಿಲ್ಲ. ಆ ಮಾತು ಬೇರೆ.), ಓದಿದ್ದೆಲ್ಲಾ ಹುಬ್ಬಳ್ಳಿಯಲ್ಲಿ. ಮೆಚ್ಚಿನ ಸಂಗಾತಿ ಮೃಣಾಲಿನಿ ಹಾಗೂ ಮಗಳು ಮಹೀ ಇದು ಅವರ ಕುಟುಂಬ. ವೈಚಾರಿಕ, ಹಾಸ್ಯ ಹಾಗೂ ವಿಡಂಬನಾತ್ಮಕ ರಚನೆಗಳ ಮೂಲಕ ವಾಸ್ತವ ಸಂಗತಿಗಳನ್ನೂ ಬಿಂಬಿಸಲು ಪ್ರಯತ್ನಿಸುವ **ಶ್ರೀನಿವಾಸ ಗುಡಿ** ಅವರ ಕನ್ನಡ ಸಾಹಿತ್ಯ ಅಧ್ಯಯನದ ಬಗ್ಗೆ ಹೆಚ್ಚಿಗೆ ಹೇಳುವದೇನಿದೆ ..? ನೀವೇ ಓದಿ ನೋಡಿ . . . . !

ಸಿರಿವಂತನಾದರೂ ಕನ್ನಡ ನಾಡಲ್ಲೆ ಮೆರೆವೆ, ಭಿಕ್ಷುಕನಾದರೂ ಕನ್ನಡ ನಾಡಲ್ಲೆ ಮಡಿವೆ !! ಆಕಾಶವಾಣಿಯ ವಿವಿಧ–ಭಾರತಿ ಪ್ರಸಾರಿಸುವ ಹಳೆಯ ಕನ್ನಡ ಚಿತ್ರಗೀತೆಗಳಲ್ಲಿ ಆಗಾಗ ಮೂಡಿ–ಬರುತ್ತಿದ್ದ ಪಿ. ಬಿ. ಶ್ರೀನಿವಾಸ್ ಹಾಡಿದ ಮಧುರ ಗೀತೆ ಕನ್ನಡಿಗರ ಹೃದಯದಲಿ ಹೆಮ್ಮೆಯ ಭಾವ ತುಂಬುವ ಗೀತೆ.

'ಸಿರಿತನ' ಬಂದರೂ 'ಬಡತನ' ಬಂದರೂ ಕನ್ನಡ ನಾಡು ಬಿಡುವದಿಲ್ಲ ಎಂದು ಘಂಟಾಘೋಷವಾಗಿ ಸಾರುವ ಕವಿ ವಿದೇಶದಲ್ಲಿರುವ ಕನ್ನಡಿಗರನ್ನ ಕೆಣಕಲು ಪ್ರಯತ್ನಿಸಿದ್ದಾನೊ ಅಂತ ಅನಿಸುತ್ತದೆ! ಆದರೆ ವೈಚಿತ್ರ್ಯ ನೋಡಿ, 'ಸಿರಿವಂತ' ಮತ್ತು 'ಭಿಕ್ಷುಕ' ಎರಡು ವರ್ಗದ ಜನ ಕನ್ನಡ ನಾಡನ್ನ ಬಿಟ್ಟು ಹೋಗುವ ಪ್ರಸಂಗ/ಪ್ರಮೇಯ/ಅವಕಾಶ ಸಾಮಾನ್ಯವಾಗಿ ಬರುವದಿಲ್ಲ. ಇದಕ್ಕೆ ಅಪವಾದಗಳು ಇರಬಹುದು, ಆದರೆ ಅವು ಬಹಳ ಅಪರೂಪ.

ಸಿರಿವಂತರಿಗೆ ಆಸ್ತಿ–ಅಂತಸ್ತು, ಆಳು–ಕಾಳು ಎಲ್ಲ ಇದ್ದಾಗ ಅದನ್ನ ಬಿಟ್ಟು ಬೇರೆ ರಾಜ್ಯ/ದೇಶಗಳಿಗೆ ಪರದೇಶಿಯಾಗಿ ಹೋಗುವದು ಮತ್ತು ಅಲ್ಲಿ ಶ್ರೀ–ಗಣೇಶಾಯನಮಃ ಅಂತ ಹೊಸದಾಗಿ ಎಲ್ಲ ಶುರು ಮಾಡುವ ಶ್ರಮ/ಕಿರಿಕಿರಿ ಯಾರಿಗೆ ಬೇಕು? ಹೀಗಾಗಿ ಶ್ರೀಮಂತರು ಊರು ಬಿಡೋದು out of question…!

ಇನ್ನ ಭಿಕ್ಷುಕರಿಗೂ ಕೂಡ ವಿದೇಶಗಲ್ಲಿ ಸಲೀಸಾಗಿ ಯಾರ ಅಂಜಿಕೆಯಿಲ್ಲದೆ ಭಿಕ್ಷೆ ಎತ್ತಲಿಕ್ಕಾಗುವದಿಲ್ಲ. ಏನೊ ಒಂದು ಕೆಲಸಕ್ಕೆ ಹಚ್ಚಿ ಬಿಡುತ್ತಾರೆ ವಿದೇಶದಲ್ಲಿ, ಹಾಯಾಗಿ ಜೀವನ ಮಾಡಲಿಕ್ಕೆ ಬಿಡುವದಿಲ್ಲ ಅಂತ ಭಿಕ್ಷುಕರು ಕನ್ನಡ ನಾಡು ಬಿಟ್ಟು ಅಲುಗುವದಿಲ್ಲ. ಹಾಗೆ ಅವರು ಬೇರೆ ಕಡೆ ವಲಸೆ ಹೋಗಿದ್ದರೆ ಊರಿನ ಮಾರುಕಟ್ಟೆ, ದೇವಸ್ಥಾನ, ಬಸ್–ಸ್ಟ್ಯಾಂಡ್, ರೇಲ್ವೆ–ಸ್ಟೇಶನ್ ಎಲ್ಲ ಭಣ ಭಣ ಅನ್ನುತಿದ್ದವು!

ಈ ಕನ್ನಡ ನಾಡು–ನುಡಿ, ಸಂಸ್ಕೃತಿ–ಇತಿಹಾಸಗಳನೆಲ್ಲ ಮರೆತು ಓಡುವದು 'ಮಧ್ಯಮ' ವರ್ಗದ ಕನ್ನಡಿಗರಿಗೆ ಮಾತ್ರವೆ ಸಾಧ್ಯ! ಹೊಟ್ಟೆ–ಪಾಡಿಗೆ, ನೌಕರಿಗೋಸ್ಕರ ಊರಿಂದ ಊರಿಗೆ, ದೇಶದಿಂದ ದೇಶಕ್ಕೆ ಜಿಗಿಯುವದು ಮಿಡಲ್–ಕ್ಲಾಸ್‌ನವರಿಗೆ ಮಾತ್ರ ಸಾಧ್ಯ! ಆದರೆ ಕವಿ ಹಾಡಿನಲ್ಲಿ ಮಿಡಲ್–ಕ್ಲಾಸನ್ನ ಸೇರಿಸಲೆ ಇಲ್ಲ, ಮಧ್ಯಮ–ವರ್ಗದವನಾದರೆ ಎಲ್ಲಿ ಇರುವೆ, ಎಲ್ಲಿ ಇದ್ದರೆ ಚೆನ್ನ ಅಂತ ಒಂದು ಕವಿ–ವಾಣಿ ಹೊರಡಿಸಲೆ ಇಲ್ಲ! ಅದಕ್ಕೆ ಮಧ್ಯಮ–ವರ್ಗದ ಕನ್ನಡಿಗರು 'ಮಧ್ಯಮ–ವರ್ಗದವನಾದರೆ' ಎಲ್ಲಿ ಬೇಕಾದರು ಇರುವೆ ಅಂತ ಈ ಹಾಡನ್ನು ತಿರುಚಿಕೊಂಡು ಗಾಳಿ ಬೀಸಿದತ್ತ ಹಾರಿ ಬಿಡುತ್ತಾರೆ!

ಈ ಕವಿಗೆ ಇರುವ ಇನ್ನೊಂದು ಕಲ್ಪನೆ ಅಂದರೆ 'ಸಿರಿವಂತನಾದವರೆಲ್ಲ' ಮೆರೀತಾರೆ ಮತ್ತು ಭಿಕ್ಷುಕರಾದವರೆಲ್ಲ ಮಡೀತಾರೆ ಅಂತ! ಮೆರಿಯುವದು ಅಂದರೆ ಏನು? ನನ್ನ ಪ್ರಕಾರ ಇದು ಆರಾಮಾಗಿ ಜೀವನ/ಸಮಯ ಮಜಾ ಮಾಡುತ್ತ ಸವಿಯುವ

ಒಂದು ಮಾನಸಿಕ ಸ್ಥಿತಿ. ಆಂಗ್ಲ ಭಾಷೆಯಲು ಅಂತಾರಲ್ಲ merry ಅಂತ! ಸಿರಿವಂತಿಕೆಯ 'ಐಷಾರಾಮಿ' ಸೌಲತ್ತುಗಳನ್ನ ಅನುಭವಿಸುವದು ಅಥವಾ ಹಣ ಸುರಿದು ಆಡಂಬರದ ಪಾರ್ಟಿ ಕೊಡುವದು/attend ಆಗುವದು etc. etc. ಗಳಿಂದ ದೇಹಕ್ಕೆ ಅಲ್ಪ–ಸ್ವಲ್ಪ ಸುಖ ಸಿಕ್ಕಂತೆ ಅನಿಸಬಹುದು ಆದರೆ ಮಾನಸಿಕವಾಗಿ ಎಷ್ಟು ಸುಖ–ಸಂತೋಷ ಸಿಗುವದು ಎಂಬುದು ಸಂಶಯಾಸ್ಪದ ವಿಷಯ. ಸಿರಿವಂತರಿಗು ಮತ್ತು ಸಿರಿವಂತರೆಂದು 'ಅಂದುಕೊಳ್ಳುವ' ಮಧ್ಯಮ–ವರ್ಗದವರಿಗು ಈ ಒಂದು 'ಮೆರಿಯುವ' ಸ್ಥಿತಿ ತಲುಪುವದು ಕನಸಿನ ಮಾತೆ ಸರಿ. 'ಚಿಂತೆ–ತಾಪತ್ರಯಗಳು' ಆತಂಕವಾದಿಗಳಂತೆ ಶ್ರೀಮಂತರು, ಮಧ್ಯಮ–ವರ್ಗದ ಮನಗಳ ಮೇಲೆ ಮೇಲಿಂದ–ಮೇಲೆ ಬಾಂಬ್ ಹಾಕುತ್ತ ಅಶಾಂತಿಯ ಧ್ವಜ ಎತ್ತಿ ಹಿಡಿಯುವಲ್ಲಿ ಸಫಲವಾಗುವವು.

ಭಿಕ್ಷುಕರಿಗೆ ಯಾವ ಚಿಂತೆ ಹೇಳಿ? ದೊಡ್ಡ–ದೊಡ್ಡ ಮಹಲು ಕಟ್ಟಿ ತನ್ನ ಮನೆಯೆ ದೊಡ್ಡದೆಂದು ತೋರಿಸುವ ಸ್ಪರ್ಧೆ ಇಲ್ಲ, comparision ಕಾಯಿಲೆ ಮತ್ತು ಹೊಟ್ಟೆ–ಉರಿಯ ಭೀತಿ ಇಲ್ಲ! ಆಡಂಬರದ ಸಮಾರಂಭ, party, ಮದುವೆ ಆಗುವ/ಮಾಡುವ ಹುಚ್ಚಿಲ್ಲ, ಸಾಲ ಮಾಡುವ ಮತ್ತು ಆ ಸಾಲ ತೀರಿಸಲು ಹೆಣಗಾಡುವ ಹೊಣೆಗಾರಿಕೆ ಇಲ್ಲ, ಮಕ್ಕಳನ್ನ ಯಾವ ಸ್ಕೂಲ್–ಕಾಲೇಜುಗಳಿಗೆ ಯಾರ influenceನಿಂದ ಅಥವಾ ಎಷ್ಟು ಡೊನೇಶನ್ ತೆತ್ತು ಸೇರಿಸಬೇಕು ಅನ್ನುವ ಚಿಂತೆ ಇಲ್ಲ, ಯಾರಿಗು ಲಂಚ ಕೊಡುವ/ತಿನ್ನುವ ಮತ್ತು ಸಿಕ್ಕಿ ಬೀಳುವ ತಾಪತ್ರಯವಿಲ್ಲ, 'ವ್ಯವಹಾರ–ಚತುರ' ನಾಗಲು ಅವ್ಯವಹಾರದ ಕಪ್ಪು–ಹಣದ ಗೆಳೆಯನಾಗಬೇಕಿಲ್ಲ ಮತ್ತು ಅದರಿಂದ Income Tax ಮಾವಂದಿರ ಸಹವಾಸ ಬೇಕಿಲ್ಲ, ಒಣ ಪ್ರತಿಷ್ಠೆಯ ಹಮ್ಮಿಲ್ಲ, ಬಡಾಯಿ ಕೊಚ್ಚಿಕೊಳ್ಳುವದಾಗಲಿ ಮತ್ತು ಅದರಿಂದ ಮತ್ತೊಬ್ಬರ / ಮೇಲಧಿಕಾರಿಗಳ ದೃಷ್ಟಿಯಲ್ಲಿ ಶ್ರೇಷ್ಠರಾಗುವ ಹಂಬಲವಿಲ್ಲ, cut-throat competition ಪರಿವೆ ಇಲ್ಲ, ನೌಕರಿಗಾಗಿ/ಪ್ರಮೋಶನ್‌ಗಾಗಿ ಪ್ರಭಾವಿ ವ್ಯಕ್ತಿಗಳ ಮುಂದೆ ಹಲ್ಲು ಗಿಂಜುವ ಹರಕತ್ತು ಇಲ್ಲ, ಕಳ್ಳ–ಕಾಕರ ಭಯವಿಲ್ಲ, ಬಂಡವಾಳ ಹೂಡುವ ಅಥವಾ ರಕ್ಷಣೆ ಮಾಡುವ ಜವಾಬ್ದಾರಿ ಇಲ್ಲ, ಇರುವ ಅಲ್ಪ–ಸ್ವಲ್ಪ ಹಣ ಮತ್ತು ಅಧಿಕಾರ ತಲೆಗೆ ಏರಿ, ಹಲ ವರುಷ ಕಳೆದು ಅದರಿಂದ ಪಾಠ ಕಲಿಯುವ ಸಮಸ್ಯೆ ಇಲ್ಲ!

ಭಿಕ್ಷುಕರಿಗೆ ಒಂದೆ ಚಿಂತೆ, ಮಧ್ಯಾಹ್ನದ ಊಟ ಯಾರ ಮನೇಲಿ, ರಾತ್ರಿ ಊಟ ಯಾವ ಓಣಿಯಲ್ಲಿ, ಊಟ ಆಯಿತು ಅಂದರೆ ಮತ್ತೆ "ಮೆರೆಯೊದೇ"!

ಇದಕೆ ಇರಬೆಕು ಭಾರತೀಯ ಧಾರ್ಮಿಕ/ಸಂಸ್ಕೃತಿ ಇತಿಹಾಸದಲಿ ಸನ್ಯಾಸಿಗಳು, ತಪಸ್ವಿಗಳು, ಆಧ್ಯಾತ್ಮವಾದಿಗಳೂ 'ಭಿಕ್ಷು'ಗಳಾಗಲು ಬಯಸಿದರು. ಎಷ್ಟು ಸಂಬಳ/ಸಂಭಾವನೆ/ಹಣ ಗಳಿಸಿದರು ಕಡಿಮೆಯಾಯಿತು ಅಂತ ಅತೃಪ್ತಿಯ ಹೊಗೆಯೊಳಗೆ ಕುದಿವ ಮಧ್ಯಮ–ವರ್ಗ, ಶ್ರೀಮಂತ ವರ್ಗ, ಏನು ಇರದಿದ್ದರು ಪರವಾಗಿಲ್ಲ ಅಂತ ಶರಣರ "ಶೂನ್ಯ–ಸಂಪಾದನೆ" ತತ್ವ ನುರಿತವರಂತೆ ನಿಶ್ಚಿಂತವಾಗಿರುವ ಭಿಕ್ಷುಕವರ್ಗವ ಕಂಡು ಈ ಪ್ರಸ್ತುತ ಹಾಡನ್ನ ಈ ಕೆಳಗಿನಂತೆ ಬದಲಿ ಮಾಡಿದರೆ ಹೇಗೆ?

*ಭಿಕ್ಷುಕನಾದರೆ ಕನ್ನಡ ನಾಡಲ್ಲೆ ಮೆರೆವೆ,*
*ಸಿರಿವಂತನಾದರೆ ಕನ್ನಡ ನಾಡಲ್ಲೆ ಮಡಿವೆ..*
*ಮಧ್ಯಮನಾದರೆ ಎಲ್ಲೆಂದರಲ್ಲಿ ದುಡಿವೆ!*

## ನಾನು–ನನ್ನಾಕೆ'

ನಾ ಡೆವಲಪರು ನಾ ಮಾಡಿದಾ ಕೋಡಿಗೆ
ನಾ ಟೆಸ್ಟರು ನನ್ನಾಕೆ ಮಾಡಿದಾ ಅಡಿಗೆಗೆ
**– ಬಸವರಾಜ ಯಾದವಾಡ, ಬೆಂಗಳೂರು.**

## ನಾವು..ನಮ್ಮ ನಂಬಿಕೆಗಳು... – ಅರುಣ ಆರ್. ಯಾದವಾಡ. ಬೆಂಗಳೂರು



ಚಿಕ್ಕಂದಿನಿಂದಲೂ ತಮ್ಮ ಅಜ್ಜನವರ ನ್ಯೂಜ್ ಪೇಪರ್ ಅಂಗಡಿಯಲ್ಲಿ ಸುಧಾ, ಪ್ರಜಾಮತ, ತರಂಗ, ವಿಜಯಚಿತ್ರ, ಲಂಕೇಶ್, ವನಿತಾ, ಚಂದಮಾಮ, ಮಯೂರ, ಮಲ್ಲಿಗೆ, ಪ್ರಪಂಚ, ಬಾಲಮಿತ್ರ, ಬೊಂಬೆಮನೆ ಇತ್ಯಾದಿಗಳ ನಡುವೆ ಬೆಳೆದ ಅರುಣ ಅವರಿಗೆ ಪತ್ರಿಕೆಗಳೆಂದರೆ ತುಂಬ ಹುಚ್ಚು. ಆ ಹುಚ್ಚು ಎಂಥದ್ದು ಅಂದರೆ ನಾಲ್ಕನೇ ತರಗತಿಯಲ್ಲಿದ್ದಾಗಲೇ ಪ್ರಜಾಮತದಲ್ಲಿ ಬರುತ್ತಿದ್ದ ***'ಪೌಲಸ್ತ್ಯನ ಪ್ರಣಯ ಕಥೆಗಳು'*** ಎಂಬ ಧಾರಾವಾಹಿಯನ್ನು ಓದಿ ದೊಡ್ಡವರಿಂದ ಬೈಸಿಕೊಂಡದ್ದೂ ಇದೆ.. ! ಹೈಸ್ಕೂಲ್ ದಿನಗಳಿಂದಲೂ ಬರೆಯುವ ಹವ್ಯಾಸ ಇದೆ, ಆದರೆ ವೃತ್ತಿಪರ ಬರಹಗಾರರಲ್ಲ. ಬೆಳಗಾವಿ ಜಿಲ್ಲೆಯ ಯರಗಟ್ಟಿಯಲ್ಲಿ ಹುಟ್ಟಿ, ಯಮಕನಮರಡಿಯಲ್ಲಿ ಹೈಸ್ಕೂಲ್‌ವರೆಗೆ ವಿದ್ಯಾಭ್ಯಾಸ, ಧಾರವಾಡದಲ್ಲಿ ಪಿಯುಸಿ, ಹುಬ್ಬಳ್ಳಿಯಲ್ಲಿ ಬಿ.ಇ. ಮುಗಿಸಿ, ಕೆಲ ವರ್ಷ ಮುಂಬೈಯಲ್ಲಿ ನೌಕರಿ ಮಾಡಿದ ಅರುಣ ಇದೀಗ ತಮ್ಮ ಪತ್ನಿ ತೇಜಸ್ವಿನಿ, ಮಗಳು ಅನುಶ್ರೀ ಹಾಗೂ ಇದೀಗ ಜನಿಸಿರುವ ಮಗನೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

**ನ**ಮ್ಮ ಕಡೆ ಉತ್ತರ ಕರ್ನಾಟಕದಲ್ಲಿ ಕೆಲವು ನಂಬಿಕೆಗಳು ಪ್ರಚಲಿತದಲ್ಲಿವೆ.ಇಂಥ ನಂಬಿಕೆಗಳು ಜಗತ್ತಿನ ಎಲ್ಲಾ ಭಾಗಗಳಲ್ಲಿ ಇರಬಹುದು..ಇರುತ್ತವೆ. ಇವು ಮೂಢ ನಂಬಿಕೆಗಳೊ ಅಥವಾ ರೂಢ ನಂಬಿಕೆಗಳೊ ಎಂಬುದರ ಬಗ್ಗೆ ಇಲ್ಲಿ ಚರ್ಚೆ ಇಲ್ಲ.ಆದರೆ ಇಂಥ ಎಲ್ಲಾ ನಂಬಿಕೆಗಳನ್ನೇ ಅನುಸರಿಸಿಕೊಂಡೇ ನಾವೆಲ್ಲಾ ಬೆಳೆದು ಬಂದಿದ್ದೇವೆ. ಈಗ ತಿರುಗಿ ನೋಡಿದರೆ ಎಷ್ಟೊಂದು ಆಶ್ಚರ್ಯವಾಗುತ್ತದೆ. ಎಷ್ಟೊ ಸಲ ನಾವು ಯಾವುದನ್ನೂ ಪ್ರಶ್ನೆ ಮಾಡದೆಯೇ ಹಾಗೆಯೇ ಅನುಸರಿಸಿಕೊಂಡು ಬಂದಿದ್ದೇವೆ. ಇಂಥ ವಿಷಯಗಳ ಕಡೆಗೆ ಇದೊಂದು ಅಚ್ಚರಿಯ ನೋಟ.

1. ಸಂಜೆ ಆದ ಮೇಲೆ ಹುಣಿಸೆ ಹಣ್ಣು ತಿನ್ನಬಾರದು.
2. ಸಂಜೆ ಆದ ಮೇಲೆ ಉಗುರು ಕತ್ತರಿಸಿಕೊಳ್ಳಬಾರದು.
3. ಸಂಜೆ ಆದ ಮೇಲೆ 'ಉಪ್ಪು' ಎನ್ನುವ ಶಬ್ದ ಉಪಯೋಗಿಸಬಾರದು. ಅದರ ಬದಲು "ಸಕ್ಕರೆ" ಅಥವಾ "ಖುತಿ" ಅನ್ನುವ ಶಬ್ದಗಳನ್ನು ಉಪಯೋಗಿಸಬಹುದು.
4. ಸಂಜೆ ಹೊತ್ತಿನಲ್ಲಿ ಎಲ್ಲರೂ ಮಾತನಾಡುತ್ತ ಕುಳಿತಾಗ ಹಲ್ಲಿ ನುಡಿದರೆ ಆ ಮಾತು ಸತ್ಯವಾಗುತ್ತದೆ.
5. ಮನೆಯಲ್ಲಿ ಯಾರಿಗಾದರೂ ಬಿಕ್ಕಳಿಕೆ ಬಂದರೆ , ಅವರನ್ನು ಯಾರೋ ನೆನಪು ಮಾಡಿಕೊಳ್ಳುತ್ತಿದ್ದಾರೆ ಎಂದು ಅರ್ಥ.
6. ಮನೆಯ ಮಾಳಿಗೆ ಮೇಲಿನ ಕಾಗೆ ಸ್ವಲ್ಪ ಜಾಸ್ತಿ ಹೊತ್ತು ಕಾ ಕಾ ಅಂತಾ ಕೂಗಿದರೆ ಊರಿನಿಂದ ಯಾರೋ ಬರುತ್ತಾರೆ ಅಂತಾ ಅರ್ಥ.
7. ಮನೆಯಲ್ಲಿ ಆಕಸ್ಮಿಕವಾಗಿ ಹಂದಿಯೊಂದು ಒಳ ಬಂದರೆ ಅದು ವಿಷ್ಣು ದೇವತೆ ಮನೆಯೊಳಗೆ ಬಂದಂತೆ.
8. ಮನೆಯಲ್ಲಿ 'ಆಸ್ತಿಕ ದುರಾಯಿ' ಅಂತಾ ಬರೆದರೆ ಹಾವು, ಹುಳು, ಹುಪ್ಪಡಿ ಇತ್ಯಾದಿ ಮನೆಯಲ್ಲಿ ಬರುವದಿಲ್ಲ.
9. ಮನೆಯಲ್ಲಿ ದೋಸೆ ಮಾಡಿದರೆ, ಮೊದಲನೇ ದೋಸೆಯನ್ನು ಮನೆಯ ಹಿರಿಯ ಮಗ/ಮಗಳ ಬೆನ್ನಿಗೆ ಮೆಲ್ಲಗೆ ತಟ್ಟಿ ಮನೆಯ ಮಾಳಿಗೆಯ ಮೇಲೆ ಚೆಲ್ಲಬೇಕು.
10. ಮನೆಯಲ್ಲಿ ಅಡುಗೆ ಮಾಡುವಾಗ ಮೊದಲು ಮಾಡಿದ ಬಿಸಿ ರೊಟ್ಟಿಯನ್ನು ಮನೆಯ ಮೊದಲ ಮಗನಿಗೆ ಬಡಿಸಬಾರದು. ಹಾಗೆಯೇ ಕೊನೆಗೆ ಮಾಡಿದ ರೊಟ್ಟಿಯನ್ನು ಕೊನೆಯ ಮಗನಿಗೆ ಬಡಿಸಬಾರದು.
11. ಮನೆಯಲ್ಲಿ ಕೊನೆಯ ಮಗನ ಮದುವೆಯನ್ನು ಕೊನೆಗೆ ಮಾಡಬಾರದು.
12. ಮನೆಯ ಮುಖ್ಯ ದ್ವಾರದ ಹೊಸ್ತಿಲಿನ ಮೇಲೆ ಶೀನಬಾರದು. ಹಾಗೆ ಮಾಡಿದ್ದೇ ಆದಲ್ಲಿ ಹೊಸ್ತಿಲಿಗೆ ಹಾಗೂ ಚೌಕಟ್ಟಿನ ಮೇಲ್ಭಾಗಕ್ಕೆ ನೀರು ಚಿಮುಕಿಸಿ ಮಡಿ ಮಾಡಬೇಕು.

13. ಹೊಸ ಮನೆಯ ಗೃಹಪ್ರವೇಶದ ದಿನ ಮನೆಯೊಳಗೆ ಕರೆ ತಂದ ಆಕಳು ಮನೆಯಲ್ಲಿ ಸಗಣಿ ಹಾಕಿದರೆ ಅಥವಾ ಮೂತ್ರ ಮಾಡಿದರೆ ಅದು ಶುಭ ಸಂಕೇತ. ಅಡುಗೆ ಮನೆಯೊಳಗೆ ಮಾಡಿದರಂತೂ ಅದು ಇನ್ನೂ ಉತ್ತಮ.
14. ಹೊರಗಡೆ ಹೋಗುವಾಗ ಮುಖ್ಯ ದ್ವಾರದ ಚೌಕಟ್ಟು ತಲೆಗೆ ಬಡಿದರೆ, ಹೊರಗೆ ಹೋಗಬಾರದು. ಸ್ವಲ್ಪ ಹೊತ್ತು ಒಳಗೆ ಕುಳಿತು ನೀರು ಕುಡಿದು ಆಮೇಲೆ ಹೋಗಬೇಕು.
15. ಮನೆಮಗಳು ತಲೆದಿಂಬಿನ ಮೇಲೆ ಕುಳಿತಿದ್ದರೆ ಅವಳ ಅಪ್ಪ ಸಿಕ್ಕಾ ಪಟ್ಟೆ ಸಾಲ ಮಾಡುತ್ತಾನೆ.
16. ಮಂಗಳವಾರ ಹಾಗೂ ಶುಕ್ರವಾರ ದಿನ ಮನೆಯಲ್ಲಿ ಸ್ತ್ರೀಯರು ದುಃಖಿಸಿದರೆ ಒಳ್ಳೆಯದಾಗುವದಿಲ್ಲ.
17. ತುಂಬಿದ ಕೊಡ ಹೊತ್ತುಕೊಂಡು ಮುತ್ತೈದೆಯೊಬ್ಬಳು ಎದುರಿಗೆ ಬಂದರೆ ಅದು ಶುಭ ಸೂಚನೆ.
18. ಪುರುಷರಿಗೆ ಬಲಗಣ್ಣು ಹಾಗೂ ಸ್ತ್ರೀಯರಿಗೆ ಎಡಗಣ್ಣು ಹಾರಿದರೆ ಒಳ್ಳೆಯದು.
19. ಶವಯಾತ್ರೆಯೊಂದು ಎದುರಿಗೆ ಬಂದರೆ ಅದು ಶುಭ ಸೂಚನೆ.
20. ರಾತ್ರಿ ಹೊತ್ತು ನಾಯಿ ಅಳುತ್ತಿದ್ದರೆ ಅದು ಏನೋ ಅಶುಭದ ಸಂಕೇತ.
21. ಶ್ರಾವಣ ಮಾಸದಲ್ಲಿ ಹೇರ್ ಕಟ್/ಶೇವಿಂಗ್ ಮಾಡಿಸಿಕೊಳ್ಳಬಾರದು.
22. ದಾರಿಯಲ್ಲಿ ಲಿಂಬೆ ಹಣ್ಣು ಕಂಡರೆ , ಅದನ್ನು ದಾಟಿ ಹೋಗಬಾರದು.
23. ನಿಮ್ಮ ಹುಟ್ಟಿದ ದಿನ ಅಥವಾ ಅಮವಾಸ್ಯೆಯ ದಿನ ಹೇರ್ ಕಟ್ ಮಾಡಿಸಿಕೊಳ್ಳಬಾರದು.
24. ಮೈ ಮೇಲೆ ಆಕಸ್ಮಾತ್ ಹಲ್ಲಿ ಬಿದ್ದರೆ ಕೂಡಲೆ ಬೇವಿನ ಮರ ನೋಡಬೆಕು.
25. ಗರ್ಭಿಣಿ ಹೆಣ್ಣು ಮಗಳು ಯಾವದೇ ಹಾವನ್ನು ನೋಡಿದರೆ ಅದು ಕುರುಡು ಆಗುತ್ತದೆ.
26. ಗರ್ಭಿಣಿ ಹೆಣ್ಣು ಮಗಳು ನದಿ, ಪರ್ವತಗಳನ್ನು ದಾಟಿ ಯಾವದೇ ಊರಿಗೆ ಪ್ರಯಾಣ ಬೆಳೆಸಬಾರದು.
27. ಗರ್ಭಿಣಿ ಸ್ತ್ರೀಯರಲ್ಲಿ ಮಗುವಿನ ಅಲುಗಾಟ ಎಡಗಡೆಗೆ ಜಾಸ್ತಿ ಇದ್ದರೆ ಹೆಣ್ಣು ಮಗು ಆಗುತ್ತದೆ ಅಂತಾ ಭಾವನೆ.
28. ಹೋಮ ನಡೆಸುವದನ್ನು ನೋಡುವದು ಗರ್ಭಿಣಿ ಸ್ತ್ರೀಯರಿಗೆ ನಿಷಿದ್ಧ.
29. ಗರ್ಭಿಣಿ ಸ್ತ್ರೀಯರ ಮುಖದ ಬಣ್ಣ ಕಪ್ಪಗಾಗುತ್ತಿದ್ದರೆ ಅವರು ಗಂಡು ಮಗುವಿಗೆ ಜನ್ಮ ನೀಡುತ್ತಾರೆ.
30. ಗರ್ಭಿಣಿ ಸ್ತ್ರೀಯರು ಗಾಯತ್ರಿ ಮಂತ್ರವನ್ನು ನುಡಿಯಬಾರದು. ಹಾಗೆ ಮಾಡಿದರೆ ಗರ್ಭಪಾತ ಆಗುವ ಸಂಭವ ಜಾಸ್ತಿ.
31. ಇಬ್ಬರು ನಾದಿನಿಯರು ಗರ್ಭಿಣಿಯಾಗಿದ್ದರೆ ಪರಸ್ಪರ ನೋಡಬಾರದು ಹಾಗು ಒಂದೇ ಸಮಾರಂಭದಲ್ಲಿ ಭೆಟ್ಟಿ ಆಗಬಾರದು.
32. ಮೂರು ಗಂಡು ಮಕ್ಕಳ ಮೆಲೆ ಒಂದು ಹೆಣ್ಣು ಮಗು ಆದರೆ ಅಥವಾ ಮೂರು ಹೆಣ್ಣು ಮಕ್ಕಳ ಮೇಲೆ ಒಂದು ಗಂಡು ಮಗು ಆಗುವದು ಒಳ್ಳೆಯದಲ್ಲ.
33. ಗ್ರಹಣ ಸಮಯದಲ್ಲಿ ಮಕ್ಕಳು ಹುಟ್ಟಿದರೆ ಒಳ್ಳೆಯದಲ್ಲ. ಅದಕ್ಕೆ ಶಾಂತಿ ಮಾಡಿಸಬೇಕು.
34. ಯಾರಿಗಾದರೂ ಮಕ್ಕಳು ಆಗದಿದ್ದರೆ ಇನ್ನೊಬ್ಬರ ಮನೆಯಲ್ಲಿನ ಗಣೇಶನ ಮೂರ್ತಿಯನ್ನು ಕಳವು ಮಾಡಿದರೆ ಮಗು ಅಗುತ್ತದೆ.
35. ಬೆಳಗಿನ ಜಾವ ಬರುವ ಕನಸುಗಳು ಸತ್ಯವಾಗುತ್ತವೆ.
36. ಚಿಕ್ಕ ಮಕ್ಕಳು ಊಟ, ನೀರು ಬಿಟ್ಟು ಹಠ ಮಾಡುತ್ತಿದ್ದರೆ, ಕಾಲ್ದುಳಿ ಮಾಡಿ ದೃಷ್ಟಿ ತೆಗೆದರೆ ಸಮಸ್ಯೆ ಪರಿಹಾರವಾಗುತ್ತದೆ. (ಕಾಲ್ದುಳಿ ಅನ್ನುವದು ಮಕ್ಕಳು ಊಟ ಮಾಡದೇ ಅರ್ಧಕ್ಕೆ ಬಿಟ್ಟ ತಟ್ಟೆಯಲ್ಲಿ ಮಾಡುವ ಒಂದು ಸಣ್ಣ ಪ್ರಯೋಗ.)
37. ಕೆಟ್ಟದ್ದನ್ನೇನನ್ನೋ ನೋಡಿ ಮಕ್ಕಳು ರಾತ್ರಿ ಹೊತ್ತು ಭಯ ಪಡುತ್ತಿದ್ದರೆ ಕಡಚಿಯನ್ನು ಒಲೆಯಲ್ಲಿ ಚೆನ್ನಾಗಿ ಕಾಯಿಸಿ, ನಂತರ ಅದನ್ನು ನೀರಲ್ಲಿ ಅದ್ದಿ ಹೊರತೆಗೆಯಬೇಕು. ಆ ನೀರು ಆರಿದ ಮೇಲೆ ಮಕ್ಕಳು ಕುಡಿದರೆ ರಾತ್ರಿ ಹೊತ್ತು ಯಾವದೇ ಭಯವಿಲ್ಲದೇ ನಿದ್ರಿಸುತ್ತವೆ. (ಕಡಚಿ ಅಂದರೆ ಚಪಾತಿ, ರೊಟ್ಟಿ ಇತ್ಯಾದಿಗಳನ್ನು ಹೆಂಚಿನ ಮೇಲೆ ಬೇಯಿಸುವಾಗ ಅವುಗಳನ್ನು ತಿರುವಿ ಹಾಕಲು ಉಪಯೋಗಿಸುವ ಸಾಧನ.)
38. ಈರುಳ್ಳಿ, ಬದನೆಕಾಯಿ ಇತ್ಯಾದಿ ತರಕಾರಿಗಳನ್ನು ಯಾವದೇ ಅಂಗಡಿಯವನು ಕೈಯಲ್ಲಿ ತೂರುತ್ತಾ ತನ್ನ ಅಂಗಡಿಯಲ್ಲಿ ಆಟವಾಡುತ್ತ ಕುಳಿತಿದ್ದರೆ, ತರಕಾರಿಗಳ ಬೆಲೆ ಏರುತ್ತದೆ.

39. ಆಕಸ್ಮಿಕವಾಗಿ ಯಾವದೇ ಹಾವೊಂದು ಯಾರದೇ ಎದೆಯ ಮೇಲೆ ಹಾಯ್ದು ದಾಟಿ ಹೋದರೆ, ಆ ವ್ಯಕ್ತಿಯು ಮುಂದೆ ಜೀವನದಲ್ಲಿ ರಾಜನಾಗುತ್ತಾನೆ ಅಥವಾ ಬಹು ದೊಡ್ಡ ವ್ಯಕ್ತಿಯಾಗುತ್ತಾನೆ.
40. ಬೆಕ್ಕನ್ನು ಸಾಯಿಸುವದು ಮಹಾಪಾಪದ ಕೆಲಸ. ಆ ಪಾಪ ಆಮೇಲೆ ಚಿನ್ನದ ಬೆಕ್ಕನ್ನು ಮಾಡಿ ಪೂಜೆ ಮಾಡಿದರೂ ಪರಿಹಾರವಾಗುವದಿಲ್ಲ.
41. ದಾರಿಯಲ್ಲಿ ಹೋಗುವಾಗ ಬೆಕ್ಕು ಅಡ್ಡ ಬಂದರೆ ಹೋದ ಕೆಲಸ ಸಾಧಿಸುವದಿಲ್ಲ.
42. ಮೂರು ಜನ ಕೂಡಿ ಎಲ್ಲಿಯೂ ಹೊರಗೆ ಹೋಗಬಾರದು. ಹಾಗೆ ಹೋದರೆ ಅಂದುಕೊಂಡ ಕೆಲಸ ಆಗುವದಿಲ್ಲ. ಹಾಗೆ ಹೊಗಲೇಬೇಕೆಂದಿದ್ದರೆ, ಜೊತೆಗೆ ಒಂದು ಕಲ್ಲನ್ನೊ ಇಲ್ಲ ಅಡಿಕೆಯನ್ನೊ ತೆಗೆದುಕೊಂಡು ಹೋಗಬೆಕು.
43. ನೀವು ಯಾವುದೇ ಊರಿಗೆ ಹೋದರೆ, 9ನೇ ದಿನ ಮರಳಿ ಪ್ರಯಾಣ ಮಾಡಬಾರದು.
44. ಮಂಗಳವಾರ ದಿನ ಮಗಳನ್ನು (ಗಂಡನ ಮನೆಗೆ ಅಥವಾ ಇನ್ನಾವುದೇ ಮನೆಗೆ) ಹೊರಗೆ ಕಳಿಸಬಾರದು. ಹಾಗೆಯೇ ಶುಕ್ರವಾರ ದಿನ ಸೊಸೆಯನ್ನು ಹೊರಗೆ ಕಳಿಸಬಾರದು.
45. ದಕ್ಷಿಣ ದಿಕ್ಕಿಗೆ ತಲೆ ಮಾಡಿ ಮಲಗಕೂಡದು.
46. ಮನೆಯಲ್ಲಿ ತೊಲೆಗಳ ಕೆಳಗೆ ಅಂದರೆ ಬೀಮ್‌ಗಳ ಕೆಳಗೆ ಮಲಗಕೂಡದು. ಹಾಗೆ ಮಾಡಿದರೆ ಕೆಟ್ಟ ಕನಸುಗಳು ಬೀಳುತ್ತವೆ.
47. ಮಳೆರಾಯ ಬೇಗನೆ ಬರದೆ ಇದ್ದರೆ, ಕತ್ತೆ ಪೂಜೆ ಮಾಡಿದರೆ ಮಳೆ ಆಗುತ್ತದೆ.
48. ಹೊರಗಡೆ ಹೋಗುವಾಗ ಎಲ್ಲಿ ಹೋಗುತ್ತಿದ್ದಿರೆಂದು ಕೇಳಬಾರದು. ಹಾಗೆ ಕೇಳಿದರೆ, ಹೋದ ಕೆಲಸ ಕೈಗೂಡುವದಿಲ್ಲ.
49. ಕುಕ್ಕರುಗಾಲು ಹಾಕಿಕೊಂಡು ಕೈಯಲ್ಲಿ ತಟ್ಟೆ ಹಿಡಿದುಕೊಂಡು ಊಟ ಮಾಡುತ್ತಿದ್ದರೆ, ಎರಡು ಕಾಲುಗಳು ಅಥವಾ ಕಾಲ್ಬೆರಳುಗಳು ಕ್ರಾಸ್ ಆಗಿರಕೂಡದು. ಅದು ಅರಿಷ್ಟದ ಸಂಕೇತ.
50. ಚಿಕ್ಕ ಮಕ್ಕಳಲ್ಲಿ ಹಲ್ಲುಗಳು ಬಿದ್ದಾಗ ಹೊಸ ಹಲ್ಲು ಬೇಗ ಬರಲೆಂದು ಯಾರಿಗೂ ಕಾಣದ ಹಾಗೆ ಮನೆ ಮಾಳಿಗೆಯ ಮೇಲೆ ಎಸೆಯಬೇಕು.
51. ಶಿವರಾತ್ರಿ ಹಬ್ಬದ ದಿನ ಯಾರಾದರು ಸತ್ತರೆ (ಸಾಮಾನ್ಯ ಸಾವು) ಅವರು ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ.
52. ನಿಮ್ಮ ಮನೆಯ ಹಿತ್ತಿಲಲ್ಲಿ ಬಾಳೆ ಗಿಡ ಬೆಳೆದಿದ್ದರೆ, ಅದು ಗೊನೆ ಬಿಡುವಾಗ ಮಾಡುವ ಸದ್ದು ಮನೆಯ ಮಂದಿ ಕೇಳಿಸಿಕೊಳ್ಳುವದು ಒಳ್ಳೆಯದಲ್ಲ.
53. ಬಿಲ್ವ ಪತ್ರಿ ಗಿಡವನ್ನು ಕೇವಲ ಸ್ವಾಮಿಗಳು ಮಾತ್ರ (ಉದಾ : ಆನಂದ ಹಿರೇಮಠ, ಗಿರೀಶ ಮೆಟಗುಡ್ಡಮಠ ಅವರು) ಅಥವಾ ಮಠಗಳಲ್ಲಿ, ದೇವಸ್ಥಾನಗಳಲ್ಲಿ ನೆಡಬಹುದು. ಉಳಿದವರು ತಮ್ಮ ಮನೆಗಳಲ್ಲಿ ನೆಡುವ ಹಾಗಿಲ್ಲ.
54. ಮನೆಯ ಹಿತ್ತಿಲಲ್ಲಿ ಯಾವುದೇ ಗಿಡಕ್ಕೆ ಜೇನು ಕಟ್ಟಿದರೆ ಒಳ್ಳೆಯ ಲಕ್ಷಣವಲ್ಲ.

## ಮೈಕ್ರೋಸಾಫ್ಟ್ ಫಂಡಾ.. !

ನಮ್ಮ ಮೈಕ್ರೋಸಾಫ್ಟ್ ಅಪ್ಲಿಕೇಶನ್ಸ್ ಎಲ್ಲಾ ಬಗ್ ಫ್ರೀ  
ನಿಮಗೇನಾದ್ರು ಬಗ್ ಸಿಕ್ರ ಗಾಬರಿಯಾಗ ಬ್ಯಾಡ್ರಿ..  
ಅದಕ ನಾವು ಬೇರೆಯಾಗಿ ಮಾಡುದಿಲ್ಲಾ ಚಾರ್ಜರಿ..  
ಅದಕ ನಾವು ಹೇಳುದು ನಮ್ಮದೆಲ್ಲಾ ಅಪ್ಲಿಕೇಶನ್ಸ್ ಜೋಡಿ ಬಗ್ಸ್ ಫ್ರೀ..!

**– ಬಸವರಾಜ ಯಾದವಾಡ, ಬೆಂಗಳೂರು.**

# ನೆನಪಿನಂಗಳದಿಂದ ಹೀಗೊಂದು ಕಥೆ

– ಶ್ರೀಮತಿ ಶುಭಶ್ರೀ ಜಿ. ಬೆಳಂದೂರ. ಡೆನ್‌ವೇರ್, ಕೊಲೆರಾಡೊ, ಯು.ಎಸ್.ಎ.



ಬಿ.ಇ. ಪದವಿಧರೆಯಾದರೂ, ಸಾಹಿತ್ಯದಲ್ಲಿ, ಕನ್ನಡ ಬರವಣಿಗೆಯಲ್ಲಿ ಒಳ್ಳೆಯ ಹಿಡಿತವನ್ನು ಸಾಧಿಸಿದವರು **ಶುಭಶ್ರೀ.** ಇದುವರೆಗೆ ಸಾಕಷ್ಟು ಕವಿತೆ, ಲೇಖನಗಳನ್ನು ಬರೆದಿರುವ ಶುಭಾ ನಮ್ಮ ಮತ್ತೊಬ್ಬ ತಾರೆ ಗಿರೀಶ. ಬೆಳಂದೂರ (ಸದ್ದಾಮ್) ಅವರ ಪತ್ನಿ. ಮುದ್ದಿನ ಮಗು ಸೌದಾಮಿನಿಯ ಜೊತೆ ಬಿಡುವಿಲ್ಲದ ಚಟುವಟಿಕೆಗಳ ನಡುವೆಯೂ, ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದನ್ನೇ ಫುಲ್ ಟೈಮ್ ವೃತ್ತಿಯಾಗಿ ತೆಗೆದುಕೊಂಡರೆ ಅವರಿಗೆ ಉಜ್ವಲ ಭವಿಷ್ಯವಿದೆ ಎನಿಸುತ್ತದೆ.

**ನಿ**ರಂತರದ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ರಾಜು ಹೀರೇಗೌಡರವರ "ಕನ್ಯಾನ್ವೇಷಣೆಯ ಪ್ರಸಂಗಗಳು" ಲೇಖನವನ್ನು ಓದಿ ನಗುತ್ತಿದ್ದಾಗ ಮನದ ಮೂಲೆಯಲ್ಲೆಲ್ಲೋ ಅವಿತು ಕುಳಿತಿದ್ದ, ಬಹಳ ವರ್ಷಗಳ ಹಿಂದೆ ಸಂಭವಿಸಿದ್ದ, ನೆನಪಾದಾಗೆಲ್ಲ ಮುಖದ ಮೇಲೊಂದು ನಗೆಯನ್ನು ಹುಟ್ಟು ಹಾಕುವ ಈ ಘಟನೆ ನೆನಪಾಗಿ ಅದರ ಜೊತೆಗೆ ನಗುವನ್ನೂ ತಂದಿತ್ತು. ಇಂದು, ಮುಂಬರುವ "ನಿರಂತರ"ಕ್ಕೆ ಏನಪ್ಪಾ ಬರೆಯುವುದು ಅಂತ ಯೋಚಿಸುತ್ತಿದ್ದಾಗ ತಟ್ಟನೆ ಮತ್ತೆ ನೆನಪಾಗಿ, ಸದ್ಯ ಬರೆಯುವುದಕ್ಕೊಂದು ವಿಷಯ ಸಿಕ್ತಲ್ಲ ಅಂತ ಖುಷಿಯೂ ಆಯ್ತು. ಇಷ್ಟು ದಿನ ಯಾವಾಗಲಾದರೊಮ್ಮೆ ಈ ಘಟನೆಯ ಪಾತ್ರದಾರಿಗಳನ್ನ ನೋಡಿದಾಗಲೋ, ಅಥವಾ ಅವರ ಕುರಿತು ಮನೆಯವರೊಡನೆ ಮಾತಾಡುವಾಗಲೋ, ಇಲ್ಲ ಬೇರೆ ಯಾವುದೋ ತರಹದ ಅದಕ್ಕೆ ಹೋಲಿಕೆಯಾಗುವಂತಹ ಯಾವುದಾದರೂ ಪ್ರಸಂಗಗಳು ನಡೆದಾಗಲೋ, ಅಂತೂ ಯಾವುದೋ ಒಂದು ಕಾರಣಕ್ಕೆ ನಮ್ಮ ಬಾಯಿಗೊಂದಿಷ್ಟು ಗ್ರಾಸ ಒದಗಿಸುತ್ತಿದ್ದ, ಆ ಪಾತ್ರದಾರಿಗಳ ಮೇಲೊಂದಿಷ್ಟು ನಗೆಯನ್ನು ಚಿಮ್ಮಿಸುತ್ತಿದ್ದ ಈ ವಿಷಯವನ್ನು ನಿಮ್ಮ ಮುಂದಿಡುವ ಒಂದು ಪ್ರಯತ್ನ.

ಇದು ನಡೆದದ್ದು ಸುಮಾರು 24_25 ವರ್ಷಗಳ ಹಿಂದೆ. ನಾನಿನ್ನೂ ಆಗ ತಾನೆ ಪ್ರೈಮರಿ ಸ್ಕೂಲ್‌ಗೆ ಸೇರಿದ್ದೆ ಅನ್ನಿಸುತ್ತೆ. ಇದು ನಡೆದದ್ದು ಆಗ ಆದ್ರೂ ಇದನ್ನು ಆಗಾಗ ನೆನಪಿಸಿಕೊಳ್ಳುವ ನನ್ನ ಅಮ್ಮ, ಅಕ್ಕ, ಅಣ್ಣ ಇವರುಗಳಿಂದ ಕೇಳಿ, ಕೇಳಿ ನಾನೆ ಸ್ವತಃ ನೋಡಿ, ಅನುಭವಿಸಿದಷ್ಟು ನಿಚ್ಚಳವಾಗಿ ಮನದಲ್ಲಿ ಉಳಿದಿದೆ. ಹೇಗಿದ್ದರೂ ಈ ಪ್ರಸಂಗಕ್ಕೆ ಕಾರಣವಾದವರು ಈ ಬರಹವನ್ನ ಓದೋಲ್ಲ ಅನ್ನುವ ಒಂದು ಭಂಡ ಧೈರ್ಯದಿಂದ ನಿಮಗೆಲ್ಲಾ ಹೇಳಿಯೇ ಬಿಡ್ತೀನಿ. ನೀವುಗಳು ಮಾತ್ರ ಅವರೆಲ್ಲಾದ್ರು ನಿಮಗೆ ಸಿಕ್ರೆ ನಾ ಹೀಗೆಲ್ಲ ಅವರ ಬಗ್ಗೆ ಬರೆದಿದೀನಿ ಅಂತ ದಯವಿಟ್ಟು ಹೇಳ್ಬೇಡಿ.

ಸರಿ....ಇನ್ನು ಕಥೆ ಶುರು ಮಾಡ್ತೀನಿ.....ಇದರ ನಾಯಕಿ ಮತ್ತು ಅವಳ ಮನೆಮಂದಿ ಎಲ್ಲರೂ ನಮಗೆ ತುಂಬ ಹತ್ತಿರದ ಸಂಬಂಧವಲ್ಲದಿದ್ದರೂ ನಮ್ಮ ಕುಟುಂಬಕ್ಕೆ ಬಹಳ ಆಪ್ತವಾದವರು. ವಾಸವಾಗಿದ್ದದ್ದು ನಮ್ಮೂರು ಶಿವಮೊಗ್ಗದಿಂದ ಒಂದೆರಡು ಗಂಟೆಗಳ ಪ್ರಯಾಣದಿಂದ ಸಿಗುವ ಮಲೆನಾಡಿನ ಒಂದು ಹಳ್ಳಿಯಲ್ಲಿ. ಸಾಮಾನ್ಯವಾಗಿ ಮಲೆನಾಡಿನ ಎಲ್ಲ ಹಳ್ಳಿಗರಂತೆ ಇವರದ್ದೂ ಅಡಿಕೆ ತೋಟ, ಗದ್ದೆ....ಅದರ ಉತ್ಪನ್ನವೇ ಜೀವನಕ್ಕೆ ಆಧಾರ. ಅಪ್ಪ, ಅಮ್ಮ ಮನೆ ತುಂಬ ಮಕ್ಕಳು....ಇಷ್ಟು ಸಂಸಾರ. ಸುಮಾರು ಜನ ಹೆಣ್ಣುಮಕ್ಕಳಿಗೆ ಮದುವೆಯಾಗಿತ್ತು. ಉಳಿದವರು ನಮ್ಮ ಕಥಾನಾಯಕಿ ರತ್ನ ಮತ್ತು ಅವಳ ಒಬ್ಬಳು ಅಕ್ಕ. ಇವರಿಬ್ಬರ ನಡುವೆ ವಯಸ್ಸಿನ ಅಂತರ ಬಹಳವೇನು ಇರದಿದ್ದರಿಂದ ಇಬ್ಬರಿಗೂ ಒಟ್ಟಿಗೇ ವರಾನ್ವೇಷಣೆ ನಡೆದಿತ್ತು. ನಮ್ಮ ಕಥಾನಾಯಕಿ ಆಗಷ್ಟೇ ಪಿ.ಯು.ಸಿ ಮುಗಿಸಿ ತನ್ನನ್ನು ಹಾರಿಸಿಕೊಂಡು ಕುದುರೆಯ ಮೇಲೆ ಕೂರಿಸಿಕೊಂಡು ಹೋಗುವ ರಾಜಕುಮಾರನ ಹಾದಿ ಕಾಯುತ್ತಿದ್ದಳು. ಒಂದೆರಡು ವರ್ಷ ದೊಡ್ಡವಳಾದ ಇವಳಕ್ಕನದೂ ಅದೇ ಮನಸ್ಥಿತಿ. ರೂಪದಲ್ಲಿ ತಂಗಿಗಿಂತ ಚೆಲುವೆಯಾದರೂ, ಜಾತಕ ಹೊರಡಿಸಿ ಬಹಳ ದಿನಗಳಾದರೂ ಅದೇಕೋ ಅಕ್ಕನಿಗಿನ್ನೂ ಕಂಕಣಬಲ ಕೂಡಿ ಬಂದಿರಲಿಲ್ಲ. ಹೆಣ್ಣುಮಕ್ಕಳ ಜವಾಬ್ದಾರಿ ಕಳೆದುಕೊಂಡರೆ ಸಾಕಾಗಿದ್ದ ಅಪ್ಪ, ಅಣ್ಣ ಈಗೀಗ ಇಬ್ಬರ ಜಾತಕವನ್ನೂ ಎಲ್ಲಾ ಕಡೆ ಒಟ್ಟಿಗೆ ಕೊಡುತ್ತಿದ್ದರು.

ಶಿವಮೊಗ್ಗದಲ್ಲಿ ನೆಲೆಸಿದ್ದ ಒಂದು ಕುಟುಂಬದಿಂದ ಅವರ ಮಗನಿಗೆ ರತ್ನಳ ಜಾತಕ ಕೂಡಿ ಬಂದಿದೆ ಎಂದು ಅರಿತ ಅಪ್ಪ ಮಗಳನ್ನು ಕರೆದುಕೊಂಡು ವರನ ಕಡೆಯವರಿಗೆ ಹುಡುಗಿ ತೋರಿಸಲಿಕ್ಕೆ ನಮ್ಮನೆಗೆ ಬಂದರು. ಮರುದಿನ ಹುಡುಗನ ಮನೆಯಲ್ಲೇ ವಧುಪರೀಕ್ಷೆ ನಡೀತು. ನಂತರ ಎಲ್ಲಾ ನಮ್ಮನೇಗೆ ವಾಪಾಸು ಬಂದರು. ರಾಮಭಟ್ಟರಿಗೆ(ರತ್ನಳ ಅಪ್ಪ) ಶಿವಮೊಗ್ಗದ ಅಡಿಕೆ ಮಂಡಿಯಲ್ಲಿ ಸ್ವಲ್ಪ ಕೆಲಸ ಇದ್ದಿದ್ದರಿಂದ ಇಬ್ಬರೂ ನಮ್ಮಲ್ಲಿಯೇ ಉಳಿದುಕೊಂಡ್ರು. ಹುಡುಗನನ್ನು ನೋಡಿ ಬಂದವಳನ್ನ ನನ್ನ ಅಕ್ಕ "ಹೇಗಿದಾನೆ ರತ್ನ ಹುಡುಗ?" ಅಂತ ಕೇಳಿದ್ಲು. "ಅಯ್ಯೋ ತುಂಬಾ ದಪ್ಪ ಇದಾನೆ ಕಣೆ ಹುಡ್ಗ,ಅವನ ಹೊಟ್ಟೇನೆ ಇಷ್ಟು ದೊಡ್ಡ ಇದೆ ಕಣೆ!! " ಅಂತ ಬಳುಕುವ ಬಳ್ಳಿಯಂತಿದ್ದ ರತ್ನ ಕೈಯಲ್ಲಿ ಯ್ಯಾಕ್ಷ್ ಮಾಡಿ ತೋರಿಸಿ ಮೂತಿ ದಪ್ಪ ಮಾಡಿದ್ಲು. ಆದರೂ ಬ್ಯಾಂಕೊಂದರಲ್ಲಿ ಒಳ್ಳೆಯ ಕೆಲಸದಲ್ಲಿದ್ದ ಹುಡುಗ, ಒಳ್ಳೆಯ ಮನೆತನ ಇವೆಲ್ಲ ರತ್ನಳ ಅಪ್ಪ ರಾಮಭಟ್ಟರನ್ನ ಮೆಚ್ಚಿಸಿತ್ತು. ಮಾರನೆ ದಿನ ಹುಡುಗನ ಮನೆಯಿಂದ ಉತ್ತರ ಬಂತು, ನಮಗೆಲ್ಲ ಹುಡುಗಿ ಇಷ್ಟ ಆಗಿದೆ ಅಂತ. ರತ್ನಳೂ ಅದಕ್ಕೆ ಹೂಂಗುಟ್ಟಿ ತನಗೂ ಓ.ಕೆ ಅಂದಿದ್ದನ್ನ ಅವರಿಗೂ ತಿಳಿಸಾಯ್ತು. ಸರಿ, ರಾಮಭಟ್ಟರು ಆ ದಿನ ಅಡಿಕೆ ಮಂಡಿ ಕೆಲಸಕ್ಕೆ ಅಂತ ಶಿವಮೊಗ್ಗ ಪೇಟೆಗೆ ಹೋದರು. ಸಂಜೆ ನಾಲ್ಕು ಗಂಟೆ ಹೊತ್ತಿಗೆ ರತ್ನಳನ್ನು ಮೆಚ್ಚಿದ್ದ ರಮೇಶ ನಮ್ಮ ಮನೆಗೆ ಬಂದರು. ಹೇಗಿದ್ದರೂ ಮದುವೆ ಆಗುವುದು ಅಂತ ಪರಸ್ಪರ ಒಪ್ಪಿಯಾಗಿದೆ. ಆದ್ದರಿಂದ ಹುಡುಗಿಯನ್ನ ಮತ್ತೊಮ್ಮೆ ನೋಡಿ ಮಾತಾಡಿಸೋಣ ಅನ್ನಿಸ್ತೇನೋ. ನಮ್ಮ ಮನೆಯವರಿಗೆಲ್ಲ ಅವರು ದಿಡೀರ್ ಅಂತ ಹೀಗೆ ಬಂದದ್ದು ನೋಡಿ ಸ್ವಲ್ಪ ಆಶ್ಚರ್ಯಾನೆ ಆಯ್ತು. ಜೊತೆಗೆ ಹುಡುಗಿಯ ಅಪ್ಪ ಬೇರೆ ಮನೇಲಿಲ್ಲ. ಬಂದವರನ್ನ ಒಳಗೆ ಕರೆದು ಕೂರಿಸಿದ್ರು. ಎದುರುಗಿದ್ದ ನಮ್ಮಮ್ಮನ ಹತ್ತಿರ " ನಾನು ರತ್ನಾನ ಸ್ವಲ್ಪ ಹೊರಗೆ ಕರೆದುಕೊಂಡು ಹೋಗ್ತೀನಿ...ಹೀಗೆ ಸ್ವಲ್ಪ ಸುತ್ತಾಡಿ, ಮಾತಾಡಿ ವಾಪಾಸು ತಂದು ಮನೆಗೆ ಬಿಡ್ತೀನಿ. ಕಳಿಸಿ ಕೊಡ್ತೀರ? " ಅಂತ ರಮೇಶ್ ಕೇಳಿದ್ರು. ನಮ್ಮಮ್ಮನಿಗೆ ಸ್ವಲ್ಪ ಕಸಿವಿಸಿ ಶುರುವಾಯ್ತು. ನೆನ್ನೆ ಅಷ್ಟೆ ನೋಡಿದ ಹುಡುಗ. ಇವಳು ಬೇರೆ ಈ ಊರಿನ ಪರಿಚಯ ಸಾಕಷ್ಟಿಲ್ಲದವಳು. ಎಲ್ಲಿಗೆ ಕರ್ಕೊಂಡ್ ಹೋಗ್ತಾರೋ ಏನೋ? ಯಾವ ಧೈರ್ಯದ ಮೇಲೆ ಇವರೊಟ್ಟಿಗೆ ಕಳಿಸುವುದು ಅಂತ. ಒಳಗೆ ಹೋಗಿ ರತ್ನನಿಗೆ ವಿಷಯ ತಿಳಿಸಿದ್ರು. ಅವಳು ನಮ್ಮಮ್ಮನಿಗಿಂತ ಧೈರ್ಯವಾಗಿ ಹೋಗೋಕ್ಕೆ ತಯಾರಾಗಿ ನಿಂತಳು.

ರತ್ನ, ರಮೇಶ ಹೊರಗೆ ಹೋದ ಸ್ವಲ್ಪ ಹೊತ್ತಿಗೆಲ್ಲ ರಾಮಭಟ್ಟರು ವಾಪಾಸು ಬಂದರು. ಯಾಕೆ ಅವಳನ್ನ ಹೋಗೋಕ್ಕೆ ಬಿಟ್ಟೆ ಅಂತ ನಮ್ಮಮ್ಮನಿಗೆ ಹೇಳಲಿಕ್ಕೆ ಸಂಕೋಚವಾಯ್ತೇನೋ...ಅಂತೂ ಸುದ್ದಿ ತಿಳಿದೂ ಸುಮ್ಮನಿದ್ದು ಅವರು ವಾಪಾಸು ಬರುವ ದಾರಿ ಕಾಯ್ತಾ ಕೂತರು. ಅವರಿಬ್ಬರು ಹೊರಗೆ ಹೋಗಿ ಎರಡು, ಮೂರು ಗಂಟೆಯಾದ್ರೂ ಇನ್ನೂ ವಾಪಾಸಾಗುವ ಸುಳಿವೇ ಇಲ್ಲ. ಈಗ ರಾಮಭಟ್ಟರಿಗೆ ಸ್ವಲ್ಪ ಟೆನ್ಶನ್ ಆಗಕ್ಕೆ ಶುರುವಾಯ್ತು. ಹೊರಗಡೆ ಪೂರಾ ಕತ್ತಲಾಗಿದೆ. ಎಲ್ಲರ ಮನೇಲು ಊಟ ಮಾಡೋ ಹೊತ್ತಾಗಿದೆ. "ಏನೇ ರುಕ್ಮಿಣಿ(ನಮ್ಮಮ್ಮ), ಎಲ್ಹೋದ್ರೆ ಇವರಿಬ್ರು...ನೀನ್ಯಾಕೆ ಒಪ್ಪಿ ಕಳಿಸಿಕೊಟ್ಟೆ ಅವಳನ್ನ...ಅವಳಿಗಂತೂ ಒಬ್ಳೆ ಹೋಗ್ಬಾರ್ದು ಅನ್ನೋ ಬುದ್ಧಿ ಇಲ್ಲ ಅಂದ್ರೆ... ನಿನಗೇನಾಗಿತ್ತೇ..." ಅಂತ ಶುರು ಮಾಡಿದ್ರು. ನಮ್ಮಮ್ಮ, ಮತ್ತುಳಿದವರಿಗೂ ಈಗ ಸ್ವಲ್ಪ ಹೆದರಿಕೆ ಆಗಕ್ಕೆ ಶುರುವಾಯ್ತು. ಆ ಕತ್ತಲಲ್ಲಿ ಎಲ್ಲೆಲ್ಲಿ ಅಂತ ಹುಡುಕ್ಕೊಂಡ್ ಹೋಗ್ತಾರೆ. ಅಷ್ಟು ವರ್ಷದ ಕೆಳಗೆ ಫೋನಿನ ಲಭ್ಯತೇನು ಶೂನ್ಯವೇ. ಅಯ್ಯೋ ರಾಮ ಈ ಭಟ್ಟರಿಗೆ ಸುಖಾಸುಮ್ನೆ ಯೋಚನೆ ಮಾಡೋ ಹಾಗೆ ಮಾಡಿದ್ನಲ್ಲ ಅಂತ ನಮ್ಮಮ್ಮ ಟೆನ್ಶನ್ ಮಾಡ್ಕೊಂಡು ಯೋಚ್ನೆ ಮಾಡ್ತಿರ್ಬೇಕಾದ್ರೆ ಭಟ್ಟರು " ಅಲ್ವೇ ರುಕ್ಮಿಣಿ, ಅವಳ ಕೊರಳಲ್ಲಿ ಒಂದು ಚಿನ್ನದ ಸರ ಬೇರೆ ಇದೆ ಕಣೆ. ಸ್ವಲ್ಪ ದಿನದ ಕೆಳಗೆ ಮಾಡ್ಸಿದ್ದು, ಅದನ್ನಾರು ಬಿಚ್ಚಿಟ್ ಹೋಗು ಅಂತ ಹೇಳ್ಬೇಕಿತ್ತು ನೀನು. ಅದೇನಾರು ಕಳ್ದ್ ಹೋದ್ರೆ ಎಷ್ಟೊಂದ್ ನಷ್ಟ! " ಅಂತ ದುಃಖ ತೋಡಿಕೊಂಡ್ರು. ಅಂತಹ ಸಮಯದಲ್ಲೂ ಭಟ್ಟರಿಗೆ ಮಗಳಿಗಿಂತ ಚಿನ್ನದ ಸರದ ಮೇಲಿನ ಮೋಹ ನೋಡಿ ಅಲ್ಲಿದ್ದವರು ಮನದಲ್ಲೇ ನಕ್ಕರು. ಮತ್ತೊಂದು ಸ್ವಲ್ಪ ಹೊತ್ತಿನಲ್ಲೇ ಭಟ್ಟರ ಮಗಳು ಚಿನ್ನದ ಸರದ ಸಮೇತ ಸುರಕ್ಷಿತವಾಗಿ ವಾಪಸ್ ಬಂದ್ಲು. ಇವಳು @#$$%&*@ ಫಿಲ್ಮ್ ನೋಡಿರಲಿಲ್ವಂತೆ. ನೋಡ್ಬೇಕು ಅಂತ ಆಸೆ ಪಟ್ಟಳು...ಅದಕ್ಕೆ ಇಬ್ರೂ ಸಿನೆಮಾಗೆ ಹೋಗಿದ್ದೆವು ಅಂತ ರಮೇಶ ಅಷ್ಟು ಲೇಟಾಗಿದ್ದಕ್ಕೆ ಸಮಜಾಯಿಷಿ ಕೊಟ್ಟರು.( ಅವರು ನೋಡಲು ಹೋಗಿದ್ದು ಯಾವ ಫಿಲ್ಮು, ಯಾವ ಥಿಯೇಟರ್ನಲ್ಲಿ ಅಂತ ನಮ್ಮಮ್ಮನಿಗೆ ನೆನೆಪಿರಬೇಕು..ಆದ್ರೆ ನಂಗ್ಯಾಕೋ ನೆನಪಾಗ್ತಿಲ್ಲ)

ಇದೆಲ್ಲಾ ನಡೆದು ಸ್ವಲ್ಪ ದಿನಗಳ ನಂತರ ಯಾವುದೋ ಒಂದು ಸಂದರ್ಭದಲ್ಲಿ ರಮೇಶ್‌ಗೆ ರತ್ನನ ಅಕ್ಕನನ್ನು ನೋಡುವ ಅವಕಾಶ ಒದಗಿ ಬಂತು. ನಾನೇನಾದ್ರು ರತ್ನನಿಗಿಂತ ಮುಂಚೆ ಇವಳನ್ನು ನೋಡಿದ್ರೆ ಇವಳನ್ನೆ ಆಯ್ಕೆ ಮಾಡ್ಕೋತಿದ್ದೆ ಮದುವೆ ಆಗೋಕ್ಕೆ ಅನ್ನೋದೆ ಈ ವರ ಮಹಾಶಯ !! ಈ ವಿಷಯ ರತ್ನನಿಗೆ ಗೊತ್ತಾಗಿ ಅವಳು ರಮೇಶನ್ನ ಹೇಗೆ ತರಾಟೆಗೆ ತಗೊಂಡ್ಳು ಅನ್ನೋದ್ ಮಾತ್ರ ನಂಗೊತ್ತಿಲ್ಲ !!

( ನಂತರದ ಕೆಲವೇ ದಿನಗಳಲ್ಲಿ ರತ್ನನ ಅಕ್ಕನಿಗೂ ಒಳ್ಳೆಯ ಸಂಬಂಧವೇ ದೊರಕಿ ರತ್ನನ ಮದುವೆಗೂ ಮುಂಚಿತವಾಗಿಯೇ ಅವಳ ಮದುವೆಯೂ ಆಯ್ತು ಅನ್ನಿ. )

ಮದುವೆಗೆ ಮೊದಲು ಇನ್ನೊಮ್ಮೆ ರತ್ನ, ಅವಳ ಅಕ್ಕ ಮತ್ತು ತಮ್ಮ ಶಿವಮೊಗ್ಗಕ್ಕೆ ಬಂದಿದ್ದಾಗ ರಮೇಶ್‌ಗೆ ಅವೆರೆಲ್ಲರನ್ನೂ ಜೊತೆಗೇ ಕರೆದುಕೊಂಡು ಸಿನೆಮಾಗೆ ಹೋಗುವಂತ ಪರಿಸ್ಥಿತಿ ಬಂತು. ಎಲ್ಲರೂ ನಮ್ಮನೇ ಮುಂದೆ ಆಟೋ ರಿಕ್ಷಾದಲ್ಲಿ ಕುಳಿತುಕೊಳ್ಳುವಾಗ ಕೊನೆಯಲ್ಲಿ ಹತ್ತಲು ಹೊರಟ ರತ್ನಳನ್ನ ನೀನು ಇಲ್ಲೇ ಕೂತ್ಕೋ ಪರವಾಗಿಲ್ಲ ಅಂತ ರಮೇಶ್ ತಮ್ಮ ತೊಡೆ ಮೇಲೆ ಅವಳನ್ನ ಕೂರಿಸ್ಕೊಂಡು ಹೋದರು.
(ಆಟೋದಲ್ಲಿ ನಾಲ್ಕು ಜನ ಕೂರೋದು ಸ್ವಲ್ಪ ಕಷ್ಟ ತಾನೆ !!)

ಇನ್ನು ರತ್ನ ರಮೇಶರ ಮದುವೆಯ ಸಮಾರಂಭದ ಸಮಯದಲ್ಲಿ ನಡೆದ ಒಂದು ಸಂಗತಿ. ಇವರ ಮದುವೆ ನಡೆದದ್ದು ತೀರ್ಥಹಳ್ಳಿಯ ಹತ್ತಿರದ ಹಳ್ಳಿಯ ಒಂದು ದೇವಸ್ಥಾನದಲ್ಲಿ. ಮದುವೆಗೆ ಶಿವಮೊಗ್ಗದಿಂದ ಹೊರಟ ಗಂಡಿನ ಕಡೆಯವರ ಬಸ್ಸಿನಲ್ಲೇ ನಾನು, ನಮ್ಮಮ್ಮ ಮತ್ತು ನನ್ನಣ್ಣ ಹೋಗಿದ್ದೆವು. ಮದುವೆಯ ದಿನದ ಹಿಂದಿನ ರಾತ್ರಿಯೇ ನಾವೆಲ್ಲ ಅಲ್ಲಿದ್ದೆವು. ರಾತ್ರಿ ವರಪೂಜೆಯ ಕಾರ್ಯಕ್ರಮ ಇತ್ತು. ವರಪೂಜೆಯ ಶಾಸ್ತ್ರ ಎಲ್ಲಾ ಮುಗಿದು, ಎಲ್ಲರ ಊಟ ಆಗುವ ಹೊತ್ತಿಗೆ ಸರಿ ರಾತ್ರಿ. ಆ ದೇವಸ್ಥಾನದ ಸುತ್ತ ಮುತ್ತ ಎಲ್ಲ ಮಲೆನಾಡಿನ ಕಾಡು. ಒಂದರ್ಧ ಮೈಲಿಯಷ್ಟು ನಡೆದರೆ ಅಲ್ಲೊಂದು, ಇಲ್ಲೊಂದು ಮನೆ ಕಂಡೀತು. ರಾತ್ರಿ ಊಟ ಎಲ್ಲಾ ಮುಗಿದ ಮೇಲೆ ನೋಡಿದರೆ ಮದುವೆಯ ಹುಡುಗ, ಹುಡುಗಿ ನಾಪತ್ತೆ. ಹೊರಗಡೆ ಕತ್ತಲೋ ಕತ್ತಲು. ತಮಾಷೆ ಅಂದರೆ ಇವರಿಬ್ಬರು ಹೀಗೆ ಸುತ್ತಾಡೋದು ಮನೆಯವರಿಗೇನೂ ಹೊಸ ವಿಷಯ ಅಲ್ಲದಿರೋದ್ರಿಂದ ಯಾರೂ ಮದುಮಕ್ಕಳು ಎಲ್ಹೋದ್ರು ಅಂತ ಹುಡುಕೋದಕ್ಕೂ ಹೋಗ್ಲಿಲ್ಲ. ಹೇಗಾದ್ರೂ ನಾಳೆ ಮದ್ವೆಗಂತೂ ಬಂದೇ ಬರ್ತಾರೆ ಅನ್ನೋ ಗ್ಯಾರಂಟಿ ಇತ್ತೇನೋ ಎಲ್ಲರಿಗೂ!! ಮನೆಯವರೂ, ಬಂದ ನೆಂಟರಿಷ್ಟರೂ ಎಲ್ಲರೂ ಮದುಮಕ್ಕಳ ಯೋಚನೆ ಬಿಟ್ಟು ಆರಾಮಾಗಿ ನಿದ್ದೆ ಮಾಡಿದ್ರು.

ಈಗ ರತ್ನ ಮತ್ತು ರಮೇಶ್ ಮದುವೆಯಾಗಿ ಇಬ್ಬರು ಹೆಣ್ಣುಮಕ್ಕಳ ತಾಯಿ, ತಂದೆಯರಾಗಿ ಸುಖವಾಗಿದ್ದಾರೆ. ನಮ್ಮ ಮನೆಯವರಿಗೆ, ನನಗೆ ಬಹಳ ಆಪ್ತರು. ನನ್ನ ಮದುವೆಯ ನಿಶ್ಚಿತಾರ್ಥದ ಕಾರ್ಯಕ್ಕೆ ಬಂದಿದ್ದ ರತ್ನ "ಸಂಜೆ ಹೊತ್ತಿಗೆ ನೀವಿಬ್ಬರೂ(ನಾನು ಮತ್ತು ಗಿರೀಶ್) ವಾಕಿಂಗ್ ಹೋಗೋವಾಗ ಹಾಗೆ ನಮ್ಮ ಮನೆ ಕಡೇನೂ ಬನ್ನಿ" ಎಂದು ಮನೆಗೆ ಕರೆದಿದ್ದಳು. ಆದರೆ, ನಾವು ಯಾವತ್ತೂ ಮದುವೆಗೆ ಮುಂಚೆ ವಾಕಿಂಗ್/ಸಿನೆಮಾ ಅಂತ ಹೋಗೇ ಇಲ್ಲವಾದ್ದರಿಂದ ಅವರ ಮನೆಗೆ ಹೋಗೋದಿಕ್ಕೆ ಆಗ್ಲೇ ಇಲ್ಲ!!

ಈ ತರಹದ ವಿಷಯಗಳೆಲ್ಲಾ ಈಗಿನ ಕಾಲಕ್ಕೆ ತುಂಬಾ ಸಾಮಾನ್ಯ ಸಂಗತಿಗಳು ಅಂತ ಅನ್ನಿಸಬಹುದೇನೋ. ಆದರೆ ಇದು ನಡೆದದ್ದು ಮೊದಲೇ ಹೇಳಿದಂತೆ 24–25 ವರ್ಷಗಳ ಹಿಂದೆ. ಈಗ ರತ್ನ–ರಮೇಶ್ ದಂಪತಿಗಳಿಗೆ ಮದುವೆ ವಯಸ್ಸಿಗೆ ಬಂದ ಮಗಳಿದ್ದಾಳೆ.

## ಒಗಟುಗಳು – ಶ್ರೀಮತಿ. ದೀಪಾ ಪಿ.ರಾಜಗೋಳಿ, ಬೆಂಗಳೂರು



ಕಂಪ್ಯೂಟರ್ ಸೈನ್ಸ್‌ನಲ್ಲಿ ಇಂಜಿನಿಯರಿಂಗ್‌ನಲ್ಲಿ ಪದವೀಧರೆಯಾಗಿರುವ ದೀಪಾ ಅವರು ನಮ್ಮ ನಿರಂತರಕ್ಕಾಗಿಯೇ ವಿಶೇಷವಾಗಿ ಈ ಒಗಟುಗಳನ್ನು ಕಲೆ ಹಾಕಿ ಕಳುಹಿಸಿದ್ದಾರೆ. ಇದೀಗ ಪತಿ ಪ್ರಕಾಶ ಅವರೊಡನೆ ಮುದ್ದು ಕಂದನ ಆಗಮನದ ನಿರೀಕ್ಷೆಯ ನಡುವೆ, ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆಯೂ ಬರೆದು ಕಳುಹಿಸಿದ್ದಾರೆ. ತಾವೆಲ್ಲರೂ ಓದಿ ಆನಂದಿಸಿ.

ಟಿಪಿ ಬಳಗದ ಸದಸ್ಯರೆಲ್ಲರಿಗೂ ಮತ್ತು ಅವರ ಹತ್ತಿರದವರೆಲ್ಲರಿಗೂ ನನ್ನ ನಮಸ್ಕಾರಗಳು. ನಿರಂತರದ ದೀಪಾವಳಿಯ ಮತ್ತು ಹೊಸ ವರ್ಷದ ವಿಶೇಷಾಂಕಗಳನ್ನು ಓದಿದೆ. ತುಂಬಾ ಚೆನ್ನಾಗಿ ಬಂದಿವೆ. ನಿರಂತರದ ಯುಗಾದಿ ವಿಶೇಷಾಂಕಕ್ಕೆ ಏನಾದರೂ ಬರೆದು ಕಳಿಸಬೇಕು ಎಂದು ವಿಚಾರಿಸಲಾಗಿ ನನಗೆ ತಕ್ಷಣ ಹೊಳೆದದ್ದು ಈ ಒಗಟುಗಳು.
ನನ್ನವರ ಪ್ರೋತ್ಸಾಹದಿಂದ ನಾನು ಸಂಗ್ರಹಿಸಿ ಕಳಿಸಿರುವ ಈ ಒಗಟುಗಳನ್ನು ನೀವು ಮೆಚ್ಚುತ್ತೀರೆಂದು ನಂಬುತ್ತೇನೆ.

ಕೆಲವು ಸ್ಯಾಂಪಲ್ಲುಗಳನ್ನು ಇಲ್ಲಿ ಕೊಡಲಾಗಿದೆ.

1. ಅಡವಿಯಲ್ಲಿ ಹುಟ್ಟಿ ಗಿಡಮರವಾಗಿ ಬೆಳೆದು ಕಡಿದರೆ ಕಂಪ ಸೂಸುತಿಹುದು...ಏನದು?
2. ಎರಡು ಮನೆಗೆ ಒಂದೆ ಗೋಡೆ.
3. ಕಿರೀಟವುಂಟು ರಾಜನಲ್ಲ, ಗಡ್ಡವುಂಟು ಸಾಧುವಲ್ಲ, ರೆಕ್ಕೆಯುಂಟು ಹಾರಲಾರೆ ಹಾಗಾದರೆ ನಾನು ಯಾರು?
4. ಮುಳ್ಳು ಇದೆ ಗಿಡಾ ಅಲ್ಲ, ಅಂಕಿ ಇದೆ ಪುಸ್ತಕವಲ್ಲ, ಚಕ್ರ ಇದೆ ಗಾಡಿಯಲ್ಲ, ಗಂಟೆ ಇದೆ ದೇವಸ್ಥಾನವಲ್ಲ ಹಾಗಾದರೆ ನಾನಾರು?
5. ಮರದಾಗ ಮರಹುಟ್ಟಿ, ಮರ ಬೆಳೆದು, ತಿನ್ನಲಾರದ ಹಣ್ಣು ಭಾಳ ರುಚಿ.
6. ಮಳೆ ಇಲ್ಲ ಬೆಳೆ ಇಲ್ಲ ಮೈಯೆಲ್ಲಾ ಹಸಿರು, ಎಲೆಯಿಲ್ಲ ಸುಣ್ಣ ಇಲ್ಲ ಬಾಯೆಲ್ಲಾ ಕೆಂಪು. ನಾನಾರು?
7. ಹಗ್ಗ ಹಾಸೈತಿ ಕೋಣ ಮಲಗೈತಿ.
8. ಹಾರಾಡತೇನಿ ಹಕ್ಕಿ ಅಲ್ಲ, ಬಾಲ ಐತಿ ಮಂಗ್ಯಾ ಅಲ್ಲ, ಕೊಂಬು ಅದಾವ ಎತ್ತು ಅಲ್ಲಾ, ಹಾಗಾದರೆ ನಾನಾರು?
9. ಅಣ್ಣಗೆ ಆರು ಕಣ್ಣು, ತಮ್ಮಗ ಮೂರು ಕಣ್ಣು, ನನಗೆ ಮಾತ್ರ ಒಂದೆ ಕಣ್ಣು ನಾವು ಯಾರು?
10. ನೀರು ಐತಿ ಹೊಳಿ ಅಲ್ಲ, ಚಿಪ್ಪು ಐತಿ ಆಮೆ ಅಲ್ಲ, ಮೂರು ಕಣ್ಣು ಅದಾವು ಶಿವ ಅಲ್ಲ, ಜುಟ್ಟು ಐತಿ ಭಟ್ಟ ಅಲ್ಲ ಹಾಗಾದ್ರ ನಾನು ಯಾರು?
11. ಸುತ್ತ ಮುತ್ತ ಸುಣ್ಣದ ಗೋಡೆ ಆದರ ಒಂದು ಕಡೇನೂ ಬಾಗಿಲsss ಇಲ್ಲ.
12. ಅತ್ತೊಂದ್ಮಾರು ಇತ್ತೊಂದ್ಮಾರು ಅಳಿಗ್ಯಾಡತೈತಿ, ನೂರೊಂದು ಕಾಯಿ ಅದಾವ ಆದ್ರ ವರ್ಷಕ್ಕೊಂದೇ ಫಲ ಕೊಡತೈತಿ ಏನದು?
13. ಕಾಲಿಲ್ಲದ ಓಡತೈತಿ, ಬಾಯಿಲ್ಲದ ಬಡಬಡಸತೈತಿ, ಮಳಿಗಾಲದಾಗ ಹಿಗ್ಗತೈತಿ, ಬ್ಯಾಸಿಗಿಯೊಳಗ ಕುಗ್ಗತೈತಿ ಯಾವುದು?
14. ಊರು ಐತಿ ಮಂದಿ ಇಲ್ಲ, ನದಿ ಐತಿ ನೀರಿಲ್ಲ, ರಸ್ತೆ ಐತಿ ಗಾಡಿ ಇಲ್ಲ, ನಾನು ಯಾರು?
15. ತಲ್ಯಾಗ ಕಿರೀಟ ಐತಿ ರಾಜಾ ಅಲ್ಲ, ಕೊಳ್ಳಾಗ ಕಪ್ಪು ಐತಿ ಶಿವ ಅಲ್ಲ, ಮೈಯೆಲ್ಲಾ ಕಣ್ಣು ಅದಾವ ಇಂದ್ರ ಅಲ್ಲಾ ಹಾಗಾದ್ರ ನಾನು ಯಾರು?
16. ಕಪ್ಪೆ ಮುಟ್ಟದ ಕೈಲಾಸದ ನೀರು ಯಾವುದು?
17. ಗಂಗೆ ಧರಿಸಿರುವೆ ಗಂಗಾಧರನಲ್ಲ, ಮೂರು ಕಣ್ಣುಂಟು ಮುಕ್ಕಣ್ಣನಲ್ಲ, ಬೂದಿ ಬಳಿದುಕೊಂಡಿರುವೆ ಸನ್ಯಾಸಿಯಲ್ಲ ಹಾಗಾದರೆ ನಾನು ಯಾರು?

18. ಅಂಗಿ ಕಳಿ ಬಾವ್ಯಾಗ ಇಳಿ.
19. ಬಂಗಾರ ಒಗಿ ಬೆಳ್ಳಿ ಇಟಗೊ.
20. ಇದನ್ನ ಕಡದರ ವಿಷ ಏರುದಿಲ್ಲ, ಕೆಂಪಗ ಐತಿ ಬೆಂಕಿ ಅಲ್ಲ, ಸೀನು ಬರಿಸತ್ತೈತಿ ನೆಗಡಿಯಲ್ಲ ಎನದು?
21. ಬಿಚ್ಚಿದರೆ ಅರಳುತ್ತೈತಿ, ಮಡಚಿದರ ಕುಗ್ಗತತಿ ಆದರ ಹೂವು ಅಲ್ಲ, ಮಳೆಗೂ ಬೇಕು ಬಿಸಿಲಿಗೂ ಬೇಕು ಯಾವುದು?
22. ಸಿಂಹ ಐತಿ ಕಾಡು ಅಲ್ಲ, ಅಂಕಿ ಅಕ್ಷರ ಅದಾವ ಪುಸ್ತಕ ಅಲ್ಲ, ತೆನಿ ಅದಾವ ಹೊಲಾ ಅಲ್ಲ, ನಾ ಇಲ್ಲದ ಎನು ನಡೀದುಲ್ಲ ಹಾಗಾದ್ರ ನಾನು ಯಾರು?
23. ನಮಗೆಂದೇ ಇಟ್ಟದ್ದನ್ನು ಬೇರೆಯವರೆ ಹೆಚ್ಚಾಗಿ ಬಳಸುವಂತದು ಎನು?

**ಉತ್ತರಗಳು: ನಿಮ್ಮ ಅನಿಸಿಕೆಗಳು ವಿಭಾಗದ ಮುಂಚೆ.**

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ

ಹೊಂಗೆ ಹೂವ ತೊಂಗಲಲ್ಲಿ ಭೃಂಗದ
ಸಂಗೀತ ಕೇಳಿ ಮತ್ತೆ ಕೇಳಬರುತಿದೆ
ಬೇವಿನ ಕಹಿ ಬಾಳಿನಲ್ಲಿ ಹೂವಿನ
ನಸುಗಂಪು ಸೂಸಿ ಜೀವಕಳೆಯ ತರುತಿದೆ



ವರುಷಕೊಂದು ಹೊಸತು ಜನ್ಮ ಹರುಷಕೊಂದು
ಹೊಸತು ನೆಲೆಯು ಅಖಿಲ ಜೀವಜಾತಕೆ
ಒಂದೇ ಒಂದು ಜನ್ಮದಲ್ಲಿ ಒಂದೇ ಬಾಲ್ಯ ಒಂದೇ ಹರಯ
ನಮಗದಷ್ಟೆ ಏತಕೆ

ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೋ
ಎಲೇ ಸನತ್ಕುಮಾರದೇವ ಎಲೇ ಸಾಹಸಿ ಚಿರಂಜೀವ
ನಿನಗೆ ಲೀಲೆ ಸೇರದೋ

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ ನಮ್ಮನಷ್ಟೆ ಮರೆತಿದೆ.

**– ವರಕವಿ ಡಾ॥ ದ. ರಾ. ಬೇಂದ್ರೆ**

## ಅಂತರ್ಜಾಲ ಪ್ರಪಂಚದ ಇನ್ನೊಂದು ಮುಖ – ಪ್ರೊ. ಆರ್. ಪಿ. ಪುನಗಿನ, ಬೆಂಗಳೂರು



**ಪ್ರೊ.** ಪುನಗಿನ ಅವರ ನಿಜನಾಮಧೇಯ ರುದ್ರಪ್ಪ ಪುರುಷಪ್ಪ ಪುನಗಿನ. ಕರ್ನಾಟಕದ ಧಾರವಾಡ ಜಿಲ್ಹೆಯೊಳಗಿನ ಶಿಗ್ಗಿ ಇವರ ಹುಟ್ಟೂರು. ಹುಟ್ಟಿನಕೂಡ ಬಡತನಾನೂ ಬೆನ್ನಿಗೆ ಕಟಿಗೊಂಡ ಬಂದವರು. ನಮ್ಮ ರಾಜ್ ಗಲಗಲಿ ಒಮ್ಮೆ ಹೇಳಿದ್ದರು 'ನಾವೆಲ್ಲ ಎಮ್ಮಿ ಮೇಲೆ ಕುಂತು ಅಕ್ಷರ ಕಲತವ್ರು' ಅಂತ ಅವಾಗ ನಮ್ಮ ಗುಂಪಿನೊಳಗ ಹಿಂಗ ಹಳ್ಳಿಯೊಳಗ ಹುಟ್ಟಿ ಬೆಳದ ಬಂದವರು ಅದಾರ ಅನ್ನೋದು ಗೊತ್ತಾತು. ಹಂಗ ನೋಡಿದರ ಪ್ರೊ. ಪುನಗಿನ ಅವರು ಟಿ ಪಿ ಬಳಗಕ್ಕೆ ಇತ್ತೀಚಿನ ಪುರಾತನರು ಅಂತ ಹೇಳಬಹುದು. ಯಾಕಂದರ ನಮ್ಮ ಬಿ.ವಿ.ಬಿ ಕಾಲೇಜದಾಗ ೬೫ರಿಂದ ೯೦ತ್ತರ ತನಕ ಅಂದರ ೨೫ ವರ್ಷ ಕಲಿಸಿದ ಗುರುಗಳು. ಅಲ್ಲಿಂದ ಬೆಳಗಾವಿ ಕೆ.ಎಲ್.ಇ ಸೊಸಾಯಿಟಿ ಇಂಜಿನಿಯರಿಂಗ ಕಾಲೇಜಿಗೆ ಇವರ ಸೇವೆ ಅವಶ್ಯ ಐತಿ ಅಂತ ಇವರಿಗೆ ಪ್ರೊಫೆಸರ್ ಮತ್ತ ಹೆಡ್ ಮಾಡಿ ಎಲೆಕ್ಟ್ರಾನಿಕ್ಸ ಡಿಪಾರ್ಟಮೆಂಟಗೆ ಕರಿಸಿಕೊಂಡ್ರು. ಅಲ್ಲೆ ೧೫ ವರ್ಷ ಇದ್ದರು. ಆ ಕಾಲೇಜಿನ ಪ್ರಿನ್ಸಿಪಾಲರಾಗಿ ೨೦೦೧ ಮೇ ತಿಂಗಳದಾಗ ನಿವೃತ್ತಿ ಆದರು.

ಪ್ರೊ. ಪುನಗಿನ ಅವರು ಹೆಂಗ ಕಲಸತಾರ ಅಂತ ಹೇಳಾಕ ಬರಂಗಿಲ್ಲರಿ. ಅವರ ಕ್ಲಾಸ ಅಟೆಂಡ ಆದರನ ಅದರ ಮಜಾ ತಿಳೀತೈತಿ. ಪುನಗಿನ ಅವರ ವಿದ್ಯಾರ್ಥಿ ಬಳಗದಾಗ ಕೆಲವರು ಚೀಫ ಇಂಜಿನೀಯರ ಅದಾರ, ಇನ್ನ ಕೆಲವರು ದೊಡ್ಡ ದೊಡ್ಡ ಮಲ್ಟಿನ್ಯಾಶನಲ್ ಕಂಪನಿಯೊಳಗ ಸಾಕಷ್ಟು ಬೆಳದು ಹೆಸರ ಮಾಡ್ಯಾರ. ಪುನಗಿನ ಅವರು ಆರು ಇಂಜಿನೀಯರಿಂಗ ಪಠ್ಯ ಪುಸ್ತಕ ಬರದಾರ. ಅದರೊಳಗ 'ಇಲೆಕ್ಟ್ರಿಕಲ್ ಸರ್ಕೂಟ್ಸ್' ಪುಸ್ತಕ ಭಾಳ ಪೊಪ್ಯೂಲರ ಆಗೇತಿ. ಇವರ ವೃತ್ತಿ ಇವರಿಗೆ ಇಂಜನೀಯರಿಂಗ ಪುಸ್ತಕ ಬರೀಲಿಕ್ಕೆ ಸಹಾಯ ಆದರ ಇವರ ಜೀವನ ಕನ್ನಡ ಕತಿ, ಲೇಖನ ವಗೈರೆ ಬರೀಲಿಕ್ಕೆ ಪುಷ್ಟೀ ಕೊಟ್ಟೈತಿ.

ಅರವತ್ಮೂರು ವರ್ಷ ವಯಸ್ಸಾದರೂ ಒಂದು ದಿನ ಮನ್ಯಾಗ ಕುಂತು ಗೊತ್ತಿಲ್ಲದ ಶ್ರಮಜೀವಿ. ಬೆಳಗಾವಿಯಿಂದ ನಿವೃತ್ತಿ ಹೊಂದಿದ ಮ್ಯಾಲೆ ಎರಡ ವರ್ಷ ಶ್ರವಣಬೆಳಗೊಳದ ಬಾಹುಬಲಿ ಇಂಜಿನೀಯರಿಂಗ ಕಾಲೇಜ ಪ್ರಾಂಶುಪಾಲರಾಗಿ ಕೆಲಸ ಮಾಡಿ, ಸಧ್ಯಕ ಬೆಂಗಳೂರ ಹತ್ತರ ಚಿಕ್ಕಬಳ್ಳಾಪುರದ ಎಸ್. ಜೆ. ಸಿ ಇಂಜಿನೀಯರಿಂಗ ಕಾಲೇಜದೊಳಗ ಪ್ರೊಫೆಸರ್ ಹಾಗೂ ಹೆಡ್ ಅಂತ ಇನ್ನೂ ಸೇವೆ ಮಾಡತಾ ಅದಾರ.

ಅಜ್ಜ, ಅಜ್ಜಿ ತನ್ನ ಎರಡು ಗಂಡು ಮಕ್ಕಳೊಂದಿಗೆ ಕಾತರದಿಂದ ಕಾಯುತ್ತಿದ್ದರು. ಅಜ್ಜ ನೆಸ್‌ಕೆಫ಼ೆ ಕಾಫಿ ನಿಧಾನವಾಗಿ ಹೀರುತ್ತ ಕಾಫಿಯ ಸ್ವಾದವನ್ನು ಸವಿಯುತ್ತಾ ನಿಂತಿದ್ದ. ಇಬ್ಬರೂ ಗಂಡುಮಕ್ಕಳು ಸರತಿಯಂತೆ ಒಬ್ಬೊಬ್ಬರಾಗಿ ಅಲ್ಲಿಯೇ ನೇತಾಡುತ್ತಿದ್ದ ಟಿ. ವಿ. ಪರದೆಯ ಕಡೆಗೆ ಆಗಾಗ ಕಣ್ಣು ಹಾಯಿಸುತ್ತ ಕಾಲ ಕಳೆಯುತ್ತಿದ್ದರು. ವಿಮಾನದ ಆಗಮನ, ನಿರ್ಗಮನದ ಮಾಹಿತಿಯನ್ನು ನೋಡುತ್ತ ಅಜ್ಜಿಗೆ ಅಗಾಗ ಅಪ್ ಡೇಟ ಮಾಹಿತಿ ಕೊಡುತ್ತಿದ್ದರು. ಅಜ್ಜಿಗೆ ಮೂರು ಜನ ಮಕ್ಕಳು. ಮೂವರೂ ಕಂಪ್ಯೂಟರ್ ಇಂಜಿನಿಯರ್‌ಗಳು. ಇಬ್ಬರು ಗಂಡು ಮಕ್ಕಳಿಗೆ ಭಾರತದಲ್ಲಿಯೇ ಒಳ್ಳೆಯ ಅಂತರ್‌ರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ. ಮಗಳು ಮಧುಮತಿಗೆ ಮಾತ್ರ ಬಿ.ಇ. ಮುಗಿಸಿದ ತಕ್ಷಣ ಅಮೇರಿಕೆಯಲ್ಲಿ ಕೆಲಸ ಸಿಕ್ಕಿತ್ತು. ಅಜ್ಜಿಗೆ ಇಳಿ ವಯಸ್ಸು. ಕೂಡ್ರಲು, ಕೂತರೆ ಏಳಲೂ ಶಕ್ತಿ ಇರಲಿಲ್ಲ. ಬೇಡವೆಂದರೂ ಅಂದು ವಿಮಾನ ನಿಲ್ದಾಣಕ್ಕೆ ಬಂದಿದ್ದಳು. ಅಜ್ಜಿಗೆ

ತನ್ನ ನಾಕು ವರ್ಷದ ಮೊಮ್ಮಗಳು ಪಿಂಕಿಯನ್ನು ಆದಷ್ಟು ಬೇಗ ನೋಡುವ ಆತುರ. ಎರಡು ವರ್ಷದ ನಂತರ ಮಗಳು ಮಧು ಭಾರತಕ್ಕೆ ಬರುವವಳಿದ್ದಳು. ಪಿಂಕಿ ಮೊದಲ ಸಲ ಭಾರತದ ನೆಲದ ಮೇಲೆ ಕಾಲಿಡುವವಳಿದ್ದಳು. ಅಜ್ಜಿಯ ತಳಮಳದ ಕೊನೆಯ ಕ್ಷಣ ಬಂದಿತ್ತು. ಸಣ್ಣ ಮಗ 'ಅವ್ವ, ಅಕ್ಕನ ವಿಮಾನ ಬಂದಿಳೀತು. ನೋಡು ಅಲ್ಲೆ ಈಗ ಟಿ. ವಿ. ಮೇಲೆ ಅರೈವ್ಡ, ಅಂತ ಬಂತು' ಅಂದಾಗ ಅಜ್ಜಿಯ ಮುಖ ಅರಳಿ ಹೂವಾಗಿತ್ತು. ಎಲ್ಲರ ಕಣ್ಣುಗಳೂ ಹೊರಗೆ ಬರುವ ಯಾತ್ರಿಕರಲ್ಲಿ ಪಿಂಕಿಯನ್ನು ಹುಡುಕಲು ಪ್ರಾರಂಭ ಮಾಡಿದವು.

ಟ್ರಾಲಿಯೊಳಗ ಎರಡು ದೊಡ್ಡ ದೊಡ್ಡ ಸೂಟಕೇಸು, ಬಗಲೊಳಗ ಒಂದು ಸಣ್ಣ ಲೇಡಿಪರ್ಸು, ಮೂಗಿನ ಮ್ಯಾಲೆ ಒಂದು ಚಸ್ಮಾ ಹಾಕ್ಕೊಂಡು, ಒಂದು ಕೈಯಾಗ ಟ್ರಾಲಿ, ಇನ್ನೊಂದು ಕೈಯಾಗ  ಪಿಂಕಿ ಕೈ ಹಿಡಕೊಂಡು ಬರೋ ಮಧುಮತಿಯನ್ನು ನೋಡಿ ಅಜ್ಜಿಗೆ ಸ್ವರ್ಗ ಮೂರೇ ಗೇಣು ಉಳಿದಿತ್ತು. ಚೂಡಿದಾರ ಹಾಕ್ಕೊಂಡು, ಜಡಿ ಹಾಕ್ಕೊಂಡು ಹೋದ ಮಗಳು, ಟಾಯಿಟ ಜೀನ್ಸ ಪ್ಯಾಂಟು, ಮ್ಯಾಲೆ ಸ್ಲೀವ್ಸಲೆಸ್ಸ ಟಾಪ್ ಹಾಕ್ಕೊಂಡು ಅಮೇರಿಕದಿಂದ ತಿರುಗಿ ಬಂದಿದ್ದಳು. ಉದ್ದನ್ನ ಜಡಿ ಹೋಗಿ ಬಾಬಕಟ್ ಆಗಿತ್ತು. ಮೊಮ್ಮಗಳು ಪಿಂಕಿ 'ಹಲೋ ಅಜ್ಜಿ' ಅಂದಾಗಂತೂ ಅಜ್ಜಿ ಎರಡ ಇಂಚು ಉಬ್ಬಿ, ಮೊಮ್ಮಗಳನ್ನ ಎತ್ತಿ ಮುತ್ತಾಡಿ ಬಗಲಾಗ ಎತ್ತಿಕೊಂಡಿದ್ದಳು. 'ಏನಮ್ಮ, ಪ್ರವಾಸ ಹೆಂಗಿತ್ತು, ವಿಮಾನದಾಗ ಧಡಿಕಿ ಭಾಳ ಆತೇನ ಮತ್ತ, ಸೀಟ ಹಿಂದ ಸಿಕ್ಕಿತ್ತೇನು? ಅಂತೆಲ್ಲ ಮಗಳನ್ನ ಛೇಡಿಸುತ್ತ ಅಜ್ಜ, ಅಣ್ಣ, ತಮ್ಮ, ಟ್ರಾಲಿ ತಮ್ಮ ಕೈಯ್ಯಾಗ ತಗೊಂಡು ಟಾಟಾ ಸುಮೊ ಕಡೆಗೆ ಎಲ್ಲರೂ ನಡೆದರು. ಟ್ಯಾಕ್ಸಿ ನಿಧಾನವಾಗಿ ಮುಂದೆ ಸಾಗಿತ್ತು. ವಿಮಾನನಿಲ್ದಾಣ ಬಿಟ್ಟು ಇನ್ನೂ ಸ್ವಲ್ಪ ರಸ್ತೆದ ಮ್ಯಾಲೆ ಸುಮೋ ಹೋಗತಿತ್ತು, 'ಮಮ್ಮಿ, ವಾಟ ಇಜ ಧಿಸ್, ಕಾರ್ ಇಜ್ ಜಂಪಿಗ' ಅಂತ ಪಿಂಕಿ ಚೀರಿದಳು.  ಅವಳ ಅವ್ವ 'ಡೋಂಟ ವರಿ, ಪಿಂಕಿ. ಯುವರ್ ಬಾಡಿ ಶುಡ್ ಬಿಕಮ್ ಸ್ಟ್ರಾಂಗ ನ, ದ್ಯಾಟ್ಸ್ ವ್ಹಾಯ್ ಇಂಡಿಯನ್ ರೋಡ್ಸ್ ಆರ್ ಡಿಸೈನ್‌ಡ ಲಾಯಿಕ್ ದ್ಯಾಟ್' ಅಂತ ಸಮಾಧಾನ ಹೇಳಿದ್ದಳು. ಸುಮೋ ಟ್ಯಾಕ್ಸಿ, ಮೇಲೆ, ಕೆಳಗೆ ಕುಣಿದಾಡ್ಕೋತ ಎಲ್ಲರನ್ನೂ ಸುರಕ್ಷಿತವಾಗಿ ಮನೆಗೆ ತಂದು ಇಳಸಿತ್ತು.

ಮನೆಗೆ ಬಂದ ಮೇಲೆ ಒಬ್ಬೊಬ್ಬರಿಗೆ ಒಂದೊಂದು ಆತುರ. ಮಗಳು ಮಧು, ಮೊಮ್ಮಗಳು ಪಿಂಕಿ, ಏನ ತಿಂತಾರ ಅದನ ಬಿಸಿ ಬಿಸಿ ಮಾಡಿ ಕೊಡಬೇಕು ಅಂತ ಅಜ್ಜಿಗೆ ಅವಸರ. ತಮ್ಮನಿಗೆ, ನಮ್ಮ ಅಕ್ಕ ಅಮೇರಿಕಾದಿಂದ ಏನೇನು ತಂದಾಳ ನೋಡಬೇಕು ಅನ್ನೋ ಆತುರ. 'ಚಲೋ, ಪಿಂಕಿ. ಫಸ್ಟ ವೀ ವಿಲ್ ಗೆಟ್ ಫ್ರೆಶ್' ಅಂತ ಮಗಳು ಬಾತ ರೂಂ ಕಡೆ ಹೊರಡೋ ಗಡಿಬಿಡಿ. ಅಣ್ಣ ತನ್ನ ಕಂಪ್ಯೂಟರ್ ರೂಮಿನೊಳಗ ಹೋಗಿ ಮೊದಲು ಕಂಪ್ಯೂಟರ್ ಆನ್ ಮಾಡಿ ಇಡಬೇಕು, ಅಮೇರಿಕಾದಿಂದ ಬಂದ ತಂಗಿ ಮಧುಗೆ ತಾನು ತಂದ ಹೊಸ ಕಂಪ್ಯೂಟರ್ ತೋರಿಸಬೇಕು ಅನ್ನೋ ಅಭಿಲಾಷೆ. ಇದನೆಲ್ಲ ನೋಡಕೋತ ಅಜ್ಜ ಸೋಫಾದ ಮೇಲೆ ಅರಾಮ ಕೂತಿದ್ದ. ಮಗಳು ಸ್ನಾನ ಮುಗಿಸಿ ಹೊರಗೆ ಬಂದಳು. ಅಜ್ಜಿಯ ಕರೆ ಬಂತು. 'ಹಾಂ, ಎಲ್ಲರೂ ಊಟಕ್ಕೆ ಬರ್ರಿ' ಅಂತ.

ಅಷ್ಟರಲ್ಲಿ 'ಪಿಂಕಿ, ಯು ಗೋ ಟು ಅಜ್ಜಿ, ಷಿ ವಿಲ್ ಫೀಡ್ ಯು' ಅಂತ ತನ್ನ ಅವ್ವನಿಗೆ ಹೇಳಿದ್ದಳು. 'ಅವ್ವಾ ನೀ ಪಿಂಕಿಗೆ ಊಟಕ್ಕ ಕೊಡು, ಅಷ್ಟರೊಳಗ ನಾ ಸ್ವಲ್ಪ ಮೇಲ್ ನೊಡಿ ಬಂದ ಬಿಡ್ತೀನಿ' ಅಂತ ಮಧು ಕಂಪ್ಯೂಟರ್ ರೂಂ ಗೆ ಹೋದ್ಲು. ಅಣ್ಣಗಂತೂ ಭಾಳ ಆನಂದ ಆತು. 'ಬಾರವ ಮಧು, ನಿನ್ನ ಸಲುವಾಗೇನ ನಾನು ಬ್ರಾಡ್ ಬ್ಯಾಂಡ ಕನೆಕ್ಷನ್ ತಗೊಂಡೀನಿ. ನೀ ಏನ್ ಮೇಲ್ ನೋಡೋದ್ಯೆತಿ, ಭರಾನ ನೋಡಿ ಊಟಕ್ಕ ಬಂದ ಬಿಡು' ಅಂತ ಖುಶೀಲೆ ಹೇಳಿದ. ಮಧು ಬ್ರೌಜರ ಓಪನ್ ಮಾಡಿದ್ಲು. ಯಾಹೂ ಪೇಜ ಒಂದೊಂದ ಎಮ್ ಎಮ್, ಒಂದೊಂದ ಎಮ್ ಎಮ್ ಸಾವಕಾಶ ಓಪನ್ ಆಗಾಕ ಹತ್ತಿತ್ತು. 'ಏನ ಎಣ್ಣಾ ಇದು, ಇಂಟರ್‌ನೆಟ್ ಇಷ್ಟು ಸ್ಲೋ ಐತಿ, ಡೌನ್ ಲೋಡ  ಸ್ಪೀಡ ಎಷ್ಟ ಐತಿ' ಅಂತ ಅಣ್ಣಗ ಪ್ರಶ್ನೆ ಹಾಕಿದ್ಲು. ಹೊಸ ಕಂಪ್ಯೂಟರ್, ಬ್ರಾಡ್ ಬ್ಯಾಂಡ ಕನೆಕ್ಷನ್, ನೋಡಿ ತಂಗಿ ಖುಶಿ ಆಗ್ತಾಳ, ಅಂತ ವಿಚಾರ ಮಾಡುತ್ತಿದ್ದ ಅಣ್ಣನ ಮುಖ ಸಪ್ಪೆ ಆತು. 'ಅಯ್ಯೋ, ಡಾಯಲ್ ಅಪ್ ಕನೆಕ್ಷನ್ ಇದ್ದಾಗ ಬರೆ ಸೆಕಂಡಿಗೆ ನಾಕನೂರ್ ಬಾಯಿಟ ಇತ್ತು. ಬ್ರಾಡ್ ಬ್ಯಾಂಡ ಬಂದ ಮೇಲೆ ಎಂಟು ಕೆಬಿಪಿಎಸ್ ಆಗೇತಿ' ಅಂತ ಸಮಾಧಾನ ಹೇಳಿದ್ದ. 'ಇಲ್ಲೆ, ಮೇಲ್ ಚೆಕ್ ಮಾಡೋದು ಅವ್ಸರದಾಗ

ಮಾಡೊ ಕೆಲಸ ಅಲ್ಲ. ಮೊದಲು ಊಟ ಮಾಡೋಣ. ಆಮೇಲೆ ನೀ ಬೆಳ್ತನಕ ಮೇಲ್ ನೋಡಿವಂತಿ ಬಾ' ಅಂತ ತಂಗಿನ ಊಟಕ್ಕ ಕರಕೊಂಡು ಹೋದ.

ಎಲ್ಲರೂ ಊಟಕ್ಕೆ ಕುಳಿತರು. ಇಂಟರನೆಟ್ ಅಥವಾ ಅಂತರ್ಜಾಲ ಪ್ರಮುಖ ಚರ್ಚೆಯ ವಿಷಯವಾಗಿತ್ತು. 'ಏನ್ರಿ ಅಪ್ಪಾರ, ನಮ್ಮ ಅಮೇರಿಕಾದಾಗ ಡೌನ್ ಲೋಡ ಸ್ಪೀಡು ಮೂವತ್ತರಿಂದ ನಾಲ್ವತ್ತು ಎಮ್‌ಬಿಪಿಎಸ್ ಇರತೈತ್ರಿ. ಅಮೇರಿಕಾದಾಗ 68 ಪ್ರತಿಶತ ಜನ ಇಂಟರ್ನೆಟ್ ಉಪಯೋಗಿಸ್ತಾರ. ಎಂಭತ್ತು ಪರ್ಸೆಂಟ್ ಜನರು ತಮಗ ಬೇಕಾದ ಎಲ್ಲ ಮಾಹಿತಿನೂ ಇಂಟರ್ನೆಟ್‌ನಿಂದನ ಪಡಕೊತಾರ. ತಮ್ಮ ಆರೋಗ್ಯ ಹೆಂಗ ಛಲೊ ಇಟ್ಗೋಬೇಕು. ದೇಹಕ್ಕ ಯಾವ ಆಹಾರ ಒಳ್ಳೆಯದು. ಯಾವ ಎಕ್ಸರ್ಸಾಯಿಜ ಹೆಂಗ ಮಾಡಬೇಕು? ಹೀಂಗ ವೈಯುಕ್ತಿಕವಾಗಿ ಬೇಕಾದ ಮಾಹಿತಿಯಿಂದ ಹಿಡದ, ವ್ಯಾಪಾರ, ಹವಾಮಾನದಿಂದ ಹಿಡದ ಯಾವದೇ ಮಾಹಿತಿ ಬೇಕಾದ್ರೂ ಅಲ್ಲೆ ಇಂಟರ್ನೆಟ್ ಮೇಲೇನ ಡಿಪೆಂಡ ಆಗಿರ್ತಾರ ನೊಡ್ರಿ' ಅಂತ ಹೊಗಳಿಕಿ ಪ್ರಾರಂಭ ಮಾಡಿದ್ಲು. ಎಲ್ಲಾರೂ ಸುಮ್ಮನ ಮಧು ಹೇಳೋದನ್ನ ಕೇಳಿಕೋತ ಊಟಾ ಮಾಡೋದ್ರಾಗ ತಲ್ಲೀನ ಆಗಿದ್ದರು. 'ಏನ್ರಿ, ಅಪ್ಪಾರ್ರ, ಎಣ್ಣ, ಕೇಳಾಕ ಹತ್ತೀರೋ ಇಲ್ಲೋ' ಅಂತ ಒಂದು ಎಚ್ಚರಿಕೆ ಡೋಜ ಒಗದಾಗ ಅಜ್ಜ ಹೇಳಿದ. 'ನೋಡು ಮಧು, ನೀ ಮೊದ್ಲು ಏನೇನ ಹೇಳೋದ ಐತಿ ಹೇಳಿ ಮುಗಸು. ಆ ಮ್ಯಾಲೆ ನಾನು ಇಂಟರ್ನೆಟ್ ಬಗ್ಗೆ ನಿಮ್ಮ ಅಮೇರಿಕಾದಾಗ ಏನ್ ಪರಿಸ್ಥಿತಿ ಐತಿ, ನಮ್ಮ ಇಂಡಿಯಾ ದೇಶದಾಗ ಏನ್ ಗತಿ ಐತಿ, ಬ್ಯಾರೆ ದೇಶದಾಗ ಏನ್ ಐತಿ ಅನ್ನೋದನ್ನ ಹೇಳತಿನಿ' ಅಂತ ದೊಡ್ಡ ಸವಾಲು ಒಗದಿದ್ದ. ಮಧು ಚರ್ಚೆ ಮುಂದುವರಿಸಿದ್ದಳು.

'ಅಪ್ಪಾರ, ಅಮೇರಿಕಾದಾಗ ವ್ಯಾಪಾರ ಇಂಟರ್ನೆಟ್ ಮೇಲೇನ ನಡೀತೈತಿ ನೋಡ್ರಿ. ಲಕ್ಷಗಟ್ಟಲೆ ವ್ಯಾಪಾರೀ ವೆಬ್ ಸಾಯಿಟ ಅದಾವು. ಪ್ರಾಡಕ್ಟ್ ಬಗ್ಗೆ ಪೂರ ಮಾಹಿತಿ ವೆಬ್‌ನ್ಯಾಗ್ಗ ಸಿಗತೈತಿ. ಇನ್ನ ಯಾವ ಪ್ರೊಡಕ್ಟ್ ಒಳ್ಳೆಯದು, ಎಲ್ಲೆ, ಯಾವುದು ಸೋವಿ ಸಿಗತೈತಿ ಎಲ್ಲಾನೂ ಇಂಟರ್ನೆಟ್‌ನಿಂದನ್ನ ಅಭ್ಯಾಸ ಮಾಡಿ, ಆರ್ಡರ್ ಹಾಕಿ ಬಿಟ್ಟರ ಸಾಕು. ಸಾಮಾನು ಮನಿ ಬಾಗಲದಾಗ ಬಂದು ಬೀಳತಾವ್ರಿ. ಡಾಲರ್ ನೋಟು ಓಡಾಡಲಿಲ್ಲದಹಾಂಗ ಬಿಲಿಯನ್‌ಗಟ್ಟಲೆ ವ್ಯವಹಾರ ನೆಟ್ ಮ್ಯಾಲೇನ ನಡಿತೈತಿ ನೋಡ್ರಿ. ಇನ್ನ ಹವಾಮಾನ ಮುನ್ಸೂಚನೆ ಅಂತೂ ಭಾರಿ ಉಪಯೋಗಿ ಮಾಹಿತಿ ಬಿಡ್ರಿ. ಮುಂದಿನ ಒಂದುವಾರದಾಗ ಏನೇನ ಆಗತೈತಿ, ದಿನದ ಪ್ರತಿ ತಾಸಿನ್ಯಾಗ ಹವಾಮಾನದಾಗ ಏನ್ ಬದಲಾವಣೆ ಆಗತೈತಿ, ಮಳಿ ಯಾವಾಗ ಬರಬಹುದು, ಸ್ನೊ ಯಾವಾಗ ಬೀಳಬಹುದು, ಉಷ್ಣತಾಮಾನ ಎಷ್ಟ ಐತಿ, ಎಷ್ಟು ಸ್ಪೀಡಲೆ ಯಾವ ದಿಕ್ಕಿನಿಂದ ಗಾಳಿ ಬೀಸತೈತಿ ಹೀಂಗ ಎಲ್ಲಾ ಮಾಹಿತಿ ನೆಟ್‌ನ್ಯಾಗ ಸಿಗತೈತಿ ನೋಡ್ರಿ. ಅಪ್ಪಾರ, 'ಜಿಪಿಎಸ್' ಅಂದರ ಜಿಯೋಪೊಜಿಶನಿಂಗ ಸಿಸ್ಟೆಮ್ ಅಂತ ಒಂದ ಸಾಫ್ಟವೇರ್ ಉಪಯೋಗ ಮಾಡಿ ಅಮೇರಿಕಾದ ಪೂರ ರಸ್ತೆ ಮಾಹಿತಿ ಅದರಾಗ ಹಾಕ್ಯಾರ. ನಮಗ ಬೇಕಾದ ಏರಿಯದ ಅಡ್ರೆಸ್ಸ ಕೊಟ್ಟಬಿಟ್ಟರ ಆ ಏರಿಯಾದ ನಕಾಶ ಪರದೆ ಮ್ಯಾಲೆ ಮೂಡಿಬಿಡತೈತಿ. ಬೇಕಾರ್ರ, ನಮ್ಮ ಅಮೇರಿಕಾ ಮನಿನ ನೆಟ್ ಮ್ಯಾಲೆ ನಿಮಗ ಆ ಮ್ಯಾಲೆ ತೋರಸತೀನಿ ನೋಡುವಂತ್ರಿ. ಮತ್ತೊಂದ್ರಿ, ನಾವು ಯಾವ ಜಗಾದಿಂದ ಹೊಂಟೇವಿ, ಎಲ್ಲಿಗೆ ಹೋಗಬೇಕು ಎರಡೂ ಅಡ್ರೆಸ್ಸ ಕೊಟ್ಟಬಿಟ್ರ ನಕಾಶದಾಗ ರೂಟ ತೋರಿಸ ಬಿಡತೈತಿ. ಎಷ್ಟ ಮೈಲು ಆಗತೈತಿ, ಎಲ್ಲೆಲ್ಲೆ ಟರ್ನ್ ತಗೋಬೇಕು, ಹೋಗಾಕ ಎಷ್ಟ ನಿಮಿಷ ಬೇಕು, ಎಲ್ಲಾ ಮಾಹಿತಿ ಪರದೆ ಮ್ಯಾಲೆ ಸಿಕ್ಕಬಿಡತೈತಿ. ನಾವು ಯಾರನೂ ಏನೂ ಕೇಳಬೇಕಾಗಿಲ್ಲ ನೋಡ್ರಿ' ಅಂತ ಹೇಳೋವಾಗ ಮಧು ಊಟಾನ್ನ ಮರ್ತಿದ್ದು ನೋಡಿ ಅವರ ಅಣ್ಣ 'ಓ, ಮಧು ನೀ ಅಮೇರಿಕಾದಾಗಿನ ಇಂಟರ್ನೆಟ್ ಹೊಗಳೋದ್ರೊಳಗ ಊಟ ಮಾಡೋದ ನಿಲ್ಲಿಸೀಯಲ್ಲವಾ, ಹೊಗಳಕಿ ಹೊರಗ ಬರೋದರ ಜೊತೆಗೆ ಸ್ವಲ್ಪ ರೊಟ್ಟಿ, ಎಣಗಾಯಿ ಬದ್ನಿಕಾಯಿನೂ ಒಳ್ಗ ಹೋಗ್ತಾ ಇರ್ಲಿ. ನಿಮ್ಮ ಅವ್ವ ನಿನಗಂತ ಸ್ಪೆಶಲ್ ಡಿಶ್ ಮಾಡ್ಯಾಳ, ಹದಿನೈದು ದಿನದಿಂದ ಮಗಳ ಬರ್ತಾಳ ಅಂತ ಸೌರಸ್ಯಾಳ. ಗುರೆಳ್ಳು ಚಟ್ನಿ, ಕೆನಿಮುಸರು, ಕರಿಂಡಿ ಎಲ್ಲಾ ಮಾಡಿಟ್ಟಾಳ' ಅಂತ ಮಧುಳ ಕಾರಿಗೆ ಸ್ವಲ್ಪ ಬ್ರೇಕ್ ಹಾಕಿದ್ದ. ಊಟಕ್ಕ ಎಕ್ಸಲರೇಶನ್ ಕೊಟ್ಟಿದ್ದ. 'ಥ್ಯಾಂಕ್ಸ, ಅಣ್ಣ ಆದರ, ಅಲ್ಲೆ ಇಂಟರ್ನೆಟ್‌ನೊಳಗ ಸಿಗೋ ಮಾಹಿತಿ ನೋಡಿ, ನನಗ ಅಮೇರಿಝಂಗ ಅನಸತೈತಿ ನೋಡಣ್ಣ' 'ಅಮೇರಿಕಾದಾಗ ಜನರು ಒಂದ ದಿನಾ ಊಟ, ನೀರು ಬಿಟ್ಟ ಇದ್ದಾರು, ಆದರ ಇಂಟರನೆಟ್ ಜಾಲಾಡದಹಂಗ ಇರಕ ಆಗೋದಿಲ್ಲ ನೋಡ್ರಿ' ಅಂತ ಮತ್ತ ತನ್ನ ಪುರಾಣ ಚಾಲು ಮಾಡಿದ್ದಳು. ಇಷ್ಟೊತ್ತನ ಸುಮ್ಮನ ಊಟ ಮಾಡಕೋತ ಕೇಳಕೋತ ಇದ್ದಂತಾ ತಮ್ಮ

'ಅಕ್ಕಾ, ಅಮೇರಿಕಾದಾಗ ಊಟ ಬಿಟ್ಟು ಇಂಟರ್ನೆಟ್ ನೋಡವಲ್ಲರಾಕ, ನೀ ಇಲ್ಲೆ ಊಟ ನಿಲ್ಲಸಬ್ಯಾಡ, ಎಲ್ಲಾರೂ ಮೊದಲ ಊಟ ಮುಗಸ್ರಿ, ಆ ಮೇಲೆ ಸ್ವಸ್ಥಗಿ ಕುಂತು ಮಾತಾಡೋಣಂತ' ಅಂತ ಒಂದು ಅಭಿಪ್ರಾಯ ಮುಂದಿಟ್ಟಿದ್ದ.

'ನೀ ಏನ ಹೇಳ ತಮ್ಮ, ನೀನೂ ಒಂದ ಅಂತರ್ ರಾಷ್ಟ್ರೀಯ ಕಂಪನಿಯೊಳಗ ಕೆಲಸ ಮಾಡತೀದಿ. ಈ ದೇಶದ ಪರಿಸ್ಥಿತಿ ನಿನಗೂ ಗೊತ್ತೈತಿ. ಬ್ಯಾರೆ ದೇಶಗಳಿಗೆ ಹೋಲಿಸಿ ನೋಡಿದಾಗ ನಮ್ಮ ದೇಶದಾಗ ಅಂತರ್ಜಾಲದ ವ್ಯವಸ್ಥೆ ಇನ್ನೂ ಸುಧಾರಣೆ ಆಗಬೇಕು ಅಂತ ನಿನಗ ಅನಸತೈತೋ ಇಲ್ಲೊ ಹೇಳ ನನಗ' ಅಂತ ಮಧು ತನ್ನ ತಮ್ಮನ ಸಪೋರ್ಟ್ ಬಯಸಿದ್ದಳು. ಅಷ್ಟರೊಳಗ ಅಜ್ಜ 'ಮಧು, ಇಷ್ಟತ್ತನ ನೀನು ಊಟನ ಮಾಡಿಲ್ಲ, ಬರೆ ಮಾತಾಡೀದಿ. ಈಗ ಇಂಟರ್ನೆಟ್‌ನ ಮತ್ತೊಂದು ಮುಖ ನಿನಗ ಪರಿಚಯ ಮಾಡಸತೀನಿ. ನೀ ಊಟ ಮಾಡು. ನನ ಮಾತು ಕೇಳು' ಅಂತ ಚುಕ್ಕಾಣಿ ತನ್ನ ಕೈಯ್ಯಾಗ ತಗೊಂಡಿದ್ದ.

'ಮಧು, ನೀ ಹೇಳೋದೆಲ್ಲ ಸರಿ. ಇಂಟರನೆಟ್ ಅಥವಾ ಅಂತರ್ಜಾಲ ಈಗಿನ ಆಧುನಿಕ ಮಾಹಿತಿ ಯುಗದೊಳಗ ಒಂದು ಅಮೋಘ ಶೋಧನೆ. ಇದು ಮಾಹಿತಿ ಖಣಿ. ಜ್ಞಾನಾಭಿವೃದ್ಧಿಗೆ ಇದಕ್ಕಿಂತ ಹೆಚ್ಚಿನ ಸವಲತ್ತು ಬೇರೊಂದು ಬೇಕಾಗಿಲ್ಲ, ಒಪ್ಪತೀನಿ. ಆದರೆ, ಒಂದು ನಾಣ್ಯಕ್ಕ ಎರಡು ಮುಖ ಇರತಾವು. ಒಂದು ಫ್ಲಿಫ್ ಸಾಯಿಡು, ಇನ್ನೊಂದು ಫ್ಲಾಫ್ ಸಾಯಿಡು. ಅಂತರ್ಜಾಲದ ಒಳ್ಳೆಯ ಮುಖ ಮಾತ್ರ ನೀ ನೋಡೀದಿ. ಮತ್ತೊಂದು ಮೈ ಝುಂ ಅಂತ ನಡಕ ಬರುವಷ್ಟು ಭಯಾನಕ ಐತಿ.' ಇದನ ನೀನು ತಿಳಕೋಬೇಕು.' ಅಂತ ಅಜ್ಜ ತನ್ನ ವಿಚಾರ ಮಂಡಿಸಲಿಕ್ಕೆ ಪ್ರಾರಂಭ ಮಾಡಿದ. ಮಧು ಮಾವಿನಕಾಯಿ ಬಿಸಿಉಪ್ಪಿನಕಾಯಿ ಚಪ್ಪರಿಸಿಕೋತ ಹೇಳಿದ್ದಳು. 'ನೀವು ಏನ್ ಹೇಳಾಕ ಹತ್ತೀರಿ ಅಪ್ಪರ. ನೀವ ನಮಗ ಹಗಲೆಲ್ಲ ಹೇಳಿದ ಮಾತು ಮರತರೇನು. ಯಾವಾಗಲೂ ಪೊಜಿಟಿವ್ಹ ಆಗಿ ವಿಚಾರ ಮಾಡಬೇಕು, ಅನ್ನೋದನ್ನ.' ಅಂದಾಗ ಅಜ್ಜ ಮುಗಳ್ನಕ್ಕಿದ್ದ. ' ಹುಚ್ಚಿ, ನಾನು ಇಂಟರ್ನೆಟ್ ಬಗ್ಗೆ, ಅದರ ಉಪಯೋಗದ ಬಗ್ಗೆ ತಪ್ಪ ಅಭಿಪ್ರಾಯ ಹೇಳತಾ ಇಲ್ಲ. ಬೇರೊಂದು ನಿಜ ಸಂಗತಿ ಹೇಳತಾ ಇದ್ದೀನಿ. ಸ್ವಲ್ಪ ಲಕ್ಷ ಕೊಟ್ಟು ಕೇಳು.'

'ಅಂತರ್ಜಾಲ ಜಗತ್ತು ಅಂದರ ಒಂದು ಕತ್ತಲು ಪ್ರಪಂಚ ಇದ್ದಹಂಗ. ಈ ಪ್ರಪಂಚದಾಗ ಒಳಗ ಬರಲಿಕ್ಕೆ ಯಾರ ಪರವಾನಿಗೀನೂ ಬೇಕಾಗಿಲ್ಲ. ಇದು ಪುಕ್ಕಟೆ ಪ್ರಪಂಚ. ಇದರಿಂದ ಯಾರು ಬೇಕಾದರೂ ಪುಕ್ಕಟೆ ಮಾಹಿತಿ ಪಡೀಬಹುದು, ಮಾಹಿತಿ ಕೊಡಬಹುದು. ಉಪದೇಶ ಮಾಡಬಹುದು, ಉಪದೇಶ ಪಡೀಬಹುದು. ಅದಕ ನಾನು ಅಂತರ್ಜಾಲ ಉಪಯೋಗಿಸುವವರನ್ನ ಎರಡು ಗುಂಪುಗಳಲ್ಲಿ ವಿಂಗಡಿಸತೀನಿ. ಒಂದು ಗುಂಪು ಅಂತರ್ಜಾಲ ಜಾಲಾಡಿ ತಮ್ಮ ಜೀವನದ ಮಟ್ಟವನ್ನ ಎತ್ತರಿಸಿಕೊಳ್ಳಲಿಕ್ಕೆ ಉಪಯೋಗಿಸುವವರದು. ಮತ್ತೊಂದು ಗುಂಪು ಅಂತರ್ಜಾಲದ ಮಾಯಾಜಾಲದಾಗ ಸಿಕ್ಕು ತಮ್ಮ ಜೀವನ ಹಾಳ ಮಾಡಿಕೊಳ್ಳೋರದು. ಒಂದು ಗುಂಪಿಗೆ ಇದು ಜ್ಞಾನ, ವಿಜ್ಞಾನ, ಸಂಶೋಧನೆಗೆ ಮಾಹಿತಿ ಸಮುದ್ರ. ಇನ್ನೊಂದು ಗುಂಪಿಗೆ ಇದು ವ್ಯಭಿಚಾರದ ಕೆಂಪು ಪ್ರದೇಶ. ವಿಷ ಚಕ್ರದ ಚಕ್ರತೀರ್ಥ.'

'ಮಧು, ಈ ಅಂತರ್ಜಾಲದ ಮೂಲಕ ನಾವು ಮತ್ತೊಂದು ಜಗತ್ತನ್ನ ನಿರ್ಮಾಣ ಮಾಡಲಿಕ್ಕೆ ಹೊರಟೀವಿ. ಈ ಜಗತ್ತಿಗೆ ನಾನು ಮಿಥ್ಯಾ ಜಗತ್ತು ಅಂತೀನಿ, ಅಂದರ ನೀ 'ವರ್ಚುಯಲ್ ವರ್ಲ್ಡ' ಅಂತೀಯಲ್ಲಾ ಅದು. ಈ ಮಿಥ್ಯಾ ಜಗತ್ತಿನ ತುಂಬೆಲ್ಲಾ ಬರಿ ಸೊನ್ನೆ ಮತ್ತ ಒಂದು ಎರಡ ಅಂಕಿ ತುಂಬಿಕೊಂಡಿದ್ದರೂ, ಇಲ್ಲಿ ನಿಜ ಜಗತ್ತಿಗೆ ಬೇಕಾಗಿದ್ದು ಎಲ್ಲಾ ಐತಿ. ಒಳ್ಳೆಯದೂ ಐತಿ, ಕೆಟ್ಟದ್ದೂ ಐತಿ. ನಾವು ನಿಜ ಜೀವನದಾಗ ಜಾಗ ಖರೀದಿ ಮಾಡಿದಹಂಗ ಇಲ್ಲೀನು ಜಾಗ ಖರೀದಿ ಮಾಡಿ ಅಂಗಡಿ ಇಡಬಹುದು. ವ್ಯಾಪಾರ ಮಾಡಬಹುದು. ನೀ ಹೇಳಿದಹಂಗ ಹಣಕಾಸು ವ್ಯವಹಾರ ಮಾಡಬಹುದು. ಪತ್ರ ವ್ಯವಹಾರ ಮಾಡಬಹುದು. ಧ್ವನಿ ಮೂಲಕ ಮಾತಾಡಬಹುದು. ಪ್ರೀತಿಸುವ ಹುಡಗ ಹುಡುಗಿಯರಿಗಂತೂ ಇದು ಸ್ವರ್ಗ. ನೀ ಆಕಾಶದಾಗ, ಸಮುದ್ರದ ಒಳಗ ಮದುವಿ ಆಗಿದ್ದು ಕೇಳೀದಿ, ಆದರ ಈಗ ಈ ಅಂತರ್ಜಾಲದ ಮೂಲಕ ಕೂಡ,

ಒಬ್ಬರಿಗೊಬ್ಬರು ಭೆಟ್ಟಿ ಆಗಲಿಲ್ಲದಹಂಗ ಮದುವಿ ನಡೆಕ ಹತ್ತ್ಯಾವು. ಈ ಅಂತರ್ಜಾಲದೊಳಗ ನಮಗ ಬೇಕಾದಹಂಗ, ನಮ್ಮ ಇಚ್ಛಾನುಸಾರ, ನಮ್ಮ ಶಕ್ತ್ಯಾನುಸಾರ, ನಮ್ಮ ಜಾಣ್ಮೆಗನುಗುಣವಾಗಿ ನಮ್ಮದೇ ಆದ ಜಗತ್ತನ್ನ ನಿರ್ಮಾಣ ಮಾಡಿಕೊಳ್ಳಲಿಕ್ಕೆ ಅವಕಾಶಗಳು ಅದಾವು. ಆದರ ಈ ಮಿಥ್ಯಾ ಜಗತ್ತು ನಮ್ಮ ನಿಜ ಜಗತ್ತಿಗಿಂತ ಭಿನ್ನ ಆಗಿರಬಾರದವ! ನಮ್ಮ ನಿಜ ಜಗತ್ತಿನೊಳಗ ಸಿಗುವಂಥ ಎಲ್ಲ ಸಂಪನ್ಮೂಲಗಳನ್ನ ನಾವು ಹೆಂಗ ಒಳ್ಳೆಯದಕ್ಕ ಉಪಯೋಗ ಮಾಡತೀವಿ, ಹಂಗ ಈ ಮಿಥ್ಯಾ ಜಗತ್ತಿನೊಳಗ ಸಿಗುವಂಥ ಸಂಪನ್ಮೂಲಗಳನ್ನ ನಮ್ಮ ಜೀವನ ಮಟ್ಟ ಹೆಚ್ಚಿಸಿಕೊಳ್ಳಲಿಕ್ಕೆ ಹೆಂಗ ಉಪಯೋಗ ಮಾಡಿಕೋಬೇಕು ಅಂತ ಹೇಳಿ ಕೊಡೋರು ಬೇಕಲ್ಲ?' ಚರ್ಚೆ ಗಂಭೀರ ಸ್ವರೂಪ ತಾಳಿತ್ತು. ಮೌನದ ಛಾಯೆ ಇಣಕತಿತ್ತು. ಊಟದ ವೇಗ ಕಡಿಮೆ ಆಗಿತ್ತು.

ಅಜ್ಜಿ ತನ್ನ ಅಸಮಾಧಾನವನ್ನ ತೋಡಿಕೊಂಡಿದ್ದಳು. 'ರೀ, ಸ್ವಲ್ಪ ಸುಮ್ಮನಿರತೀರಾ, ಮಕ್ಕಳಿಗೆ ಊಟ ಮಾಡಾಕ ಬಿಡ್ರಿ. ಪಾಪ, ಮಧು ಇವತ್ತ ಬಂದೈತಿ. ನೀವು ಏನೇನರ ಹೇಳಿ ಅಕಿ ತಲಿ ಕೆಡಸಬ್ಯಾಡ್ರಿ. ಅನ್ನೋದರೊಳಗ ಪಿಂಕಿ 'ಮಮ್ಮಿ, ಆಯ್ ಯಾಮ ಫೀಲಿಂಗ ಸ್ಲೀಪಿ' ಅಂತ ತನ್ನ ಕಣ್ಣ ತೇಲಾಡಿಸಿಕೋತ ಅವರ ಅವ್ವನ ಹತ್ತರ ಓಡಿ ಬಂದಳು.  ಅವರ ಅವ್ವ ' ಗೋ ದೇರ್, ಸ್ಲೀಪ ಇನ್ ಕಂಪ್ಯೂಟರ್ ರೂಂ' ಅಂದ್ಲು. 'ನಡಿ ಪಾಪು, ನಾ ನಿನಗ ಚಪ್ಪಿ ಬಡದು ಮಲಗಸತೀನಿ' ಅಂತ ಅಜ್ಜಿ ಪಿಂಕೀನ ಎತಿಗೊಂಡು ಮಲಗಸಾಕ ಹೋದ್ಲು. 'ಅಪ್ಪಾರ, ನೀವು ಹೇಳೋದೆಲ್ಲ ಸರಿರಿ. ಆದರ ಜಗತ್ತಿನ ತುಂಬೆಲ್ಲಾ ಇಂಟರ್ನೆಟ್ 'ಉಪಯೋಗಸೋ ಜನ ಹೆಚ್ಚಾಗಾಕ ಹತ್ಯಾರ. ಅಮೇರಿಕಾದೊಳಗ ಇರುವಂಥ 331 ಮಿಲಿಯನ್ ಜನಸಂಖ್ಯಾದೊಳಗ 225 ಮಿಲಿಯನ್ ಜನರು ಇಂಟರ್ನೆಟ್ ಉಪಯೋಗಿಸ್ತಾರ. ಚೀನದೇಶದಾಗಿನ 13 ದಶಕೋಟಿ ಜನಸಂಖ್ಯಾದಾಗ 11 ಕೋಟಿ ಜನರು ಅಂತರ್ಜಾಲ ಬಳಸತಾರ. ಅಮೇರಿಕಾ ಮೊದಲನೇ ಸ್ಥಾನದೊಳಗ ಇದ್ದರ ಚೀನ ಎರಡನೇ ಸ್ಥಾನದಾಗ  ಐತ್ರಿ. ನಮ್ಮ ಹಿಂದುಸ್ತಾನ ನಾಲ್ಕನೇ ಸ್ಥಾನದಾಗ ಐತ್ರಿ. ಇಲ್ಲಿಯ 111 ಶತಕೋಟಿ ಜನರೊಳಗ 5 ಕೋಟಿ 6 ಲಕ್ಷ ಜನ ಅಂತರ್ಜಾಲ ಬಳಸತಾರ ನೋಡ್ರಿ. ಆದರ ಪ್ರತಿಶತ ಐವತ್ತಕ್ಕಿಂತ ಹೆಚ್ಚು ಜನರು ಇಂಟರ್ನೆಟ್ ಬಳಸೋ ಟಾಪ್ ಮೂವತ್ತು ದೇಶಗಳ ಪಟ್ಟಿಯೊಳಗ ನಮ್ಮ ಭಾರತ ಇಲ್ಲ ನೋಡ್ರಿ.' ಅಂತ ತನ್ನ ಅಸಮಾಧಾನ ವ್ಯಕ್ತ ಪಡಿಸಿದ್ದಳು ಮಧು.

'ಮಧು, ನೀ ಏನ್ ಅಸಮಾಧಾನ ಪಡಬೇಕಾಗಿಲ್ಲ. ಯಾಕಂದರ ಚೀನಾದಾಗ ಮತ್ತ ನಮ್ಮ ಹಿಂದುಸ್ತಾನದಾಗ ಜನಸಂಖ್ಯಾನ ಜಾಸ್ತ ಐತಿ. ಜಗತ್ತಿನ 6500 ಮಿಲಿಯನ್ ಜನಸಂಖ್ಯಾದೊಳಗ 3667 ಮಿಲಿಯನ್ ಅಂದರ ಪ್ರತಿಶತ 56 ಕ್ಕಿಂತ ಹೆಚ್ಚು ಜನರು ಏಶಿಯಾದೊಳಗ ಅದಾರ. ಅದ್ರೊಳಗ 10 ಪರ್ಶೆಂಟ ಜನ ಅಂತರ್ಜಾಲ ಬಳಸತಾರ. ಅಂತರ್ಜಾಲ ಬಳಸೋ ಜನರ ಏರಿಕೆ ಪ್ರಮಾಣ ಮಾತ್ರ ಕಳೆದ ಐದು ವರ್ಷದೊಳಗ ಆಫ್ರಿಕಾದೊಳಗ 400% ಹೆಚ್ಚ ಅಗಾಕ ಹತ್ತೇತಿ. ಈ ಏರಿಕೆ ಪ್ರಮಾಣ ಏಶಿಯಾದಾಗ 218% ಇದ್ದರ, ಜಗತ್ತಿನ ಉಳಿದ ಎಲ್ಲಾ ದೇಶಗಳು ಕೂಡಿ 156% ಐತಿ.' ಅಂತ ಅವರ ಅಣ್ಣ ಅಂಕಿ ಸಂಖ್ಯಾ ವಿವರ ನೀಡಿದ್ದ.  'ಹಲೋ, ಮಕ್ಕಳ ನನ್ನ ಕಡೇನೂ ಅಂಕಿ ಸಂಖ್ಯಿ ಅದಾವು. ಅವನ್ನ ಆ ಮೇಲೆ ಹೇಳತಿನಿ. ಈ ಅಂತರ್ಜಾಲದ ಕಪ್ಪು ಮುಖದ ಲಕ್ಷಣಗಳು ಇನ್ನೂ ಅದಾವ ಕೇಳ್ರಿ' ಅಂತ ಅಜ್ಜ ಚರ್ಚೆಯ ಮುಗದಾಣಾನ ತನ್ನ ಕಡೆ ಮತ್ತ ತಗೊಂಡಿದ್ದ.

'ಈ ಅಂತರ್ಜಾಲದ ಎರಡು ಮುಖ್ಯ  ಲಕ್ಷಣ ಅನ್ರಿ ಅಥವಾ ಅವಲಕ್ಷಣರ ಅನ್ರಿ ಅವು ಯವ್ಯಾವು ಅಂದರ, ಒಂದು 'ವ್ಯಕ್ತಿ ಗೌಪ್ಯತೆ' ಇನ್ನೊಂದು 'ಅಪ್ರತ್ಯಕ್ಷ ಸಂಬಂಧ'. ಅಂದಾಗ 'ಏನ್ರಿ ಹಂಗಂದ್ರ' ಅಂತ ಮಧು ತಕ್ಷಣ ವಿವರಣೆ ಕೇಳಿದ್ದಳು. 'ನೋಡು ಮಧು, ಈ ಅಂತರ್ಜಾಲ ವ್ಯವಸ್ಥೆ ಅಂದರ ತೆರೆದ ಜಗತ್ತಿದ್ದಹಂಗ. ತೆರೆದ ಇಟ್ಟ ಪುಸ್ತಕ ಇದ್ದಹಂಗ. ಯಾರ ಬೇಕಾದರೂ ಯಾವ ಪುಸ್ತಕವನ್ನಾದರೂ ತೆರೆಯ ಬಹುದು. ಯಾವ ಪುಟವನ್ನಾದರೂ ತೆರೆಯ ಬಹುದು. ಈ ವ್ಯವಸ್ಥೆ ತೆರೆದ ಜಗತ್ತಾದರೂ ವೈಯುಕ್ತಿಕವಾಗಿ ವ್ಯಕ್ತಿಗಳು ಇಲ್ಲಿ ಗೌಪ್ಯವಾಗಿರ ಬಹುದು. ಮಾಹಿತಿ ಕೊಡೋರು ಇಲ್ಲಿ ಕಾಣೋದಿಲ್ಲ, ಮಾಹಿತಿ ಪಡೆಯೋರು ಕಾಣೋದಿಲ್ಲ. ಎಲ್ಲರೂ ತಮ್ಮ ತಮ್ಮ ಮುಖಕ್ಕ ಕಪ್ಪು ಬಟ್ಟೆ ಕಟಗೊಂಡು ಒಬ್ಬರ ಮುಖ ಒಬ್ಬರಿಗೆ

ಕಾಣಲಾರದಹಂಗ ಜಗತ್ತಿನ ತುಂಬೆಲ್ಲ ಹರದಾಡಲಿಕ್ಕೆ ಇಲ್ಲೆ ಅವಕಾಶಗಳುಂಟು. ಈ ಅಂತರ್ಜಾಲ ಜಗತ್ತಿನೊಳಗ ಅದನ್ನು ಉಪಯೋಗಿಸ್ತಿರುವ ಒಬ್ಬನೇ ಇಡೀ ಅಂತರ್ಜಾಲ ಜಗತ್ತಿನ ಒಡೆಯನಾಗಬಹುದು. ಉಪಯೋಗಿಸುವವ ನಿಜ ಜಗತ್ತಿನಲ್ಲಿದ್ದರೂ ಮಿಥ್ಯಾ ಜಗತ್ತಿನಲ್ಲಿ ತನಗರಿಯದಂತೆ ಅದರೊಂದಿಗೆ ಒಂದಾಗಿ ತನ್ನನ್ನು ತಾನೇ ಮರೆಯಬಹುದು.' ಅಂತ ಅಜ್ಜ ಹೇಳುತ್ತಿರುವಾಗ, ಪಿಂಕಿ ಮಲಗಿಸಿ ಅಜ್ಜಿ ಹೊರಗ ಬಂದ್ಲು. 'ಈಗ ನೀವು ಊಟ ಮಾಡೋದನ್ನ ಮರಿಬ್ಯಾಡ್ರಿ, ಮಧು, ನಿನಗ ಏನ ಬೇಕು ಕೇಳವಾ ಮತ್ತ, ನಾಚ್ಗೋಬ್ಯಾಡ. ಅಕ್ಕಗ ಏನ್ ಬೇಕು ನೋಡ್ಕೋ ತಮ್ಮಾ, ಬಡಸು' ಅಂತ ಸಣ್ಣ ಮಗನಿಗೆ ಹೇಳಿದಳು. ಅವ್ವ ನೀನು ಊಟಕ ಬಂದ ಬಿಡವಾ, ಅಂತ ಸಣ್ಣ ಮಗ ಅವ್ವನ್ನೂ ಊಟಕ್ಕ ಕರೆದಿದ್ದ.

'ಮಧು, ಈ ಅಂತರ್ಜಾಲ ಉಪಯೋಗ ಮಾಡೊ ವ್ಯಕ್ತಿ ಒಬ್ಬನ ಕಂಪ್ಯೂಟರ ಪರದೆ ಕೂಡ ಒಂದಾದಾಗ ತಾಸಗಟ್ಟಲೆ ವ್ಯಾಳೆ ಕಳೀಲಿಕ್ಕೆ ಸಾಧ್ಯ ಐತಿ ಏನವಾ. ಇಂಥ ಪರಿಸ್ಥಿತಿಯೊಳಗ ತನಗ ಅರಿವಿದ್ದೋ ಅಥವಾ ಅಕಸ್ಮಾತ್ತಾಗಿಯೋ ಹೆಂಗ ದಾರಿ ತಪ್ಪಬಹುದು ಅಂತ ಸ್ವಲ್ಪ ಅವಲೋಕಿಸಿದರ ಈ ಅಂತರ್ಜಾಲ ಎಷ್ಟು ಭಯಾನಕ ಐತಿ ಅನ್ನೋದು ಗೊತ್ತಾಗತೈತಿ.' ಅಂದಾಗ 'ಅದ ಹೆಂಗ ಸಾಧ್ಯರಿ ಅಪ್ಪಾರ' ಅಂತ ಮಧು ಪ್ರಶ್ನೆ ಹಾಕಿದ್ದಳು. ಅಜ್ಜ ಹೇಳಿದ್ದ. 'ಮಧು ಅಂತರ್ಜಾಲದಾಗ ಲಕ್ಷಗಟ್ಟಲೆ ವೆಬ್‌ಸಾಯಿಟ್ ಇರೋದು ನಿನಗ ಗೊತ್ತೈತಿ. ಇತ್ತೀಚಗೆ ಅಂದರ ಮಾರ್ಚ 2006 ರೊಳಗ ನಿಮ್ಮ ಅಮೇರಿಕಾದ ರೀಟಾ ಕೊಸ್ಬಿ ಅಂತ ಎಮ್ ಎಸ್ ಎನ್ ಟಿ.ವಿ ಕಲಾಪ ನಿರ್ದೇಶಕಿ ಅಂದರ ನೀ ಯ್ಯಾಂಕರ್ ಅಂತೀಯಲ್ಲ ಇವರ ಸಂಶೋಧನೆ ಪ್ರಕಾರ 372 ಮಿಲಿಯನ್ ಅಶ್ಲೀಲ ಸಾಹಿತ್ಯದ ವೆಬ್ ಪುಟಗಳು ಅಂತರ್ಜಾಲದೊಳಗ ಅದಾವಂತ ಏನವಾ. ಪ್ರತಿ ವರ್ಷ 72 ಮಿಲಿಯನ್ ಜನರು ಇಂಥ ಸಾಹಿತ್ಯವನ್ನ ಓದತಾರಂತ. ಕೆಲವೊಂದು ಸಲ ಅಂತರ್ಜಾಲ ಉಪಯೋಗ ಮಾಡ್ತ ಮಾಡ್ತ ವೆಬ್ ಅಡ್ರೆಸ್ಸ ತಪ್ಪ ಆದರೂನೂ ಅಕಸ್ಮಾತ್ ಇಂಥ ಅಶ್ಲೀಲ ವೆಬ್ ಪುಟ ತೆರಿಲಿಕ್ಕೆ ಸಾಧ್ಯ ಐತಿ. ಈ ಅಶ್ಲೀಲ ಪುಟಗಳು ಮಕ್ಕಳಿಗೆ, ಹದಿ ಹರೆಯದ ಯುವಕ, ಯುವತಿಯರಿಗೆ ಭಾಳ ಆಕರ್ಷಿಸೋ ಹಂಗ ಇರತಾವು. ಇತ್ತಿತ್ತಲಾಗಿ ಆಧುನಿಕ ತಂತ್ರಜ್ಞಾನ ಉಪಯೋಗಿಸಿ ವೆಬ್ ಪುಟಗಳು ಬಣ್ಣ ಬಣ್ಣದ ಚಿತ್ರಗಳ ಮೂಲಕ ತುಂಬ ಆಕರ್ಷಣೀಯವಾಗಿ ಕಾಣತಾವು. ನಿಜ ಜೀವನದೊಳಗ ಯಾವುದು ಹೆಂಗ ಇರಬೇಕು, ಹೆಂಗ ಕಾಣಬೇಕು ಅದಕ್ಕಿಂತ ಹೆಚ್ಚು ಸುಂದರವಾಗಿ ಈ ಪುಟಗಳನ್ನ ಬಿಂಬಿಸಲಿಕ್ಕೆ ಸಾಧ್ಯ ಐತಿ. ನಿಜ ಜೀವನದೊಳಗ ಅನುಭವಿಸಬೇಕಾಗಿರುವ ಎಲ್ಲ ಲೈಂಗಿಕ ಕ್ರಿಯೆಗಳನ್ನ ಅಷ್ಟೇ ಪರಿಣಾಮಕಾರಿಯಾಗಿ ವೈಭವೀಕರಿಸಿ ತೋರಿಸುವ ವೆಬ್‌ಸಾಯಿಟಗಳು ಈ ಅಂತರ್ಜಾಲದ ಮಿಥ್ಯಾ ಜಗತ್ತಿನೊಳಗ ಅದಾವು.'

'ನಿಜ ಜೀವನದೊಳಗ ಹೆಂಗ ಜೂಜಾಟ ಆಡತಾರ ಹಂಗ ಅಂತರ್ಜಾಲದಾಗೂ ಈಗ ಜೂಜಾಟ ಆಡಲಿಕ್ಕೆ ಸಾಧ್ಯ ಐತಿ. ಅದಕ 'ಈ ಗ್ಯಾಂಬಲಿಂಗ' ಅಂತಾರ. ಕ್ಂಪ್ಯೂಟರ್ ಪರದೆ ಮುಂದ ಕುಂತು ದಿನಗಟ್ಟಲೆ ಅಂತರ್ಜಾಲ ಜಾಲಾಡಿ ಜೂಜಾಡಿ ಲಕ್ಷ ಲಕ್ಷ ಕಳಕೊಂಡ ಉದಾಹರಣೆಗಳು ಅದಾವು. ಅಮೇರಿಕಾದಾಗ 'ವಿಡಿಯೋ ಗೇಮ್' ಉದ್ಯಮ ಬಿಲಿಯನ ಡಾಲರ ಉದ್ಯಮ ಅಂತ ಓದಿದ್ದ ನೆನಪು. ಇದು 2006 ಫೆಬ್ರುವರಿ ತಿಂಗಳದಾಗ ನ್ಯೂಯಾರ್ಕ ಅಸೋಸಿಯೇಟೆಡ್ ಪ್ರೆಸ್ಸ ವರದಿ. ಅಮೇರಿಕಾದಾಗ 100 ಮಿಲಿಯನ್ ವೀಡಿಯೋ ಗೇಮರ್ಸ ಅದಾರಂತ. ಅದರೊಳಗ 25 ಮಿಲಿಯನ್ ಮಕ್ಕಳು ಅಂತರ್ಜಾಲ ವ್ಯಸನಿಗಳಂತೆ. ಮಕ್ಕಳಿಗೆ 'ಚಾಟರೂಮ್' ಡಿಸ್ಕಶನ್ ಫೋರಮ್' 'ಈ ಮೇಲ್' ಇವೆಲ್ಲ ದಾರಿ ತಪ್ಪಿಸೋ ಸಾಧನಗಳು. ಇತ್ತೀಚಗೆ 2005 ರೊಳಗ ಚೀನಾ ದೇಶದಾಗಿನ ಸಂಶೋಧನೆ ಪ್ರಕಾರ 20 ಮಿಲಿಯನ್ ಮಕ್ಕಳು ಕಂಪ್ಯೂಟರ್ ಗೇಮ ಆಡಾಕ ಇಂಟರನೆಟ್ ಜಾಲಾಡತಾರಂತ. ಜರ್ಮನ್ ದೇಶದಾಗಿನ 30 ಮಿಲಿಯನ್ ಇಂಟರ್ನೆಟ್ ಉಪಯೋಗ ಮಾಡೋರೊಳಗ ಒಂದು ಮಿಲಿಯನ್ ಮಕ್ಕಳು ಇಂಟರನೆಟ್ ವ್ಯಸನಿಗಳಾಗ್ಯಾರಂತ. ಹೈಟೆಕ್ ಸಿಟಿ ಸಿಂಗಾಪೂರ್ ದೊಳಗಿನ ನಾಲ್ಕು ಮಿಲಿಯನ್ ಜನರೊಳಗ ಏಳು ಲಕ್ಷ ಎಪ್ಪತ್ತು ಸಾವಿರ ಇಂಟರ್ನೆಟ್ ಬಳಸತಾರಂತ. ಅದರೊಳಗ ಐವತ್ತು ಸಾವಿರ ಜನ ಇಂಟರ್ನೆಟ್ ವ್ಯಸನಿಗಳು ಅದಾರಂತ.'

'ಮಧು, ಈ ಕತಿ ಇಲ್ಲಿಗೇ ಮುಗೀಲಿಲ್ಲ. ದಕ್ಷಿಣ ಕೋರಿಯಾ ದೇಶದಾಗ ಅರ್ಧಕ್ಕಿಂತ ಹೆಚ್ಚು ಜನರು ಅಂತರ್ಜಾಲ ಬಳಸತಾರಂತ. ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಸಾಯಿಬರ್ ಕೆಫೆ ಅದಾವಂತ. ಅವು ದಿನದ ಇಪ್ಪತ್ನಾಲ್ಕು ತಾಸೂ ಕೆಲಸ ಮಾಡತಾವಂತ. ಹತ್ತು ಮಿಲಿಯನ್‌ಕ್ಕಿಂತ ಹೆಚ್ಚು ಜನರು ಹೈಸ್ಪೀಡ ಇಂಟರ್ನೆಟ್ ಕನೆಕ್ಶನ್ ಹೊಂದ್ಯಾರಂತ. ಆನ್ ಲಾಯಿನ್

ಗೇಮ ಆಡೋರಿಗೆ ದಕ್ಷಿಣ ಕೋರಿಯಾ ಸ್ವರ್ಗ ಇದ್ದಹಂಗ ಅಂತ. ಇದು 2002 ರೊಳಗ ನಡೆದ ಪ್ರಕರ್ಣ. ಕೆಂ ಕ್ಯೂಂಗ್ ಜಾಯ್ ಅನ್ನೋ ಹುಡಗ ಇಂಟರನೆಟ್ ಕೆಫೆದೊಳಗನ್ನ ಗೇಮ ಆಡಿಕೋತ ಸತ್ತನಂತ. ಅಂವ ಬಿಟ್ಟೂ ಬಿಡದ 86 ತಾಸ ಗೇಮ ಆಡಿದ್ದನಂತ. ಈಗ ಕೋರಿಯಾದೊಳಗ 'ಇಂಟರ್ನೆಟ್ ಎಡಿಕ್ಶನ್ ಪ್ರಿವೆನ್‌ಶನ್ ಆಂಡ ಕೌನ್ಸಲಿಂಗ' ಕೇಂದ್ರಗಳನ್ನ ಸರಕಾರದವರು ಪ್ರಾರಂಭ ಮಾಡ್ಯಾರಂತ. ನ್ಯೂಯಾರ್ಕ್ ಟಾಯಿಮ್ಸ ವರದಿ ಪ್ರಕಾರ ಒಂದು ಡಾಯಿವರ್ಸ್ ಆಗಿದ್ದು ಹೆಂಡತಿ ಅತಿಯಾಗಿ ಇಂಟರನೆಟ್ ಬಳಸತಾಳ ಅನ್ನೋ ಒಂದೇ ಕಾರಣಕ್ಕಂತ. ಅವಳು ಇಂಟರ್ನೆಟ್ ಜಾಲಾಡಾಕ ಹತ್ತಿದರ ಹೊರಗಿನ ಜಗತ್ತ ಮರತ ಬಿಡತಿದ್ದಳಂತ. ಊಟ ಮಾಡಬೇಕು ಅನ್ನೋ ಖಬರೂ ಸಹಿತ ಅಕಿಗೆ ಇರತಿದ್ದಿಲ್ಲಂತ. ಮಧು, ಯಾಕ ಊಟ ಭಾಳ ಸಾವಕಾಶ ನಡದೈತೆಲ್ಲ. ಏ ತಮ್ಮ ಊಟ ಮಾಡಿಕೋತ ಕೇಳ್ರೋ.' ಅಂತ ಅಜ್ಜ ಅಂತರ್ಜಾಲದ ಮಿಥ್ಯಾ ಜಗತ್ತಿನಿಂದ ನಿಜ ಜಗತ್ತಿಗೆ ತಿರಗಿ ಬಂದಿದ್ದ. ಅಜ್ಜಿಗೆ ಮಾತ್ರ ಭಾಳ ತಳಮಳ ಆಗಿತ್ತು. 'ಇವ್ರು ಏನರ ಮಾತಾಡಾಕ ಹತ್ತಿದ್ರ ಒಂದು ತಾಸತನ ಅವರ ಲೆಕ್ಚರ ನಿಲ್ಲೋದಿಲ್ಲ ನೋಡ್ರಿ. ರೀ ನಿಮ್ಮ ಲೆಕ್ಚರನ ಸ್ವಲ್ಪ ಬಂದ ಮಾಡತೀರಾ. ಮಕ್ಕಳು ಮೊದಲ ಊಟ ಮಾಡ್ಲಿ. ಮಧು, ನಿನಗ ತಿಳಿಸಾರ ಸೇರತೈತಿ ಅಂತ ಮಾಡೀನಿ. ಹೆಂಗ ಆಗೇತೆ ಏನವ. ಸ್ವಲ್ಪು ಅನ್ನ ತಿಳಿಸಾರ ಉಂಡ ನೋಡ್ವ.' ಅಂತ ಅಜ್ಜಿ ಮಗಳಿಗೆ ಅನ್ನ ತಿಳಿಸಾರು ಬಡಿಸಿದ್ದಳು. ಮಧು ಒಂದ ಸಲ ಜೋರಾಗಿ ನಿಟ್ಟುಸಿರು ಬಿಟ್ಟಿದ್ದಳು. 'ಯಾಕ ಮಧು, ಏನಾಗಾಕ ಹತ್ತೇತಿ. ಅಪ್ಪಾರು ಯಾವ ವಿಷಯ ತಗೋಂಡ್ರೂನೂ ಹೀಂಗ ಲೆಕ್ಚರ್ ಹೊಡೀತಾರವ. ನಮಗ ಕೇಳಿ ಕೇಳಿ ಸಾಕಾಗೇತಿ. ಈಗ ನೀ ಬಂದೀಯಲ್ಲ, ನಮಗ ಸ್ವಲ್ಪ ವಿರಾಮ ಸಿಕ್ಕಾಂಗ ಆತು ನೋಡು' ಅಂತ ದೊಡ್ಡ ಮಗ ಅಜ್ಜನ್ನ ಛೇಡಿಸಿದ್ದ.

'ಅಲ್ರೋ ಮಕ್ಕಳ, ನಮ್ಮದು ಲಾಸ್ಟ ಇನ್ನಿಂಗ್ಸ ನಡದೈತಿ ಏನ್ರಪಾ. ನೀವು ಇನ್ನ ಮುಂದ ಮಕ್ಕಳ್ನ ಬೆಳಸೋರು. ನಿಮ್ಮ ಹಿತದ ದೃಷ್ಟಿ ಇಟಗೊಂಡು ಇಂಥ ವಿಷಯಗಳನ್ನ ಅಗಾಗ ಸಮಯ ಸಿಕ್ಕಾಗ ನಾ ಹೇಳತಿರತೀನಿ. ಇದು ನಿಮ್ಮ ಹಿತಕ್ಕಾಗಿ, ನಿಮ್ಮ ಮಕ್ಕಳ ಭವಿಷ್ಯ ಒಳ್ಳೆಯದಾಗಲಿ ಅಂತ ಅಲ್ಲರೇನ್ರೊ?' ಇಂಟರ್ನೆಟ್‌ನ ವಿಷಯ ಎತ್ತಿದವರು ಯಾರು? ನಾನ್ನ ಹೇಳಪ ತಮ್ಮ?' ಅಂತ ಅಜ್ಜ ಸ್ವಲ್ಪ ಮನಸ್ಸು ನೊಂದುಕೊಂಡು ನುಡಿದಿದ್ದ. ಮಧು ಅಜ್ಜಿ ಹಾಕಿದ ತಿಳಿಸಾರು ಅನ್ನ ಸಾವಕಾಶ ರುಚಿ ನೋಡಿಕೋತ ಅಜ್ಜಗ ಸಮಾಧಾನ ಹೇಳಿದ್ದಳು. 'ಅಪ್ಪಾರ, ಅವ್ವ ಹಿಂಗ ಅಂದ್ಲು ಅಂತ ಬೇಜಾರ ಮಾಡಿಕೊಬ್ಯಾಡ್ರಿ. ಪಾಪ, ಅಕಿಗೆ ತಾ ಮಾಡಿದ ಅಡಿಗಿ ಉಳಿಬಾರದು. ಎಲ್ಲಾರೂ ಹೊಟ್ಟಿತುಂಬ ಊಟ ಮಾಡ್ಲಿ ಅನ್ನೋದಷ್ಟ ಅಕಿ ತಲ್ಯಾಗ ಇರತೈತಿ. ನೀವು ಇಲ್ಲೀ ತನಕ ಅಂತರ್ಜಾಲದ ಒಂದು ಅವಲಕ್ಷಣ 'ವ್ಯಕ್ತಿ ಗೌಪ್ಯತೆ' ಅಂದರ 'ಅಬ್ಸನ್ಸ ಆಫ್ ಪರ್ಸನ್ಸ ಇನ್ವಾಲ್ವಡ' ಇದರ ಬಗ್ಗೆ ಹೇಳಿದಿರಿ. ಮತ್ತೊಂದು ಅವಲಕ್ಷಣ ಹೇಳಿದರೆಲ್ಲ 'ಅಪರೋಕ್ಷ ಸಂಬಂಧ' ಅಂದರ ಏನ್ರಿ' ಅಂತ ಮತ್ತ ಅಜ್ಜನ ಬಾಯಿ ಬಿಡಸಲಿಕ್ಕೆ ಪ್ರಯತ್ನಿಸಿದಳು.

ಅಜ್ಜ ಸಾವಕಾಶ 'ನೋಡವಾ ಮಧು, ನಿಮಗ ಬೇಕಂದರ ಹೇಳತೀನಿ. ಇಲ್ಲ ಅಂದರ ಇಲ್ಲಿಗೆ ಈ ಚರ್ಚೆ ಮುಗಸೋಣು. ಅರಾಮ ಊಟ ಮಾಡ್ರಿ' ಅಂದಾಗ ಮಧು 'ಇಲ್ಲ ತಗೋಳ್ರಿ, ಅಪ್ಪಾರ ಮಾತಾಡುದರಾಗ ಸ್ವಲ್ಪ ಹೆಚ್ಚು ಕಡಿಮಿ ಆಗತಾವು, ನೀವೇನು ಮನಸ್ಸಿಗೆ ಹಚಿಗೋಬ್ಯಾಡ್ರಿ. ಮುಂದ ಹೇಳ್ರಿ' ಅಂದಿದ್ದಳು. ಅಜ್ಜ ಪ್ರಾರಂಭ ಮಾಡಿದ್ದ. 'ಈ ಅಂತರ್ಜಾಲ ಪ್ರಪಂಚದೊಳಗ ನಿಮಗ ತಿಳದಹಂಗ ಈಗೀಗ ಧ್ವನಿಯನ್ನೂ ರವಾನಿಸಲಿಕ್ಕೆ ಸ್ವೀಕರಿಸಲಿಕ್ಕೆ ಸಾಧ್ಯ ಆಗಿದ್ದರೂ ಈ ಧ್ವನಿ ಮಾಧ್ಯಮದ ಬಳಕೆ ಇನ್ನೂ ಹೆಚ್ಚಾಗಿಲ್ಲ. ಧ್ವನಿ ನಿರಂತರ ಹೊರಡೋ ಮಾಹಿತಿ. ಅಕ್ಷರ ಮಾಹಿತಿ ಆದರ ಸಣ್ಣ ಸಣ್ಣ ಪ್ಯಾಕೆಟ್ ಮೂಲಕ ಕಳಿಸಿ ಸ್ವೀಕರಿಸಲಿಕ್ಕೆ ಸಾಧ್ಯ ಐತಿ. ಹೀಂಗ ಧ್ವನಿ ಪ್ಯಾಕೆಟ್‌ಗಳನ್ನ ಕಳಿಸಿದರ, ಕಳಿಸಿದ ಧ್ವನಿ ಮತ್ತ ಸ್ವೀಕರಿಸಿದ ಧ್ವನಿ ನಡುವೆ ವೇಳೆ ಅಂತರ ಆಗತೈತಿ. ಅಕ್ಷರ ಮಾಹಿತಿ ಹಂಗ ಧ್ವನಿ ಕಳಿಸಿ ಸ್ವೀಕರಿಸೋದು ಅಷ್ಟು ಸುಲಭ ಅಲ್ಲ ಅನ್ನೋದು ನಿಮಗೂ ಗೊತ್ತಿದ್ದದ್ದು ಐತಿ. ಇದನ ನಿಮಗ ಯಾಕ ಹೇಳಾಕ ಹತ್ತೀನಿ ಅಂದರ, ಯಾವದೇ ಉಪದೇಶ ಮುಖಾಮುಖಿ ಮಾತಾಡಿದಾಗ ಎಷ್ಟು ಪರಿಣಾಮ ಆಗತೈತಿ, ಅಷ್ಟು ಪರಿಣಾಮ ನೀ ಸಾವಿರ ಪುಸ್ತಕ ಓದಿದರೂ ಆಗಲಿಕ್ಕಿಲ್ಲ ಅನ್ನೋದನ್ನ ಒಪ್ಪತೀಯಾ ಮಧು. ಅಂತರ್ಜಾಲದೊಳಗ ಮಾತು ಕೇಳೋದು ನಿಷ್ಕ್ರಿಯ ಸಂವಹನ. ಆದರ, ಮುಖಾಮುಖಿ ಮಾತಾಡೋದು

ಸಕ್ರಿಯ ಸಂವಹನ. ಮುಖಾಮುಖಿ ಮಾತಾಡೊರ ಕಣ್ಣು ಕಣ್ಣು ಕೂಡತಾವ, ಹೃದಯ ಹೃದಯ ಒಂದಾಗತಾವ. ನಂಬುಗೆ ಗಟ್ಟಿ ಆಗತೈತಿ. ಉಪದೇಶದ ಪರಿಣಾಮ ಪರಿವರ್ತನೆಗೆ ಹಾದಿ ಆಗತೈತಿ. ಇಂಥ ಪರಿಣಾಮ ಇಂಟರ್ನೆಟ್ ನೊಳಗ ಏನ್ ಟೆಕ್ನಾಲಾಜಿ ಉಪಯೋಗ ಮಾಡಿದರೂ ಸಾಧ್ಯ ಆಗೋದಿಲ್ಲ ಅನ್ನೋದನ್ನ ಒಪ್ಪತೀಯಾ? ಪರಸ್ಪರ ಮುಖಾಮುಖಿ ಸಂವಹನ ಅಂತರ್ಜಾಲದಾಗ ಸಾಧ್ಯವಾಗದ ಮಾತು.' ಅಂದಾಗ 'ಅಲ್ರಿ ಅಪ್ಪಾರ, ನೀವು ಹೇಳದರೊಳಗ ಸತ್ಯ ಐತಿ ಅಂತ ತೋರತೈತ್ರಿ. ಆದರ ಇದಕ ಪರಿಹಾರ ಏನೈತಂತೀರಿ.' ಅಂತ ದೊಡ್ಡ ಮಗ ಸವಾಲ ಹಾಕಿದ್ದ. 'ಬಂದೆನಪಾ ಹಾದಿಗೆ ಅಂತ ಅಜ್ಜ ಮಗನ್ನ ಛೇಡಿಸಿದ್ದ. 'ನೋಡ್ರಿ, ಎಲ್ಲ ಸಮಸ್ಯೆಗಳಿಗೆ ಪರಿಹಾರ ಇದ್ದ ಇರತೈತಿ. ಆದರ ಅದನ ಹುಡಿಕಿ ತಗಿಬೇಕಾಗತೈತಿ. ಈಗ ನೀವೆಲ್ಲ ನೋಡೀರಿ. ಸಾಕಷ್ಟು ಧರ್ಮೋಪದೇಶ ಮಾಡುವಂತಹ ಟಿ.ವಿ. ಚಾನಲ್‌ಗಳು ಪ್ರಾರಂಭ ಆಗ್ಯಾವು. ಅಂಥ ಮಾಧ್ಯಮವನ್ನ ಅಂತರ್ಜಾಲದೊಳಗ ಅಳವಡಿಸೋದು ಕಷ್ಟದ ಕೆಲಸ ಏನಲ್ಲ. ಆದರೂ ಇಂತಹ ವ್ಯವಸ್ಥೆ ಮನಃಪರಿವರ್ತನೆ ತರಲಾರದು ಅಂತ ನನ್ನ ಭಾವನೆ. ಕಂಪ್ಯೂಟರ ಪರದೆ ಗುರುವಿನ ಸ್ಥಾನ ತಗೊಳ್ಳಲಿಕ್ಕೆ ಶಕ್ಯ ಇಲ್ಲ ಮಧು. ನೀ ಹೇಳಬಹುದು. ಈಗೆಲ್ಲ 'ವೀಡಿಯೊ ಕಾನ್ಫರೆನ್ಸು, ವರ್ಚುಯಲ್ ಕ್ಲಾಸರೂಂ' ನೆಟ್ ಮೂಲಕ ನಡಸತಾರ, ಅಂತ. ಆದರ ಈ ವರ್ಚುಯಲ್ ಕ್ಲಾಸರೂಂ ಗಳು ಕಲಿಕೆ ಮಾರ್ಗದೊಳಗ ಹೆಚ್ಚಿನ ಸವಲತ್ತುಗಳು ಮಾತ್ರ. ಇವು ಗುರುವಿನ ಸ್ಥಾನ ಪಲ್ಲಟ ಮಾಡಲಿಕ್ಕೆ ಸಾಧ್ಯ ಇಲ್ಲ. ಈಗ ನೋಡು, ಧರ್ಮ ಕೆಟ್ಟಾಗ ಧರ್ಮಗುರುಗಳ ಪಾತ್ರ ಮಹತ್ವ ಪಡಕೋತೈತಿ. ಅದು ನಿನಗ ಗೊತ್ತೈತಿ. ನನ್ನ ತಿಳುವಳಿಕಿ ಪ್ರಕಾರ ಈ ಅಂತರ್ಜಾಲ ಮಕ್ಕಳ ಜೀವನ ಹಾಳು ಮಾಡುತ್ತಿರುವಾಗ, ಯುವಕರ ಹಾದಿ ತಪ್ಪಿಸುವಾಗ ಧರ್ಮ ಗುರುಗಳು ಉಪದೇಶ ಪ್ರಾರಂಭ ಮಾಡಬೇಕು. ಪಾಲಕರು ಮಕ್ಕಳ ಅಂತರ್ಜಾಲ ಉಪಯೋಗದ ಮೇಲೆ ಒಂದು ಕಣ್ಣ ಇಡಬೇಕು. ಸರಕಾರ ಅಶ್ಲೀಲ ವೆಬ್ ಸಾಯಿಟ್‌ಗಳು ಅಂತ್ರಜಾಲ ಜಾಲಾಡೋರಿಗೆ ನಿಲಕದ ಹಂಗ ರಕ್ಷಣೆ ಒದಗಿಸಬೇಕು. ಅಂತರ್ಜಾಲದ ಸದುಪಯೋಗ ಮಾಡಿಕೊಳ್ಳೋಹಂಗ ನೋಡಿಕೋಬೇಕು. ಚೀನಾ ದೇಶದಾಗ ವೆಬ್ ಸಾಯಿಟ ಸ್ಥಾಪಿಸಬೇಕಾದರ ಸರಕಾರದ ಪರವಾನಿಗಿ ಬೇಕಂತ. ಮತ್ತ ಚೀನಾ ಸರಕಾರ ಯಾರೇ ಆಗಲಿ ಯಾವದೇ ಅಂತರ್ಜಾಲದ ಪುಟ ಓಪನ್ ಮಾಡೋಕಿಂತ ಮೊದಲು ಸರಕಾರಿ ಸಾಫ್ಟವೇರ್ ಆ ಪೇಜ ಸ್ಕ್ಯಾನ ಮಾಡಿ ಅದು ಪರದೆ ಮೇಲೆ ಬರಲಿಕ್ಕೆ ಯೋಗ್ಯ ಇದ್ದರ ಮಾತ್ರ ಮೂಡತೈತೆಂತ. ಈಗ ತಿಳಿತೇನು ಮಧು, ಅಂತರ್ಜಾಲದಾಗ 'ಅಪ್ರತ್ಯಕ್ಷ ಸಂಬಂಧ' ಅಂದರ ಏನು ಅಂತ?' ಅಜ್ಜ ಇಷ್ಟ ಹೇಳಿ ಮುಗಸೋದ್ರೊಳಗ ಮೌನ ಮನಿನೆಲ್ಲ ಆವರಿಸಿತ್ತು.

ಮಧು ಮೌನ ಮುರದು ಹೇಳಿದಳು. 'ಅಪ್ಪಾರ ನೀವು ಹೇಳಿದಹಂಗ ಅಂತರ್ಜಾಲ ಮಾಹಿತಿ ಸಮುದ್ರ ಇದ್ರುನೂ ಅದರ ಸದುಪಯೋಗ ಮಾಡಿಕೊಳ್ಳೋದು ಉಪಯೋಗ ಮಾಡೋರ ಕೈಯ್ಯಾಗ ಇರತೈತಿ ಬಿಡ್ರಿ. ಈಗಿನ ಆಧುನಿಕ ಪ್ರಪಂಚದಾಗ ನಮ್ಮ ಸುತ್ತ ಒಳ್ಳೆಯದು ಐತಿ ಕೆಟ್ಟದ್ದೂ ಐತಿ. ಒಳ್ಳೇಯದನ್ನ ಮಾತ್ರ ನಾವು ಗುರುತಿಸಿಕೊಂಡು ಉಪಯೋಗ ಮಾಡಿಕೊಂಡ್ರ ಆತರೆಪಾ.' ಅಂದಾಗ ಅಜ್ಜ 'ಮಧು, ಯವದೇ ವಿಷಯದ ಮೇಲಿನ ಮೋಹ, ಜೀವನದ ಬೆಲೆಯನ್ನ ಹೆಚ್ಚು ಮಾಡೋಹಂಗ ಇರಬೇಕು. ಅತೀ ಮೋಹ, ಹುಚ್ಚಿನ ರೂಪ ಪಡಕೊಂಡು ಜೀವನ ಹಾಳು ಮಾಡೋ ಸ್ಥಿತಿ ಮುಟ್ಟಬಾರದು. ಸಾಕಿನ್ನ ಭಾಳ ರಾತ್ರಿ ಆತು. ನಿನಗೂ ಹದಿನೆಂಟ ತಾಸು ಪ್ರವಾಸ ಮಾಡಿ ದಣಿವು ಆಗೇತಿ. ಚನ್ನಾಗಿ ಎಲ್ಲರೂ ನಿದ್ದಿ ಮಾಡ್ರಿ' ಅಂತ ಎಲ್ಲಾರೂ ಮೇಲೆ ಎದ್ದರು. 'ಮಧು, ನಿನಗ ಕಂಪ್ಯೂಟರ ರೂಮಿನೊಳಗ ಹಾಸಿಗಿ ಮಾಡೇನಿ. ಪಿಂಕಿ ಅಲ್ಲೇ ಮಲಿಗಿಸೇನಿ. ಹೋಗಿ ಮಲಕೊಳವಾ. ಮುಂಜಾನೆ ಎಲ್ಲಾರೂ ಅರಾಮ ಏಳ್ರಿ' ಅಂತ ಅಜ್ಜಿ ಆರ್ಡರ ಮಾಡಿದಳು.

- o -

## ಮುದ್ದಣ ಮನೋರಮೆಯರ ಸಂಡೆ ಕಾರ್ ಕಾರ್ ಸಂವಾದ
## – 2006 Remix version

**– ಬಸವರಾಜ. ಆರ್. ಯಾದವಾಡ, ಬೆಂಗಳೂರು.**



ನಯನರ "ನಯನೋ ಮೆ ಬಸಕರ್" ನಯನಳಲ್ಲಿ ಬಂಧಿಯಾಗಿರುವ "ಬಸು" ಉರ್ಫ್ ಬಸವರಾಜ ಯಾದವಾಡ ಅವರು ಅರುಣ ಯಾದವಾಡರ ತಮ್ಮ. ವೃತ್ತಿಯಿಂದ ಸಾಫ್ಟ್‌ವೇರ್ ಇಂಜಿನೀಯರ್ ಆಗಿರುವ ಬಸವರಾಜ ಯಾದವಾಡ ಅವರಿಗೆ ಚಿಕ್ಕದಾಗಿ ಚೊಕ್ಕದಾಗಿ ಸ್ವಲ್ಪ pun ಇಟ್ಟು, ಸ್ವಲ್ಪ ವಿಡಂಬನೆ, ವ್ಯಂಗ್ಯ, ಹಾಸ್ಯ ಬೆರೆಸಿ ಬರೆಯುವದೆಂದರೆ ತುಂಬಾ ಪ್ರೀತಿ. ಇವರು ರಚಿಸಿರುವ ಮೋಜಿನ, pun and funನಿಂದ ತುಂಬಿರುವ ಚುಟುಕೋಕ್ತಿಗಳನ್ನು ಓದುತ್ತಿದ್ದರೆ ಸದ್ಯದಲ್ಲೇ ಇವರು ಬಳಗದ "ಡುಂಡಿರಾಜ"ರಾಗುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ. ನಮ್ಮ ನಿರಂತರಕ್ಕಾಗಿಯೇ ತಮ್ಮ ಎಲ್ಲಾ ಕೃತಿಗಳನ್ನು ಒಂದೆಡೆ ಸೇರಿಸಿ ಬರೆದು ಕಳಿಸಿದ್ದಾರೆ.ತಮ್ಮ ಕುಟುಂಬ ಶ್ರೀಮತಿ ನಯನಾ ಅವರೊಂದಿಗೆ ಬೆಂಗಳೂರಿನಲ್ಲಿ ನೆಲೆಸಿರುವ ಬಸವರಾಜ ಅವರಿಗೆ ಹನಿಗವನಗಳು, ಕವನಗಳಲ್ಲಿ ಒಳ್ಳೆಯ ಹಿಡಿತವಿದೆ. ಸರಿಯಾದ ಕೃಷಿ ಮಾಡಿದಲ್ಲಿ, ಉಜ್ವಲ ಭವಿಷ್ಯವಿದೆ.

ಮುದ್ದಣ : ಪ್ರಿಯೆ ನಾ ತಗೋತಿನಿ ಒಂದು ***ಹೊಂಡಾ ಸಿಟಿ***
ಮನೋರಮೆ : ಅದನ್ವ್ಯಾಗೆ ಓಡಿಸ್ತಿಯಾ ಪ್ರಿಯಕರಾ ಬೆಂಗಳೂರೇ ಆಗಿದೆ ಹೊಂಡಗಳ ಸಿಟಿ

ಮುದ್ದಣ : ಹಾಗಿದ್ರೆ ನಾ ತಗೋಳ್ಳಾ ಒಂದು ***ಟೋಯೋಟೊ ಕೊರೊಲ್ಲಾ***
ಮನೋರಮೆ : ಹತ್ತು ಜನುಮಾದಗ ಹುಟ್ಟಿ ಬಂದ್ರೂ ಅದರ ಇ.ಎಂ.ಐ ತೀರೋಲ್ಲಾ

ಮುದ್ದಣ : ಹಂಗಾರಾ ನನಗ ಬರೋಬ್ಬರಿ ಆ ಮಾರುತಿ **ಬ್ಯಾಲಿನೊ..**
ಮನೋರಮೆ : ನಿನ್ನ ಹಂಗಾ ಬಿಟ್ರ ಅದರ ಸಾಲ ತೀರಸಾಕ ಮಾರುತಿ ನನ್ನ ಬಂಗಾರದ ಬಳಿನೂ

ಮುದ್ದಣ : ಹೌದೌದು ನನಗ ಸೂಟ್ ಆಗೊದೊಂದ್ ಅದ ಆ ***ಫ್ಲೋರ್ಡ್***
ಮನೋರಮೆ : ನಿನ್ನ ಸದ್ಯದ ಅರ್ಥಿಕ ಪರಿಸ್ಥಿತಿಯೊಳಗ ನಿಂಗ ಮಾಡಾಕಾಗುದಿಲ್ಲಾ ಅದನ್ನ ಅಫ್ಫೋರ್ಡ್

ಮುದ್ದಣ : ಹಂಗಾರಾ ನಾ ತಗೋತಿನಿ ಒಂದ್ ***ಮಾರುತಿ ಝೆನ್***
ಮನೋರಮೆ : ಆ ಔಟ್ ಡೇಟ್ ಮಾಡೆಲ್ ತಗೋಳುದು ಮಹಾ ಎನ್?

ಮುದ್ದಣ : ಹಂಗಾರಾ ನಾ ತಗೋತಿನಿ ಒಂದ್ ***ಹ್ಯುಂಡೈ ಸೋನಾಟಾ***
ಮನೋರಮೆ : ತಿಂಗಳ ಖರ್ಚಿಗೆ ಸರಿಯಾಗಿ ನಿ ಕೊಟ್ರ ನಾ ತರ್ತಿನೀ ಅನ್ನಪೂರ್ಣಾ ಆಟಾ..

ಮುದ್ದಣ : ಚಿನ್ನಾ..ಹಾಗಾದರೆ ಹೇಗಿದೆ ಆ ***ಫ್ಲೀಯಟ್ ಪಾಲಿಯೋ..***
ಮನೋರಮೆ : ನನ್ನ ರನ್ನ ನೆನಪಿರಲಿ ಯಾವಾಗ್ಲೂ ನಿನ್ನ ವ್ಯಾಲೇಟ್ ಖಾಲಿಯೋ..

ಮುದ್ದಣ : ಹಂಗಿಸ ಬೇಡವೆ ರಾಣಿ..ಒಂದಿನ ನಾ ಓಡ್ಸೊ ಕಾರ್ ಇರುತ್ತೆ ***ಓಪ್ಪಾ, ಶೇವ್ರಲೇಟ್..***
ಮನೋರಮೆ : ಹಗಲು ಕನಸು..ಸದ್ಯಕ ಮನ್ಯಾನ ಮಕ್ಕಳಿಗೆ ಕೊಡ್ಸಿದ್ರ ಸಾಕು ಒಂದೊಂದು ಚಾಕಲೇಟ್..

ಮುದ್ದಣ : ನೋಡ್ತಾ ಇರೆ ಒಂದಿನಾ ನಾ ತಗೋತಿನಿ ಆ ದೊಡ್ಡ ***ಮರ್ಸಿಡೆಸ್***
ಮನೋರಮೆ : ಮತ್ತೊಂದ್ ಹೊಸಾ ಸಾಲಾ ಮಾಡಿದ್ರೆ ನಾನಾಗ್ತಿನಿ ಮರ್ಸಿಲೆಸ್..

ಮುದ್ದಣ : ಫ್ಯಾಮಿಲಿ ಕರಕೊಂಡ ಒಡಾಡಕ ಚಲೋ ಅದ ಆ ***ಹೊಂಡಾ ಸಿಆರಡಿ***
ಮನೋರಮೆ : ಆದ್ರ ನಮ್ಮ ಪಾರ್ಕಿಂಗ್ ಜಾಗಾ ಇರುದು ಬರಿ ಐದ ಅಡಿ..

ಮುದ್ದಣ : ಹೌದು ಆ ಪಾರ್ಕಿಂಗ ಜಾಗಾಕ ಸರಿಯಾದ ಕಾರ್ ***ಫ಼ೀಯಟ್ ಪೆಟ್ರಾ..***
ಮನೋರಮೆ : ಮಹಾರಾಜ ಸಾಲಾ ತಗಸಾಕ ಇನ್ನು ಉಳಿದಿಲ್ಲಾ ಯಾವುದು ಕಾಗದ ಪತ್ರಾ?

ಮುದ್ದಣ : ಶಾಂತಿ: ಶಾಂತಿ:..ಪ್ರಾಣಸಖಿ..ನಮಗೆ ಸರಿಹೊಂದುವ ಕಾರಾವುದು ನೀನೇ ಹೇಳು..
ಮನೋರಮೆ : ಬೆಂದಕಾಳೂರಿನಲ್ಲಿ ವಾಸಿಸುವ ಎಲೈ ಪ್ರಾಣಸಖ,
ನೀನು ಈಗಾಗಲೆ ಮಾಡಿರುವೆ ಮೈತುಂಬಾ ಸಾಲ ಪೂರಾ
ನೀನೊಬ್ಬ ಮಹಾ ಹೆವಿ ಸ್ಪೆಂಡರ್
ನೀನ್ ನಡೆಸೋ ಲೈಫ಼್ ಸ್ಟೈಲ್‌ಗೆ
ಸರಿಯಾಗಿದೆ ಲೀಟರ್ಗೆ 60 ಕೊಡೋ
ಈಗ ಇರೋ ***ಹೀರೋ ಹೊಂಡಾ ಸ್ಪ್ಲೆಂಡರ್..***

(ಯಥಾ ಪ್ರಕಾರ ಮುದ್ದಣ–ಮನೋರಮೆಯರು ತಮ್ಮ ಎವರ್ ಗ್ರೀನ್ ಸ್ಪ್ಲೆಂಡರ್ ಮೇಲೆ ಸವಾರಿ ಮಾಡಿ ಜಯನಗರ್ ಫ಼ೊರ್ತ್ ಬ್ಲಾಕ್ನಲ್ಲಿ ಪಾನೀ ಪೂರಿ ಚಾಟ್ ತಿಂದು, ಚಾ ಕುಡದು ಬನಶಂಕರಿಯಲ್ಲಿ ಸಾರಕ್ಕಿ ಮಾರುಕಟ್ಟೆಯಲ್ಲಿ ಕಾಯಿಪಲ್ಲೆ ಖರೀದಿ ಮಾಡಿ ಮನೆಗೆ ತೆರಳಿದರು ಎಂಬಲ್ಲಿಗೆ ಮುದ್ದಣ ಮನೋರಮೆಯರ ಸಂಡೇ ಕಾರ್ ಕಾರ್ ಸಂವಾದ ಮುಗಿಯುತ್ತದೆ.)

- o -

## ಚಕ್ಕಾ–ಚರಿಗಿ ಆಟ – ಅರುಣ ಆರ್. ಯಾದವಾಡ, ಬೆಂಗಳೂರು.

ಚಕ್ಕಾ ಚರಿಗಿ ಇದು ಇಬ್ಬರು ಕೂಡಿ ಆಡುವಂಥಾ ಒಂದು ಸರಳ ಆಟ ಅಥವಾ ಒಂದು ಸ್ಟೆಪ್ ಅಂತಾ ಹೇಳಬಹುದು. ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಜಾತ್ರೆಗಳಲ್ಲಿ , ಅಥವಾ ಯಾವುದಾದರೂ ಸಮಾರಂಭವಿದ್ದಾಗ, ಸಂತೋಷ ಕೂಟವಿದ್ದಾಗ, ಕೊನೆಗೆ ಎಲ್ಲರೂ ಯಾವುದೊ ಒಂದು ನೃತ್ಯಕ್ಕೆ ಹೆಜ್ಜೆ ಹಾಕುವಂತೆ ಈ ಚಕ್ಕಾ–ಚರಿಗಿ ಆಟಕ್ಕೆ ಹೆಜ್ಜೆ ಹಾಕುತ್ತಾರೆ. ಇದು ಇಬ್ಬರು ವ್ಯಕ್ತಿಗಳು ಕೂಡಿ, ಎದುರು ಬದುರು ನಿಂತು, ಒಬ್ಬರ ಬಲಗೈಯನ್ನು ಇನ್ನೊಬ್ಬರು ಬಲಗೈಯಿಂದ ಹಿಡಿದುಕೊಂಡು ಹಾಗೂ ಎಡಗೈಯನ್ನು ಇನ್ನೊಬ್ಬರು ಎಡಗೈಯಲ್ಲಿ ಹಿಡಿಕೊಂಡು ಇಬ್ಬರ ಎರಡು ಕೈಗಳನ್ನು ಇಂಗ್ಲೀಷಿನ ಎಕ್ಸ್ ಆಕಾರದಲ್ಲಿ ಜೋಡಿಸಿ, ಇಬ್ಬರೂ ಚಾಚಿ ಎರಡು ಕಾಲುಗಳನ್ನು ಜೋಡಿಸಿ, ಇಂಗ್ಲೀಷಿನ ವಿ ಆಕಾರದಲ್ಲಿ ನಿಂತು ತಿರುಗಲು ಆರಂಭಿಸುತ್ತಾರೆ. ಈ ಒಂಡು ಆಟ ನಮ್ಮ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ , ಮಹಾರಾಷ್ಟ್ರದಲ್ಲಿ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಊರಲ್ಲಿ ಜಾತ್ರೆ ಇದ್ದಾಗ, ಪಾಂಡುರಂಗನ ಯಾತ್ರೆ ಇದ್ದಾಗ, ಸಭೆ–ಸಮಾರಂಭವಿದ್ದಾಗ ಈ ರೀತಿ ಚಕ್ಕಾ–ಚರಿಗಿ ಆಟ ಆಡುವದು ಒಂದು ಪದ್ಧತಿ."ಗೌಡ್ರ ನೀವು ಬರ್ರಿ, ದೇಸಾಯರ ನೀವು ಬರ್ರಿ..ಕುಲಕರ್ಣ್ಯರ ನೀವು ಬರ್ರಿ..ಅಂತಾ ಊರಿನ ಹಿರಿಯರನ್ನೆಲ್ಲಾ ಕರೆದು–ಕರೆದು ಆಟ ಆಡಿಸುವದು ಒಂದು ವಿಶೇಷ.

## ಬದುಕು. . . . ಶ್ರೀ ತಳಕು ಶ್ರೀನಿವಾಸ, ಮುಂಬೈ

ಬದುಕು ಈರುಳ್ಳಿಯಂತೆ (ನೀರುಳ್ಳಿ ಅಥವಾ ಉಳ್ಳಾಗಡ್ಡಿ)
ಬಲು ಘಾಟು, ಕತ್ತರಿಸಲು ಕಣ್ಣಿನಲ್ಲಿ ನೀರು
ಸುಲಿದಷ್ಟೂ ಪದರಗಳು
ಗಟ್ಟಿಯಾದ ಸಾರವಿಲ್ಲವೇ ಇಲ್ಲ
ತಿರುಳೇ ಇಲ್ಲದ ಸುರುಳಿ
ಸವಿಯಲು ಬಲು ಆನಂದ
ಜೊತೆಗೆ ಬಾಯಿ ವಾಸನೆ

***(ತಮಿಳಿನಲ್ಲಿ ಕೆಲವರ ತತ್ವಗಳನ್ನು ವೇಂಗಾಯ್ ಎಂದು ಆಡಿಕೊಳ್ಳುವುದಿದೆ)***

ಬದುಕೂ ಬಲು ಘಾಟು,
ಹಾದಿಯಲ್ಲಿ ಕೆಲವೊಮ್ಮೆ ಕಣ್ಣಿನಲ್ಲಿ ನೀರು
ದಿನಗಳು ಸವೆಯುತ್ತಲೇ ಇರುವುದು
ಆದರೂ ಸಾರ್ಥಕ್ಯದ ದಿನಗಳು ಕಾಣಸಿಗದು
ಬದುಕೂ ಸವಿಯಲು ಬಲು ಆನಂದ
ಆ ಸವಿಯ ಹಿಂದೆಯೇ ದುರ್ವಾಸನೆ
(ಕರ್ಮಫಲ ಎನ್ನೋಣವೇ)

ನನ್ನ ಬದುಕು ಒಂದು ಬ್ಯಾಲೆನ್ಸ್ ಶೀಟು
ಬರುವುದೆಷ್ಟೋ ಕಾಣುವಂತಹ ಡೆಬಿಟ್ಟುಗಳು
ಅಂತೆಯೇ ಬರುತಿಹದು ಗುಡ್ ವಿಲ್ ನಂತಹ ಕ್ರೆಡಿಟ್ಟುಗಳು
ಬದುಕಿನ ಕೊನೆಗೆ ತನಗೆ ತಾನೇ ಬ್ಯಾಲೆನ್ಸ್ ಆಗುವ ಶೀಟು (ಪತ್ರ)

ಇದರ ಮಧ್ಯೆ ಕೊಟ್ಟು ತೆಗೆದುಕೊಳ್ಳುವ
ಎಡ ಬಲದಲ್ಲಿ ಬರುವಂತಹ ಕಾಂಟ್ರಾ ಎಂಟ್ರಿಗಳು
ಈ ಶೀಟು ತಯಾರಾಗುವುದು ಒಮ್ಮೆ ಮಾತ್ರ
ಜೀವನದ ಕೊನೆಯಲ್ಲಿ ಶಿಲ್ಕು ಮಾತ್ರ ಶೂನ್ಯ

## ಹೊಕ್ಕೇನಿ/ಬರ್ತೇನಿ – ಪ್ರಕಾಶ ಸಿ. ರಾಜಗೋಳಿ, ಬೆಂಗಳೂರು.

ಹೊರಗಡೆ ಹೊರಟಾಗ ಇಲ್ಲವೆ ಯಾರಿಂದಲಾದರೂ ಬೀಳ್ಕೊಡುವಾಗ ನಾವು "ಹೊಕ್ಕೇನಿ" ಎಂದು ಹೇಳುವದಿಲ್ಲ ಬದಲಾಗಿ "ಬರ್ಲಾ" "ಬರ್ತೀನಿ" " ನಾನಿನ್ನು ಬರ್ಲಾ" "ಹೋಗಿ ಬರ್ಲಾ?" "ಬರೋಣವೇ?" ಮುಂತಾಗಿ ಹೇಳುತ್ತೇವೆ....ಆದರೆ ಆಸ್ಪತ್ರೆಯಿಂದ ಮತ್ತು ಮಾತನಾಡಿಸಲು ಹೋಗಿ ಬರುವಾಗ ಮಾತ್ರ ತಪ್ಪದೆ "ಹೊಕ್ಕೇನಿ" ಎಂದು ಹೇಳುತ್ತೇವೆ ಇಲ್ಲವೆ ಸುಮ್ಮನೆ ಜಾಗ ಖಾಲಿ ಮಾಡುತ್ತೇವೆ. ಮೊದಲ ಸಂದರ್ಭದಲ್ಲಿ ಹೊಕ್ಕೇನಿ ಎನ್ನುವದು ಅಶುಭವಾದರೆ ಎರಡನೆಯ ಸಂದರ್ಭದಲ್ಲಿ ಅದೇ ಸರಿಯಾಗಿ ಪರಿಣಮಿಸುತ್ತದೆ.

# ಮಹಾಶಿವರಾತ್ರಿ

– ಬ್ರಹ್ಮಕುಮಾರಿ ಮಾಲಾ (ಎಮ್.ಬಿ.ರಾಜಗೋಳಿ, ನಿವೃತ್ತ ಮುಖ್ಯೋಪಾಧ್ಯಾಯಿನಿ), ಯರಡಾಲ.



ಪ್ರಕಾಶ ರಾಜಗೋಳಿ ಅವರ ಸೊದರತ್ತೆಯವರಾದ ಇವರು ಗೋಕಾಕ್ ತಾಲೂಕಿನ ಬಡಿಗವಾಡ ಗ್ರಾಮದ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಪ್ರಧಾನ ಗುರುಮಾತೆಯಾಗಿ ಕಳೆದ ಅಕ್ಟೋಬರ್ 31 ರಂದು ನಿವೃತ್ತರಾಗಿದ್ದಾರೆ. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಕ್ರಿಯ ಸದಸ್ಯರಾಗಿರುವ ಇವರು ಪರಮಪಿತ ಶಿವನ ಬಗ್ಗೆ ಜನಜಾಗೃತಿ ಮೂಡಿಸಲು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ಭಾರತದ ಪ್ರತಿಯೊಂದು ಹಬ್ಬಕ್ಕೆ ತನ್ನದೆ ಆದ ಆಧ್ಯಾತ್ಮಿಕ ಹಿನ್ನೆಲೆ ಇದೆ. ಆಡಂಬರಗಳಿಗೆ ಒಳಗಾಗಿರುವ ಈ ಹಬ್ಬಗಳು ತಮ್ಮ ಮೂಲ ಅರ್ಥಗಳನ್ನು ಕಳೆದುಕೊಂಡಿವೆ.

ಭಾರತೀಯರು ಆಚರಿಸುವ ಹಬ್ಬಗಳಲ್ಲಿ ಮಹತ್ವದ ಸ್ಥಾನ ಪಡೆದಿರುವ ಶಿವರಾತ್ರಿ ಪರಮಪಿತ ಶಿವನಿಗೆ ಮೀಸಲು.
ಶಿವ ಎಂದರೆ ಕಲ್ಯಾಣಕಾರಿ, ಶುಭಕಾರಿ, ಮಂಗಳಕಾರಿ.

ದೈನಂದಿನ ಸೂರ್ಯನಿಲ್ಲದ ರಾತ್ರಿಗೂ ಶಿವರಾತ್ರಿಗೂ ಬಹಳ ವ್ಯತ್ಯಾಸವಿದೆ. ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದಾಗ.... ಸೂರ್ಯನ ಬೆಳಕಿನಲ್ಲಿಅಜ್ಞಾನವೆಂಬ ಕತ್ತಲು ಕವಿದಿರುವ ರಾತ್ರಿಗಳು ಹಲವು. ಯಾವಾಗ ಮಾನವನಲ್ಲಿ ಅಧರ್ಮ, ಅನ್ಯಾಯ, ಅನೀತಿ, ಅನೈತಿಕತೆ, ಅಶಾಂತಿ, ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ ಹೆಚ್ಚಾಗಿ ಆತ ಧರ್ಮಭ್ರಷ್ಟನಾಗಿ, ಕರ್ಮಭ್ರಷ್ಟನಾಗಿ ಅಜ್ಞಾನವೆಂಬ ಅಂಧಕಾರದಲ್ಲಿ ತೇಲುತ್ತಿರುವಾಗ ಮುಕ್ತಿಯ ಮಾರ್ಗದರ್ಶನ ನೀಡುವದೆ ಶಿವರಾತ್ರಿ.
ಯಾರಲ್ಲಿ ಅರಿಷಡ್ವರ್ಗಗಳು ಮೇಲುಗೈ ಪಡೆದು ಅಧಿಕಾರ ಲಾಲಸೆ, ಕಾಳಸಂತೆ, ಲಂಚ, ವಂಚನೆ, ಜಾತೀಯತೆ, ಭಾಷಾ ಗೊಂದಲ, ಸುಳ್ಳು ಗ್ರಂಥಗಳ ಮಾರ್ಗದರ್ಶನ, ಅಂಧವಿಶ್ವಾಸ ಮುಂತಾದವುಗಳಲ್ಲಿ ಮನುಷ್ಯಾತ್ಮರು ಸಿಕ್ಕಿ ಹಾಕಿಕೊಂಡು ದಾರಿಕಾಣದೆ ತಡಕಾಡುತ್ತಾರೆ.

ಭಗವದ್ಗೀತೆಯಲ್ಲಿ ಹೇಳಿದಂತೆ "ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ....." ಯಾವಾಗ ಭಗವಂತನನ್ನು ಭಕ್ತರು ಬೇಡುತ್ತಾರೋ ಅವರ ಕಷ್ಟಗಳನ್ನು ಪರಿಹರಿಸಲು ಶಿವ ಧರೆಗವತರಿಸುವ ರಾತ್ರಿಯೆ ಮಹಾ ಶಿವರಾತ್ರಿ.

***ಶಿವರಾತ್ರಿಯ ಉಪವಾಸ:***
ಉಪ ಎಂದರೆ ಹತ್ತಿರ, ಸಮೀಪ ಇರುವದು ಎಂದರ್ಥ. ಕೇವಲ ದೇಹ ದಂಡಿಸಿ ಮಾಡುವ ಉಪವಾಸಕ್ಕಿಂತ ನಮ್ಮಲ್ಲಿರುವ ವಿಕಾರಗಳಿಗೆ ದಂಡನೆ ನೀಡಿ ಮಾಡುವ ಉಪವಾಸವೆ ಶ್ರೇಷ್ಠ.

***ಶಿವರಾತ್ರಿ ಜಾಗರಣೆ:***
ಶಿವರಾತ್ರಿಯಂದು ಸಾಮಾನ್ಯವಾಗಿ ಭಕ್ತರು ದೇವರ ಚಿಂತನೆ ಮಾಡುತ್ತ ದೈಹಿಕ ಉಪವಾಸ ಮಾಡುತ್ತಾರೆ ಆದರೆ ಮಾನಸಿಕ ಉಪವಾಸ ಮಾಡುವದು ಮತ್ತು ಜಾಗರಣೆ ಮಾಡುವದು ಶ್ರೇಷ್ಠ.

## ಲಾಭ ಎರಡು ಮೂರು ನಾಕು.... – ಪ್ರಕಾಶ ಸಿ. ರಾಜಗೋಳಿ, ಬೆಂಗಳೂರು.

ನಮ್ಮ ಕಡೆ ಗ್ರಾಮೀಣ ಭಾಗಗಳಲ್ಲಿ ಮಾರಾಟ ಸಂಬಂಧಿ ವಸ್ತುಗಳ ಎಣಿಕೆ ಪ್ರಾರಂಭಿಸುವಾಗ ಒಂದರಿಂದ ಆರಂಭಿಸುವದಿಲ್ಲ ಬದಲಾಗಿ "ಲಾಭ ಎರಡು ಮೂರು ನಾಕು........" ಎಂದು ಹೇಳುತ್ತಾರೆ. ಇದನ್ನು ನಾನು ಗಮನಿಸಿದ್ದು ನಮ್ಮ ಕಡೆ ಜರುಗುವ ವಾರದ ಸಂತೆಗಳಲ್ಲಿ ಜೋಳ, ಗೋಧಿ ಇತ್ಯಾದಿ ಕಾಳುಕಡಿ ಕೊಳ್ಳುವಾಗ, ತಿನ್ನುವ ಎಲೆ ಕೊಳ್ಳುವಾಗ ಇತ್ಯಾದಿ..

## ಗುಬ್ಬಿ–ಛತ್ತ – ಅರುಣ ಆರ್. ಯಾದವಾಡ, ಬೆಂಗಳೂರು.

ನಮ್ಮ ಉತ್ತರ ಕರ್ನಾಟಕದ ಜಿಲ್ಹೆಗಳಲ್ಲಿ ಕೂಸುಗಳು ಹುಟ್ಟಿದ ಮೇಲೆ ಅವುಗಳನ್ನು ತೊಟ್ಟಿಲಲ್ಲಿ ಮಲಗಿಸಿ ತೊಟ್ಟಿಲಿನ ಮೇಲ್ಗಡೆ ಒಂದು ಚೌಕಾಕಾರದ ಪುಟ್ಟ ಗಾಜಿನ ಡಬ್ಬಿಯೊಂದನ್ನು ಕಟ್ಟಿರುತ್ತಾರೆ. ಇದಕ್ಕೆ ಗುಬ್ಬಿ–ಛತ್ತ ಎಂದು ಕರೆಯುತ್ತಾರೆ. ಅದರ ಒಳಗಡೆ ಕಟ್ಟಿಗೆ ಪುಡಿ ತುಂಬಿ ಬಟ್ಟೆಯಿಂದ ಮಾಡಿದ ಚಿಕ್ಕ ಚಿಕ್ಕ , ಬಣ್ಣ, ಬಣ್ಣದ ಪಕ್ಷಿಗಳನ್ನು ನೇತು ಹಾಕಿರುತ್ತಾರೆ. ಬಣ್ಣ, ಬಣ್ಣದ ನಳಿಕೆಗಳು, ಮುತ್ತುಗಳು, ವಿವಿಧ ತರಹದ ಬಟ್ಟೆಗಳನ್ನು ಉಪಯೋಗಿಸಿ ಆದಷ್ಟು ಆಕರ್ಷಕವಾಗಿ ಮಾಡಿರುತ್ತಾರೆ.
ಚಿಕ್ಕ ಮಕ್ಕಳು ತೂಗುತ್ತಿರುವ ತೊಟ್ಟಿಲಲ್ಲಿ ಈ ವರ್ಣಮಯ ಗುಬ್ಬಿ–ಛತ್ತನ್ನು ನೋಡುತ್ತ ಕೂಡಲೇ ನಿದ್ರೆಗೆ ಜಾರುತ್ತವೆ. ಈಗಿನ ಅತ್ಯಾಧುನಿಕ ಎಲೆಕ್ಟ್ರಾನಿಕ್ ಆಟಿಕೆಗಳ ಈ ಕಾಲದಲ್ಲಿ ಈ ಗುಬ್ಬಿ–ಛತ್ತಗಳು ಕಣ್ಮರೆಯಾಗಿವೆ. ಆದರೆ ಹಳ್ಳಿಗಳಲ್ಲಿ ಇವನ್ನು ಈಗಲೂ ಕಾಣಬಹುದು.

ಅಂದು



ಇಂದು



ಆನಂದ ಯಾದವಾಡ

## ಹೀಗೊಂದು ಮಾರವಾಡಿ ಸಂಸಾರ – ಲಲಿತ ಪ್ರಬಂಧ – ತಳಕು ಶ್ರೀನಿವಾಸ್, ಮುಂಬೈ

ಇತ್ತೀಚೆಗೆ ನಾನು ಬೆಂಗಳೂರಿನಿಂದ ಮುಂಬಯಿಗೆ ಟ್ರೈನಿನಲ್ಲಿ ಪ್ರಯಾಣ ಮಾಡುತ್ತಿದ್ದೆ. ಉದ್ಯಾನ್ ಎಕ್ಸ್‌ಪ್ರೆಸ್‌ನಲ್ಲಿ ತುಂಬಾ ಜನ ಗುಜರಾತಿನ ಪ್ರಾಂತ್ಯಕ್ಕೆ ಹೋಗುವವರು ಇರುತ್ತಾರೆ. ಬೆಂಗಳೂರಿನಿಂದ ಮುಂಬಯಿಗೆ ಬಂದು ನಂತರ ಗುಜರಾತಿನ ಕಡೆಗೆ ಹೋಗುತ್ತಾರೆ – ಏಕೆಂದರೆ ಬೆಂಗಳೂರಿನಿಂದ ವಾರಕ್ಕೆ ಎರಡು ದಿನಗಳು ಮಾತ್ರ ನೇರ ಗಾಡಿ ಇರೋದು ಮತ್ತು ಅದರಲ್ಲಿ ಟಿಕೇಟು ಸಿಗೋದು ತುಂಬಾ ಕಷ್ಟ ಅಂತೆ.

ಮುಂಬೈಗೆ 24 ಘಂಟೆಗಳ ಪ್ರಯಾಣ. ಒಬ್ಬನೇ ಪ್ರಯಾಣ ಮಾಡುವಾಗ ಮಾಡಲು ಕೆಲಸವಿಲ್ಲದೇ ನನ್ನ ಗಮನವೆಲ್ಲಾ ಎದುರಿಗಿದ್ದ ಮಾರವಾಡಿ ಸಂಸಾರದ ಕಡೆಯೇ. ಆ ಸಂಸಾರದ ಬಗೆಗಿನ ನನ್ನ ಕೆಲ ಅನಿಸಿಕೆ, ನಾನು ಕಂಡ ಕೆಲ ಸಂಗತಿಗಳನ್ನು ಇಲ್ಲಿ ಹಂಚಿಕೊಳ್ಳಲು ಪ್ರಯತ್ನಿಸಿದ್ದೇನೆ.

ಮಾರವಾಡಿಗಳದ್ದು ಪುರುಷ ಪ್ರಧಾನ ಕುಟುಂಬ ಅಂದ್ರೆ ತಪ್ಪಾಗಲ್ಲ. ಹಿರಿಯರಲ್ಲಿ ದರ್ಪ ದಬ್ಬಾಳಿಕೆ ಎದ್ದು ಕಾಣುವಂತಿರುತ್ತದೆ. ಮಾರವಾಡಿ ಅಥವಾ ಮಾರವಾರಿ ಜನಾಂಗ ಮೂಲತ: ರಾಜಸ್ಥಾನದ ಮಾರವಾರ ಪ್ರಾಂತ್ಯದವರು. ಇವರ ವೃತ್ತಿ ವ್ಯಾಪಾರ. ಜಗತ್ತಿನ ಎಲ್ಲ ಕಡೆಗಳಲ್ಲೂ ಕಾಣಬರುವವರು (ಹೊಟೆಲ್ ಉದ್ಯಮದಲ್ಲಿ ದಕ್ಷಿಣ ಕನ್ನಡದವರು, ಕಟ್ಟಡ ಕಾಮಗಾರಿಗಳಲ್ಲಿ ತಮಿಳಿನವರು ಮತ್ತು ಶುಶ್ರೂಷೆಯ ಉದ್ಯೋಗಗಳಲ್ಲಿ ಮಲಯಾಳಿಗಳ ಹಾಗೆ).

ಹಿರಿಯರು ತಾವು ಹೇಳಿದ್ದೇ ಸರಿ ಮಾಡಿದ್ದೇ ಸರಿ – ಅದನ್ನು ಪ್ರಶ್ನಿಸೋ ಅಧಿಕಾರ ಕಿರಿಯರಿಗಿಲ್ಲ. ಆದರೂ ಅವರು ನಿಷ್ಠಾವಂತರು – ದಿನಂಪ್ರತಿ ಬೆಳಗ್ಗೆ ಬಸದಿಗೆ ಹೋಗಿ ಪ್ರಾರ್ಥನೆ ಸಲ್ಲಿಸುವರು. ಹಿರಿಯ ಹೆಂಗಸರು ಮನೆಯಲ್ಲಿ ಕಿರಿಯರ ಮೇಲೆ ಜೋರು ಮಾಡುವರು. ಹಿರಿಯ ಗಂಡಸರು ತಮ್ಮ ಕಿರಿಯರ ಮೇಲೆ ಅಂಗಡಿಯಲ್ಲಿ ಕಡಿವಾಣ ಹಾಕುವರು.

ಮನೆಯಲ್ಲಿ ದಘೂತಿ ಅತ್ತೆಯ ಸೊಂಟದಲ್ಲಿ ಬೀಗದ ಕೈಗಳ ಗೊಂಚಲು. ಅವಳದ್ದು ಅಡುಗೆ ಮನೆಯಿಂದ ಹಿಡಿದು ಮಲಗುವ ಕೋಣೆವರೆಗೆ ಮೇಲ್ವಿಚಾರಣೆ – ಒಂದು ತರಹದ ಮ್ಯಾಕ್ರೋ ಲೆವೆಲ್ ಮ್ಯಾನೇಜ್‌ಮೆಂಟ್..

ಅವಳು ಮಾತ್ರ ಬೇರೆಯ ಗಂಡಸರೊಂದಿಗೆ ಮಾತನಾಡಲು ಅಡ್ಡಿಯಿಲ್ಲ ಅದೂ ತಲೆಯ ಮೇಲೆ ಸೆರಗು ಹೊದೆಯದೇ. ತನ್ನ ಹೆಣ್ಣುಮಕ್ಕಳೂ ಹೇಗೆ ಡ್ರೆಸ್ ಮಾಡಿಕೊಂಡರೂ ಅಡ್ಡಿ ಇಲ್ಲ. ಆದರೆ ಅವಳ ಹಿಡಿತವೆಲ್ಲಾ ಬೇರೆಯ ಮನೆಗಳಿಂದ ಬಂದ ಸೊಸೆಯರ ಮೇಲೇ. ಅವರುಗಳಲ್ಲೂ ಎರಡು ವಿಧ. ಹೊಸದಾಗಿ ಮನೆಗೆ ಬಂದವರು ಮತ್ತು ಹಳಬರು. ಹೊಸಬರು ಎಲ್ಲ ಕೆಲಸ ಮಾಡಬೇಕು – ಅದಕ್ಕೇ ಇರಬೇಕು ಅವರುಗಳು ಸಪೂರ ಮತ್ತು ಮುಟ್ಟಿದರೆ ಮುರಿದು ಹೋಗುವ ಬಳ್ಳಿಯಂತೆ. ಅಡುಗೆ ಮನೆಯ ಕೆಲಸದಿಂದ ಹಿಡಿದು ಮನೆಯ ಎಲ್ಲ ಕಾರ್ಯದಲ್ಲೂ ಅವರೇ. ಸ್ವಲ್ಪ ಹಿರಿಯರಾದ ಸೊಸೆಯರು ಹೊಸದಾಗಿ ಬಂದವರ ತಪ್ಪು ಕಂಡು ಹಿಡಿಯುವ – ತಿದ್ದುವವರು. ಅವರು ಮುಂದಿನ ಪ್ರಮೋಶನ್‌ಗಾಗಿ ಕಾಯುತಿರುವವರು(ದಘೂತಿ ಆಗಲು..!). ಕಿರಿಯರು ಮತ್ತು ಮಧ್ಯಮರಲ್ಲಿ ಎಷ್ಟು ಬೇಗ ಪ್ರಮೋಶನ್ ಆಗಬಹುದು ಎಂಬುದರ ಚಿಂತನಾ ಮಾತುಕತೆ – ಆದೂ ಅತ್ತೆಗೆ ತಿಳಿಯದ ಹಾಗೆ.

ಇನ್ನು ಮಕ್ಕಳಲ್ಲಿ ಗಂಡು ಮಕ್ಕಳಿಗೆ ಮೊದಲ ಆದ್ಯತೆ. ಕೆಲಸ ಮಾಡಲು ಮಾತ್ರ ಹೆಣ್ಣುಮಕ್ಕಳು – ಅವರಿಗೆ ಓದು ಬರಹ ಬೇಡ ಅನ್ನುವ ಧೋರಣೆ ಹಿರಿಯರಲ್ಲಿ. ಗಂಡು ಮಕ್ಕಳನ್ನು ವ್ಯಾಪಾರದಲ್ಲಿ ತೊಡಗಿಸುವುದರಲ್ಲಿ ಎರಡು ವಿಧವಿದೆ. ಹೆಚ್ಚಿನ ಸಿರಿವಂತರಲ್ಲದವರು ಗಂಡು ಮಕ್ಕಳಿಗೆ ಅವಶ್ಯಕತೆ ಇರುವಷ್ಟು (ಹತ್ತನೆ ತರಗತಿವರೆಗೆ) ಓದನ್ನು ಕೊಡಿಸುವರು. ನಂತರ ಹಿರಿಯರ ಸ್ನೇಹಿತರ ವ್ಯಾಪಾರದಲ್ಲಿ ಕೆಲಸಕ್ಕೆ ಕಳುಹಿಸಿವರು. ಇಲ್ಲಿ ಪೊಲೀಸ್ ವಿಭಾಗದಲ್ಲಿ ಕೊಡುವಂತಹ ಶಿಕ್ಷಣ. ತುಂಬಾ ಕಷ್ಟತರಹದ್ದು. ಆ ಸ್ನೇಹಿತರ ಅಂಗಡಿ ಯಾ ಮನೆಯಲ್ಲೇ ವಾಸ. ಬೆಳಗ್ಗೆ ಬೇಗ ಅಂಗಡಿ ತೆರೆಯಬೇಕು. ಸಂಜೆ 9 ರವರೆಗೂ

ದುಡಿತ. ಇಷ್ಟಾಗಿ ಅವರ ಕೈಗೆ ದುಡ್ಡು ಸಿಗದ ಹಾಗೆ ನೋಡಿಕೊಳ್ಳುವರು. ಈ ಹುಡುಗರು ತುಂಬಾ ಚಾಣಾಕ್ಷರು. ಬಹಳ ಬೇಗ ವ್ಯಾಪಾರ ಉದ್ಯಮದ ಒಳ ಮರ್ಮವನ್ನು ಅರಿಯುವರು. ಆ ಹಿರಿಯ ಸ್ನೇಹಿತರು ಇವರ ಚಾಣಾಕ್ಷತನ ದೃಢೀಕರಿಸಿದ ಮೇಲೆಯೇ ಮತ್ತೆ ಇವರ ಮನೆಯ ಕಡೆಗೆ ಓಟ. ಅಲ್ಲಿ ಇವರಿಗಾಗಿ ಒಂದು ವ್ಯಾಪಾರ ಉದ್ಯಮ ಕಾಯುತ್ತಿರುತ್ತದೆ. ಇನ್ನು ಸ್ವಲ್ಪ ಸಿರಿವಂತರಾದವರು ಗಂಡು ಮಕ್ಕಳು ಓದುವವರೆಗೂ ಓದಿಸಿ ನಂತರ ಮದುವೆ ಮಾಡುವರು. ಆ ಹುಡುಗ ಕೇಳಿದಷ್ಟು ಹಣ ಇತ್ತು ಒಂದು ವ್ಯಾಪಾರ ಮಾಡಲು ಬಿಡುವರು. ಅವನಿಗೆ ವ್ಯಾಪಾರದಲ್ಲಿ ಅನುಭವವೇ ಇರುವುದಿಲ್ಲ. ಮತ್ತೊಂದೆಡೆ ಹೊಸದಾಗಿ ಮದುವೆಯಾಗಿ. ಗಮನವೆಲ್ಲಾ ಮಡದಿಯೊಂದಿಗೆ ಚೆಲ್ಲಾಟದ ಕಡೆ. ತಂದೆ ಕೊಟ್ಟ ಹಣದಲ್ಲಿ ಪ್ರಾರಂಭಿಸಿದ ವ್ಯಾಪಾರ ನೀರಿನಲ್ಲಿ ಮಾಡಿದ ಹೋಮದಂತೆ. ಆಗ ತಂದೆಗೆ ಗೊತ್ತಾಗದ ಹಾಗೆ ಸಾಲಗಾರರ ಮೊರೆಗೆ. ಅವರು ಈತನ ತಂದೆಯ ಮುಖ ನೋಡಿ ಈತನಿಗೆ ಸಾಲ ಕೊಡುವರು. ಅದನ್ನೂ ಬಹಳ ಬೇಗ ಕಳೆದುಕೊಂಡು ಮೂಗಿನ ಮಟ್ಟಕ್ಕೆ ಸಾಲದಲ್ಲಿ ಮುಳುಗಿದಾಗ ಸಾಲಗಾರರು ಈತನ ತಂದೆಯ ಸಾಲ ಮರುಪಾವತಿಗಾಗಿ ಹೋಗುವರು. ಆಗ ತಂದೆಯಾದರೋ ಪೂರ್ಣವಾಗಿ ವ್ಯಾಪಾರೀ ಮನೋಭಾವದಲ್ಲಿ ಹಣ ವಾಪಸ್ಸು ಮಾಡುವುನೆಂದೇ ಜೊತೆಗೆ ಒಂದು ಶರತ್ತನ್ನು ಮಾಡಿಕೊಳ್ಳುವನು. ಅದೇನೆಂದರೆ, ಹುಡುಗನಿಂದ ಹಣ ವಾಪಸ್ಸು ತೆಗೆದುಕೊಳ್ಳಲು ಪ್ರಯತ್ನಿಸಿಬೇಕು ಮತ್ತು ಹಾಗೆ ಬಂದ ಹಣವನ್ನು ತನಗೆ ಬಡ್ಡಿಯ ಸಮೇತ ಹಿಂದಿರುಗಿಸಬೇಕು. ಇದರ ಬಗ್ಗೆ ತಿಳಿಯದ ಹುಡುಗ ಮಾನ ಉಳಿಸಿಕೊಳ್ಳುವ ಸಲುವಾಗಿ ಕಡೆಯದಾಗಿ ತನ್ನ ತಂದೆಯ ಮುಂದೆ ಎಲ್ಲ ವಿಷಯಗಳನ್ನೂ ತಿಳಿಸಿ ಹಣವನ್ನು ಕೇಳುವನು. ತಂದೆಯಾದರೋ ಮತ್ತೆ ವ್ಯಾಪಾರೀ ಮನೋಭಾವದಲ್ಲಿ ಸಾಲಕ್ಕಿಂತ ಹೆಚ್ಚಿನ ಹಣ ಕೊಡುವುದಾಗಿಯೂ ಅದನ್ನು ಬಡ್ಡಿ ಸಮೇತ ಮರುಪಾವತಿಸಲು ಶರತ್ತನ್ನು ಹಾಕುವನು. ಆಗ ಹುಡುಗ ವ್ಯಾಪಾರದಲ್ಲಿ ಪೂರ್ಣವಾಗಿ ತನ್ನನ್ನು ತಾನೇ ತೊಡಗಿಸಿಕೊಳ್ಳುವನು. ಇಲ್ಲಿ ಅವನಿಗೆ ಜೀವನದ ಅರಿವಾಗಿದೆ. ನಲಿವು ನೋವು ಎರಡನ್ನೂ ಅನುಭವಿಸಿದ್ದಾಗಿದೆ. ಆತ ವ್ಯಾಪಾರದಲ್ಲಿ ನಿಜಕ್ಕೂ ಹೆಚ್ಚಿನ ಪ್ರತಿಫಲ ಪಡೆಯುವನು. ಇಂತಹ ಟ್ರೈನಿಂಗನ್ನು ಎಂತಹ ಮ್ಯಾನೇಜ್‌ಮೆಂಟ್ ಕಾಲೇಜುಗಳಲ್ಲೂ ನೀಡುವುದಿಲ್ಲ. ಇದು ವಂಶ ಪಾರಂಪರ್ಯವಾಗಿ ನಡೆದು ಬಂದ ಪದ್ಧತಿ.

ಅದೇ ಹೆಣ್ಣುಮಕ್ಕಳಿಗೆ ಮನೆಕೆಲಸದಲ್ಲೇ ಪೂರ್ಣ ತರಬೇತಿ. ಆದಷ್ಟೂ ಬೇಗ ಅವರನ್ನು ಮದುವೆ ಮಾಡಿ ಬೇರೆ ಮನೆ ಕಡೆ ಕಳುಹಿಸುವ ತರಾತುರಿ. ಇನ್ನು ಮಕ್ಕಳಲ್ಲೇ ನೋಡಿದರೆ ಕುಡಿಯಲು ನೀರು ಬೇಕಿದ್ರೆ ಗಂಡು ಮಕ್ಕಳು ಅಲ್ಲಾಡೋಲ್ಲ .. ಹೆಣ್ಣು ಮಕ್ಕಳೇ ತಂದು ಕೊಡಬೇಕು. ಆ ಮಗು ಊಟಕ್ಕೆ ಕೂತಿದ್ರೂ ಎದ್ದು ಹೋಗಿ ತರಬೇಕು. ಇನ್ನು ಹಿರಿಯರಲ್ಲಿ ಇವರ ಭಕ್ತಿ ಬಗ್ಗೆ ಹೇಳಬೇಕಂದ್ರೆ – ಎಲ್ಲೇ ಹಿರಿಯರು ಮೊದಲ ಬಾರಿ ಕಂಡರೂ (ಅದು ರಸ್ತೆಯ ಮಧ್ಯ ಭಾಗದಲ್ಲೇ ಇರಬಹುದು) ಕಾಲು ಮುಟ್ಟಿ ನಮಸ್ಕರಿಸಬೇಕು.

ಇನ್ನು ಇವರುಗಳ ಅಡುಗೆ ಊಟದ ವೈಖರಿ ಬಗ್ಗೆ ಸ್ವಲ್ಪ ಹೇಳುವೆ. ಇವರುಗಳಿಗೆ ಸಿಹಿ ಪದಾರ್ಥ ಮತ್ತು ಎಣ್ಣೆಯಲ್ಲಿ ಕರಿದ ಪದಾರ್ಥ ಎಂದರೆ ಪಂಚಪ್ರಾಣ. ಎಲ್ಲರೂ ಒಂದೇ ತಾಟಿನಲ್ಲಿ ತಿನ್ನುವರು ಒಂದೇ ಲೋಟೆಯಲ್ಲಿ ನೀರು ಕುಡಿಯುವರು. ಅದೇನು ಒಮ್ಮತ ಸಂಕೇತವೋ ಏನೋ ತಿಳಿಯದು. ನಮ್ಮ ಪಾತಜ್ಜಿ ಹೇಳೋ ಪ್ರಕಾರ ಎಂಜಲು–ಮುಂಜಲು ಎಲ್ಲಾ ಅವರು ಅನುಸರಿಸೊದೇ ಇಲ್ಲ.

ಒಟ್ಟಿನಲ್ಲಿ ಮಾರವಾಡಿ ಕುಟುಂಬದ ಒಂದು ಶಿಸ್ತು ಬದ್ಧ ಕೌಟುಂಬಿಕ ಚೌಕಟ್ಟಿಗೆ ಒಳ ಪಟ್ಟು, ಒಂದು ನಿರ್ದಿಷ್ಟ ರೂಪು ರೇಷೆಗಳ ನಡುವೆ ಬದುಕನ್ನು ಸಾಗಿಸುವ ಶ್ರಮ ಜೀವಿಗಳು. ಇವರಿಂದ ನಾವು ಕಲಿಯ ಬೇಕಾದ ಜೀವನ ಪಾಠ ಬಹಳಷ್ಟಿದೆ ಅಂದ್ರೆ ಅದು ಉತ್ಪ್ರೇಕ್ಷೆಯಲ್ಲ.

## ಯುಗ ಯುಗಾದಿ ಕಳೆದರೂ . . . . – ಪ್ರಕಾಶ ಸಿ.ರಾಜಗೋಳಿ, ಬೆಂಗಳೂರು.

ಎಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು....

*"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ*
*ಹೊಸ ವರುಷಕೆ ಹೊಸ ಹರುಷವ*
*ಹೊಸತು ಹೊಸತು ತರುತಿದೆ....."*

ಈ ಹಾಡು ಹೈಸ್ಕೂಲು ವಿಧ್ಯಾರ್ಥಿಗಳಿಗೆ ಬಾಯಿಪಾಠ ಮಾಡಿ ಪರೀಕ್ಷೆಯಲ್ಲಿ ಮಾರ್ಕ್ಸ್ ಗಳಿಸಲು ಸಾಧನ.. ಮುದ್ದಾಮ್ ಸಾಹಿತಿಗಳಿಗೆ, ಭಾಷಣಕಾರರಿಗೆ ಯುಗಾದಿ ಎಂದಾಗ ತಕ್ಷಣ ನೆನಪಾಗುವ ಈಸಿಯಾಗಿ ನೆನಪಿನಲ್ಲಿ ಉಳಿಯಬಹುದಾದ ಉಪಮೆ..... ! ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಯುಗಾದಿಯ ಸಮಗ್ರ ಅರ್ಥ ನೀಡುವ ಕವನ..... ! ಆದರೆ ಅಸಲಿಗೆ ಇದು ಜೀವನ್ಮರಣಗಳ ಸಮಗ್ರ ನೋಟದ ಪರಿಪೂರ್ಣ ಚಿತ್ರಣ ನೀಡುವ ಸಂಪೂರ್ಣ ಕಾವ್ಯ.

ಯುಗಾದಿ ಹಿಂದೂಗಳಿಗೆ ಹೊಸ ವರ್ಷದ ಆರಂಭದ ದಿನ. ಯುಗ + ಆದಿ = ಯುಗಾದಿ. ಇದೇ ದಿನದಂದು ವಿಶ್ವದ ನಿರ್ಮಾಣವನ್ನು ಸೃಷ್ಟಿಕರ್ತ ಬ್ರಹ್ಮ ಆರಂಭಿಸಿದ ಎಂದು ನಂಬಲಾಗಿದೆ. ಹಿಂದು ಪುರಾಣಗಳ ಅಥವಾ ಕಾಲಗಣನೆಯ ಪ್ರಕಾರ 4 ಯುಗಗಳು ಈ ಕೆಳಗಿನಂತೆ ವಿಂಗಡನೆಯಾಗಿವೆ

*ಕೃತಯುಗ = 17,28,000 ವರ್ಷಗಳು*
*ತ್ರೇತಾಯುಗ = 12,96,000 ವರ್ಷಗಳು*
*ದ್ವಾಪರಯುಗ = 8,64,000 ವರ್ಷಗಳು*
*ಕಲಿಯುಗ = 4,32,000 ವರ್ಷಗಳು*

ಗಮನಿಸಿ ನೋಡಿ. ಇವು 4:3:2:1 ಅನುಪಾತದಲ್ಲಿ ವಿಭಜಿಸಲ್ಪಟ್ಟಿವೆ.
ಈ ರೀತಿ ಒಂದು ಮಹಾಯುಗ ಅಥವಾ ಪೂರ್ಣಯುಗ ಸಂಪೂರ್ಣವಾಗಲು 4,32,00,00,000 ವರ್ಷಗಳು ಬೇಕು.
ಇಂತಹ 100 ಮಹಾಯುಗಗಳು ಸೇರಿದಾಗ ಒಂದು ಕಲ್ಪ ಘಟಿಸುತ್ತದೆ.
ಒಂದು ಕಲ್ಪ ಎಂದರೆ ಬ್ರಹ್ಮನ ಅರ್ಧ ದಿನಕ್ಕೆ ಸಮ ಎನ್ನಲಾಗಿದೆ!!!!!!!!!!!!
4 ಕಲ್ಪಗಳು ಒಂದು ಚತುರ್ಯುಗಕ್ಕೆ ಸಮ.
ಒಂದು ಮನ್ವಂತರವಾಗಲು 71 ಚತುರ್ ಯುಗಗಳು ಬೇಕು.

ಹೊಸ ವರ್ಷಾಚರಣೆಯ ಈ ಹಬ್ಬ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಯುಗಾದಿ ಎಂದು ಕರೆಸಿಕೊಂಡರೆ ಮಹಾರಾಷ್ಟ್ರದಲ್ಲಿ ಗುಡಿಪಾಡವಾ ಎಂದು ಕರೆಸಿಕೊಳ್ಳುತ್ತದೆ.

ಇದೇ ದಿನ ಮರ್ಯಾದಪುರುಷ ಶ್ರೀರಾಮ ವಾಲಿಯ ವಧೆ ಮಾಡಿದ ಮತ್ತು ಇದೇ ದಿನ ರಾವಣನನ್ನು ವಧಿಸಿ ಅಯೋಧ್ಯೆಯ ಪ್ರವೇಶ ಮಾಡಿದ ಎನ್ನಲಾಗಿದೆ.

ಯುಗಾದಿ ಋತುಗಳ ರಾಜ ವಸಂತನ ಆಗಮನದ ಸೂಚಕವೂ ಹೌದು. ಯುಗಾದಿ ಚೈತ್ರ ಶುದ್ಧ ಪ್ರತಿಪದೆಯಂದು ಬರುತ್ತದೆ. 6ನೇಯ ಶತಮಾನದಲ್ಲಿ ಇದ್ದ ವರಾಹಮಿಹಿರ ಋಷಿಯು ಯುಗಾದಿಯನ್ನು ಹೊಸವರ್ಷದ ಮೊದಲ ದಿನ ಎಂದು ನಿರ್ಧರಿಸಿ ಆ ಮೂಲಕ ಹೊಸ ವರ್ಷಾಚರಣೆಗೆ ಚಾಲನೆ ನೀಡಿದ ಎನ್ನಲಾಗಿದೆ.

ಯುಗಾದಿಯು ಚಾಂದ್ರಮಾನ ಪದ್ಧತಿ ಅನುಸರಿಸುವ ಹಿಂದುಗಳಿಗೆ ಅಥವ ಶಾಲಿವಾಹನ ಶಕೆ ಅನುಸರಿಸುವವರಿಗೆ ವರ್ಷದ ಆರಂಭದ ದಿನ.

ಯುಗಾದಿ ಹಬ್ಬದ ತಯಾರಿ ವಾರದಷ್ಟು ಮೊದಲೆ ಆರಂಭವಾಗುತ್ತದೆ. ಮನೆಗೆ ಹೊಸ ಅಲಂಕಾರ ನೀಡುವದು, ಹೊಸ ಬಟ್ಟೆ ಖರೀದಿ ಇತ್ಯಾದಿ ನಡೆಯುತ್ತದೆ.

ಅಂದು ನಸುಕಿನಲ್ಲಿ ಎದ್ದು ಅಭ್ಯಂಜನ ಸ್ನಾನ ಮಾಡಿ ಮನೆಬಾಗಿಲನ್ನು ಮಾವಿನ ತಳಿರುಗಳಿಂದ ಅಲಂಕರಿಸುತ್ತಾರೆ. ಸಮೃದ್ಧಿಯ ಸಂಕೇತವಾಗಿ ತಳಿರು ಕಟ್ಟಲಾಗುತ್ತದೆ. ಮನೆಯೆದುರು ಸಗಣೆಯಿಂದ ಸಾರಿಸಿದ ನೆಲದ ಮೇಲೆ ರಂಗೋಲಿ ಹಾಕಲಾಗುತ್ತದೆ.

ಹೋಳಿಗೆ ಇತ್ಯಾದಿ ಸಿಹಿಭಕ್ಷ್ಯಗಳ ತಯಾರಿ ಮತ್ತು ಸೇವನೆ ಅಂದಿನ ವಿಶೇಷ. ಮಾವಿನ ಕಾಯಿಗಳು ಯಥೇಚ್ಛವಾಗಿ ಸಿಗುವದರಿಂದ ಮಾವಿನಕಾಯಿಯ ಉಪ್ಪಿನಕಾಯಿಗಳನ್ನು ಮಾಡಿಟ್ಟುಕೊಂಡು ವರ್ಷವಿಡೀ ತಿನ್ನುತ್ತಾರೆ.

ಆಂಧ್ರದಲ್ಲಿ ಕವಿ ಸಮ್ಮೇಳನಗಳನ್ನು ಯುಗಾದಿಯ ಸವಿನೆನಪಿಗಾಗಿ ಆಯೋಜಿಸಲಾಗುತ್ತದೆ. ಇದು ಕವಿಗಳಿಗೆ ಮತ್ತು ಕಾವ್ಯಾಸಕ್ತರಿಗೆ ಕ್ರಮವಾಗಿ ತಮ್ಮ ಪ್ರತಿಭಾ ಪ್ರದರ್ಶನದ ಮತ್ತು ಪ್ರತಿಭಾ ಪುರಸ್ಕಾರದ ವೇದಿಕೆ.

ಬೇವು ಬೆಲ್ಲ ಸೇವನೆ ಅಂದಿನ ವಿಶೇಷ. ನೋವು ನಲಿವುಗಳ ಸಮ್ಮಿಶ್ರಣ ಈ ಬೇವು ಬೆಲ್ಲ. ಜೀವನದಲ್ಲಿ ನೋವಾದಾಗ ಕುಗ್ಗದೆ ನಲಿವಾದಾಗ ಹಿಗ್ಗದೆ ಎರಡನ್ನು ಸಮಾನವಾಗಿ ಸ್ವೀಕರಿಸಬೇಕು ಎನ್ನುವದೆ ಇದರ ಗೂಢಾರ್ಥ.

ಯುಗಾದಿ ಹಬ್ಬ ಬೇಸಿಗೆಯ ಆರಂಭದ ಸೂಚಕ ಮತ್ತು ಮಕ್ಕಳಿಗೆ ಶಾಲೆಗೆ ರಜೆಯ ಮಜ ಅನುಭವಿಸಲು ಅನುಕೂಲ ಮಾಡಿಕೊಡುತ್ತದೆ. ಹೀಗಾಗಿ ಈ ರಜೆಯ ದಿನಗಳಲ್ಲಿ ಪ್ರವಾಸ ಮಾಡುವದು ಹೆಚ್ಚುತ್ತದೆ. ಇದು ಟೂರಿಸ್ಟ್ ಕಂಪನಿಗಳಿಗೆ ಲಾಭದಾಯಕ ಸಮಯ.

ಯುಗಾದಿ ಹಬ್ಬದ ಇನ್ನೊಂದು ಪ್ರಮುಖ ಆಚರಣೆ ಅಂದರೆ ಪಂಚಾಂಗ ಶ್ರವಣ. ಹೊಸ ವರ್ಷದಲ್ಲಿ ನಡೆಯಬಹುದಾದ ಆಗುಹೋಗುಗಳ ಬಗ್ಗೆ ಮುನ್ಸೂಚನೆ ನೀಡುವ ತಾರ್ಕಿಕ ಪ್ರಯತ್ನ ಅಂದು ನಡೆಯುತ್ತದೆ.

ಒಂದು ಬಿದಿರಿನ ಕೋಲಿಗೆ ತಾಮ್ರದ ಇಲ್ಲವೆ ಬೆಳ್ಳಿಯ ಚಿಕ್ಕ ಬಿಂದಿಗೆಯನ್ನು ಸಿಕ್ಕಿಸಿ ರೇಷ್ಮೆಯ ಬಟ್ಟೆಯಿಂದ, ಮಾವಿನ ಎಲೆ ಮತ್ತು ಹೂವುಗಳಿಂದ ಅಲಂಕರಿಸಿದ "ಗುಡಿ" ಯನ್ನು ಮನೆಯೆದುರಿನ ಕಿಟಕಿಗೆ ಕಟ್ಟುವದರಿಂದ ಆಚರಿಸುವ ಯುಗಾದಿಯನ್ನು ಮಹಾರಾಷ್ಟ್ರದಲ್ಲಿ ***"ಗುಡಿಪಾಡವಾ"*** ಎಂದು ಆಚರಿಸುತ್ತಾರೆ.

ಮನೆ ಖರೀದಿ, ಒಡವೆ–ವಸ್ತ್ರ ಖರೀದಿ, ಹೊಸ ಉದ್ಯೋಗ ಅಥವಾ ವ್ಯಾಪಾರ ಆರಂಭ ಮಾಡುವದು ಇತ್ಯಾದಿ ಕೆಲಸ ಕಾರ್ಯಗಳಿಗೆ ಯುಗಾದಿಯ ದಿನದ ಮುಹೂರ್ತ ತುಂಬಾ ಪ್ರಶಸ್ತವಾದ ದಿನ.

ಇದೇ ಮಾರ್ಚ್ ಮೂವತ್ತರ ಗುರುವಾರ ***ಶಾಲಿವಾಹನ ಶಕೆ 1928ರ ವ್ಯಯ ನಾಮ ಸಂವತ್ಸರ***ದ ಯುಗಾದಿ ಹಬ್ಬ ನಿಮ್ಮೆಲ್ಲರ ಬಾಳಿನಲ್ಲಿ ಶುಭಪ್ರದವಾಗಲಿ, ಫಲಪ್ರದವಾಗಲಿ ಎಂದು ನಾನು ನನ್ನ ಕುಟುಂಬ ವರ್ಗದವರ ಪರವಾಗಿ ಹಾರೈಸುತ್ತೇನೆ.

## ನಮ್ಮ ಭಾಷೆಗೆ ನಾವೇನು ಮಾಡಬಲ್ಲೆವು..? – ಅರುಣ ಆರ್. ಯಾದವಾಡ. ಬೆಂಗಳೂರು.

ಪ್ರತಿ ನಿತ್ಯ ನಾವು ಕನ್ನಡಿಗರು ಏನಾದರೊಂದು ಗೊಣಗುತ್ತಲೇ ಇರುತ್ತೆವೆ. 'ಇವಾ ನೋಡು, ಕನ್ನಡ ಕನ್ನಡ ಅಂತಾ ಬಡಕೊತಾನ.. ಆದರ ತನ್ನ ಮಕ್ಕಳನ್ನು ಮಾತ್ರ ಇಂಗ್ಲೀಷ ಸಾಲಿಗೆ ಸೇರಿಸ್ಯಾನ..', 'ಆ ಭಾಷಾ ಮಂದಿನ್ನ ನೋಡ್ರಿ.. ಏನ್ ಭಾಷಾ ಪ್ರೇಮ..ಏನ್ ಕಥಿ.. ..ಛೇ..ಛೇ.. ಅವರಿಗಿರುವಂಥಾ ಆತ್ಮಾಭಿಮಾನ ನಮ್ಮ ಮಂದಿಗೆಲ್ಲಿ ಬರಬೇಕ್ರಿ..'..ಇತ್ಯಾದಿ.. ಇತ್ಯಾದಿ..ನಾವು ಬರೀ ಇತರರ ಬಗ್ಗೆ ಗೊಣಗುತ್ತೆವೆಯೇ ಹೊರತು ನಾವು ನಮ್ಮ ಭಾಷೆಗೆ ಏನು ಮಾಡಿದ್ದೇವೆ..? ನಮ್ಮ ಕೊಡುಗೆ ಏನು..? ಅಂತಾ ಎಂದಿಗೂ ಯೋಚನೆ ಮಾಡಿ ನೋಡುವದೇ ಇಲ್ಲ. ನಮ್ಮ ನಮ್ಮ ಸಾಮರ್ಥ್ಯಕ್ಕೆ ಏನೂ ಸಾಧ್ಯವೋ ಅದನ್ನು ಆಗಲೇ ನಾವು ಮಾಡಿದ್ದೇವೆ..ಇನ್ನು ಏನು ಮಾಡಬೇಕು..ಎಂಬ escape ರೂಟ್‌ಗಳನ್ನೇ ಯಾವಾಗಲೂ ಹಿಡಿಯುತ್ತೇವೆ. ನಾನು ಪರಿಪೂರ್ಣ ಇದ್ದೇನೆ.. ಉಳಿದವರು ಏನೂ ಮಾಡಿಲ್ಲ ಅನ್ನು ಒಣ ಅಹಂಭಾವ ನಮ್ಮದು.

ನಾನೇನೂ ಇಲ್ಲಿ ನಿಮ್ಮ ನಿಮ್ಮ ಮಕ್ಕಳನ್ನು ಜೀವಮಾನವೀಡಿ ಕನ್ನಡ ಮಾಧ್ಯಮದಲ್ಲಿ ಓದಿಸಿ ಅವುಗಳಿಗೆ ಮುಂದೆ ನೌಕರಿ ಸಿಗದಂಗ ಮಾಡಿಸ್ರಿ ಅಂತಾ ಹೇಳತಾ ಇಲ್ಲ.. ಅಥವಾ ನೀವು ಯಾವಾಗಲೂ ಈ ಮೂರನೇ ದರ್ಜೆ ಕನ್ನಡ ಚಲನಚಿತ್ರಗಳನ್ನು ನೋಡಿರಿ ಅಂತಾನೂ ಹೇಳತಾ ಇಲ್ಲ..ಅಥವಾ ಇತರೆ ಭಾಷೆಯ ಬೋರ್ಡ್ ಅಥವ ಜನಾ ಕಂಡರೆ ಒಂದೆರಡು ಕಲ್ಲು ತುಗೊಂಡು ಎಸಿರಿ ಅಂತಾ ಮೊದಲೇ ಹೇಳತಾ ಇಲ್ಲ..ಅಲ್ಲದೇ ನೀವೇನೂ ಅನ್ಯ ಭಾಷಿಕರನ್ನ ನಿಮ್ಮ ಊರು ಬಿಟ್ಟು ಓಡಿಸಿರಿ ಅಂತಾನೂ ಹೇಳತಾ ಇಲ್ಲಾ.

ಒಬ್ಬ ಜನ ಸಾಮಾನ್ಯನಾಗಿ, ಒಬ್ಬ ಸಾಮಾನ್ಯ ಕನ್ನಡಿಗನಾಗಿ ನಮ್ಮ ಕನ್ನಡ ಭಾಷೆ ನೆಲ, ನಡೆ, ನುಡಿಗಳ ಬಗ್ಗೆ, ಈ ಸಂಸ್ಕೃತಿಯ ಬಗ್ಗೆ ನಾವಾಗಿಯೇ ನಮ್ಮ ಸ್ವಸಾಮರ್ಥ್ಯದ ಮೇಲೆ, ನಮ್ಮ ನಮ್ಮ ಇತಿಮಿತಿಗಳ ನಡುವೆಯೂ ನಾವು ಏನೇನು ಮಾಡಬಹುದು ಸ್ವಲ್ಪ ನೋಡಿ. ಇತರರ ಮೇಲೆ ಗೊಣಗುವ ಬದಲು ನಮ್ಮ ಹತ್ತಿರವೇ ಇರುವ ಅವಕಾಶಗಳ ಬಗ್ಗೆ ಗಮನ ಹರಿಸೋಣ.

1. ನೀವು ನಿಮ್ಮ ಮಗುವನ್ನು ಇಂಗ್ಲೀಷ್, ಜರ್ಮನ್, ಲ್ಯಾಟಿನ್ ಇನ್ನಾವುದೇ ಭಾಷೆಯಲ್ಲಿ ಓದಿಸಿ. ಆದರೆ ಕನಿಷ್ಟ ಅಂದರೆ ನಿಮ್ಮ ಮಕ್ಕಳಿಗೆ ಕನ್ನಡ ಓದಲು ಬರೆಯಲು ಬರುವಂತಿರಬೇಕು.ಆ ಮಗು ಮುಂದೆ ಜೀವನದಲ್ಲಿ ಒಂದು ನಾಲ್ಕಾರು ಕನ್ನಡದ ಪುಸ್ತಕಗಳನ್ನು ಪತ್ರಿಕೆಗಳನ್ನು ಓದುವಂತಾಗಬೇಕು. ಕನ್ನಡ ಸಾಹಿತ್ಯ, ನೆಲ, ನಡೆ, ನುಡಿ, ಸಂಸ್ಕೃತಿಗಳಲ್ಲಿ ನಿಮ್ಮ ಮಗುವಿಗೆ ಆಸಕ್ತಿ ಹುಟ್ಟಬೇಕು.
ವೃತ್ತಿಗಾಗಿ ಬೇರೆ ಯಾವದೇ ಭಾಷೆ ಇರಬಹುದು. ಆದರೆ ಕನ್ನಡವೇ ನಮ್ಮ ಜೀವಾಳ, ಉಸಿರು, ಹಸಿರು, ಸಂಸ್ಕೃತಿ ಎಂಬ ಅರಿವಳಿಕೆ ನಿಮ್ಮ ಮಗುವಿನಲ್ಲಿ ಮೂಡಬೇಕು. ಅದನ್ನು ನಾವು ಮೂಡಿಸಬೇಕು. ಒಬ್ಬ ಮಗುವಿನ ತಂದೆ–ತಾಯಿಗಳಿಗೆ ಇದೊಂದು ಕಷ್ಟದ ಕೆಲಸವಾಗಕೂಡದು.ಅಂಥಾ ಒಂದು ವ್ಯವಸ್ಥೆಯೊಂದನ್ನು ಮಾಡಿಕೊಳ್ಳಿ.

2. ಕನ್ನಡ ಭಾಷೆಯ ಪುಸ್ತಕ, ಪತ್ರಿಕೆಗಳಿಗಾಗಿ ಪ್ರತಿ ತಿಂಗಳು ನಿಮ್ಮ ಸಂಬಳದಲ್ಲಿ ಸ್ವಲ್ಪ ಭಾಗ ಅಂದರೆ 1% ರಷ್ಟಾದರೂ ಮೀಸಲಿಡಿ. ಮನೆಯಲ್ಲಿ ಸುಧಾ, ತರಂಗ, ಓ ಮನಸೇ, ತುಷಾರ, ಚಂದಮಾಮ, ಬೊಂಬೆಮನೆ, ಬಾಲಮಿತ್ರ ಮುಂತಾದ ಯಾವದಾದರೂ ಕಥಾನಕ ಹಾಗೂ ವೈಚಾರಿಕ ಪತ್ರಿಕೆಗಳನ್ನು ಓದುವ ಹವ್ಯಾಸ ಇಟ್ಟುಕೊಳ್ಳಿ. ಅಲ್ಲದೆ ಅಂಥ ಪತ್ರಿಕೆಗಳನ್ನು ಮನೆಗೆ ತಂದು ಎಲ್ಲರೂ ಓದುವ ಹಾಗೆ ಮಾಡಿ. ನಿಮ್ಮ ನಿಮ್ಮ ಮನೆಯಲ್ಲಿ ಕನ್ನಡಕ್ಕೊಂದು ಹೆಮ್ಮೆಯ ಸ್ಥಾನ, ಮಾತೃ ಸ್ಥಾನ ಮಾನ ಕಲ್ಪಿಸಿ. ಕನ್ನಡವೆನ್ನುವದು ನಮ್ಮ ಮನೆ ಮನಗಳಲ್ಲಿ ಅತ್ಯಂತ ಗೌರವಯುತ ಉಚ್ಚ ಸ್ಥಾನದಲ್ಲಿರಲಿ. ನಮ್ಮ ಭಾಷೆಯನ್ನು, ನಾವೇ ಗೌರವಿಸದಿದ್ದರೆ ಬೇರೆ ಯಾರು ಗೌರವಿಸಿಯಾರು..?

3.ಕನ್ನಡದಲ್ಲಿ ಸಾಕಷ್ಟು ಒಳ್ಳೆಯ ಐತಿಹಾಸಿಕ, ಪೌರಾಣಿಕ, ಸಾಮಾಜಿಕ, ವೈಚಾರಿಕ ಕೃತಿಗಳು ಬಂದಿವೆ. ನಿಮಗೆ ಬರುತ್ತಿರುವ ಸಂಬಳದಲ್ಲೇ ಸಾಧ್ಯವಾದಷ್ಟು ಕನ್ನಡ ಪುಸ್ತಕಗಳು, ಕ್ಯಾಸೆಟ್‌ಗಳು, ಸಿಡಿಗಳಿಗಾಗಿ ಸ್ವಲ್ಪ ಹಣ ಖರ್ಚು ಮಾಡಿ. ನೆನಪಿರಲಿ ಇಂಥಾ ಹಣ ಯಾವತ್ತಿಗೂ ವ್ಯರ್ಥವಲ್ಲ.ಇವತ್ತು ನಾವು ಏನು ಆಗಿದ್ದೇವೆಯೊ ಅದೆಲ್ಲಾ ಈ ಕನ್ನಡದ ನೆಲದಿಂದ ಈ

ಸಂಸ್ಕೃತಿಯಿಂದ, ಇದು ಬಿಂಬಿಸುವ ಮೌಲ್ಯಗಳಿಂದ ಹಾಗೂ ನಾವು ಹುಟ್ಟಿ ಬೆಳೆದ ಪರಿಸರದಿಂದ ಎಂಬುದನ್ನು ಮರೆಯಬೇಡಿ.ಈ ಮೌಲ್ಯಗಳ ಕೆಲವು ಭಾಗವಾದರೂ ನಿಮ್ಮ ಮಕ್ಕಳಿಗೆ ಮುಂದಿನ ಪೀಳಿಗೆಗೆ ಹರಿಯಲಿ. ಆ ದಿಸೆಯಲ್ಲಿ ನಿಮ್ಮಿಂದ ಇಂಥಾ ಒಂದು ಚಿಕ್ಕ ಸೇವೆ ಸಲ್ಲಲಿ.

4. ಕನ್ನಡದಲ್ಲಿ ಕೆಟ್ಟ ಸಿನೆಮಾಗಳೂ ಇವೆ.. ಒಳ್ಳೆಯ ಸಿನೆಮಾಗಳೂ ಇವೆ. ಇತ್ತೀಚೆಗೆ ಒಳ್ಳೊಳ್ಳೆ ನಾಟಕಗಳೂ ಬರುತ್ತಿವೆ. (ಪ್ರೇಕ್ಷಕರನ್ನು ಮತ್ತೆ ಮತ್ತೆ ರಂಗಕ್ಕೆ ಬರುವಂತೆ ಮಾಡುವಲ್ಲಿ ಯಶವಂತ್ ಸರದೇಶಪಾಂಡೆ ಅವರ ನಾಟಕ ತಂಡ ಸಾಕಷ್ಟು ಉತ್ತಮ ಸಾಧನೆ ಮಾಡಿದೆ.) ಸಾಧ್ಯವಾದರೆ ತಿಂಗಳಿಗೊಮ್ಮೆ ಕನಿಷ್ಟ ಅಂದರೆ ಮೂರು ತಿಂಗಳಿಗೊಮ್ಮೆ ಒಂದು ಒಳ್ಳೆಯ ಕನ್ನಡ ಸಿನೆಮಾನ್ನೋ, ನಾಟಕವನ್ನೋ ಕುಟುಂಬ ಸಮೇತರಾಗಿ ನೋಡಿ ಬನ್ನಿ. ಇದಕ್ಕಾಗಿ ನೀವು ನಿಮ್ಮ ನಿಯಮಿತ ವೀಕೆಂಡ್ ವಿಸಿಟ್ಸ್, ಫ಼ಾಸ್ಟ್ ಫ಼ೂಡ್ ಇಟಿಂಗೂ, ಬಾಲಿವುಡ್ ಮೂವೀಸ್ ಇತ್ಯಾದಿಗಳನ್ನು ಬಿಡಬೇಕಾಗಿಲ್ಲ. ಆದರೆ Once in a while, for a changeಗೆ ಇರಲಿ ಅಂತಾ ಇಂಥಾ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಿ.

5. ಅಗತ್ಯವಿಲ್ಲದಿದ್ದಲ್ಲಿ ಆದಷ್ಟೂ ಕನ್ನಡದಲ್ಲೇ ಇ–ಮೇಲ್ ಹಾಗೂ ಪತ್ರಗಳನ್ನು ಬರೆಯುವ ರೂಢಿ ಇಟ್ಟುಕೊಳ್ಳಿ. ಇದರಿಂದ ಕನ್ನಡದಲ್ಲಿ ಆಸಕ್ತಿ ಇರುವ ಇತರರಿಗೂ ಪ್ರೋತ್ಸಾಹ ನೀಡಿದಂತಾಗುತ್ತದೆ. ಯಾರಾದರೂ ಕನ್ನಡಲ್ಲಿ ಅರ್ಜಿ , ಪತ್ರ ಬರೆಯಬೇಕೆಂದಿದ್ದರೆ ಅವರಿಗೆ ಸಹಾಯ ಮಾಡಿ.

6. ನಿಮ್ಮ ಅನ್ಯ ಭಾಷಿಕ ಮಿತ್ರರೊಂದಿಗೆ ಆಗಾಗ ಕನ್ನಡ ಭಾಷೆಯ ಬಗ್ಗೆ ಚರ್ಚಿಸಿ. ಅವರ ಭಾಷೆಯ ಬಗ್ಗೆಯೂ ಮಾತನಾಡಲು ಪ್ರೋತ್ಸಾಹಿಸಿ. ಒಂದು ಆರೋಗ್ಯಕರ ಚರ್ಚೆಯಲ್ಲಿ ತೊಡಗಿ.

7. ನಿಮ್ಮ ಮನೆ ನೆರೆಹೊರೆಯವರು, ಅಂಗಡಿಯವರು, ಆಟೊದವರು ಇತ್ಯಾದಿಯವರ ಜೊತೆ ಆದಷ್ಟು ಕನ್ನಡದಲ್ಲೇ ಮಾತನಾಡಿ.

8. ಅಪರಿಚಿತ ಸ್ಥಳವೊಂದರಲ್ಲಿ ಕನ್ನಡಿಗರಿಗೆ ಸಹಾಯ ಬೇಕಿದ್ದರೆ ಅದಕ್ಕೆ ಮೊದಲು ಮುಂದಾಗಿ. ಇಂದು ಬೆಂಗಳೂರಿನ ಪ್ರತಿಷ್ಟಿತ ಮಣಿಪಾಲ್ ಆಸ್ಪತ್ರೆಯಲ್ಲಿ ಪಶ್ಚಿಮ ಬಂಗಾಳದ ಜನರಿಗಾಗಿಯೇ ಅಲ್ಲಿನ ಜನ ಒಂದು ಸಹಾಯವಾಣಿಯನ್ನು (ಹೆಲ್ಪ್ ಡೆಸ್ಕ್) ಮಾಡಿಕೊಂಡಿದ್ದಾರೆ. ಇಂಥಾ ವ್ಯವಸ್ಥೆ ಬೇರಾವ ರಾಜ್ಯದಲ್ಲೂ ಕನ್ನಡಿಗರಿಗಾಗಿ ಇಲ್ಲ. ನೀವು ಸಹಾ ಕರ್ನಾಟಕ ಬಿಟ್ಟು ಬೇರೆ ಸ್ಥಳದಲ್ಲಿ ವಾಸವಾಗಿದ್ದರೆ, ದಯವಿಟ್ಟು ನಿಮ್ಮ ಕನ್ನಡ ಮಿತ್ರರಿಗೆ ಸಹಾಯ ಮಾಡಿ. ಅಲ್ಲಿ ಸಾಧ್ಯವಾದರೆ ಒಂದು ಚಿಕ್ಕ ಕನ್ನಡ ಸಂಘವನ್ನು ಮಾಡಿಕೊಳ್ಳಿ. ಕಾಲ ಕಾಲಕ್ಕೆ ಭೆಟ್ಟಿಯಾಗಿ ನಿಮ್ಮ ವಿಚಾರಗಳನ್ನು ಹಂಚಿಕೊಳ್ಳಿ.

9. ನಿಮಗೆ ಇಂಟರ್ನೆಟ್‌ನಲ್ಲಿ ಯಾವುದೋ ಒಂದು ಮಾಹಿತಿ ನೋಡುತ್ತಿರಿ. ಅದು ದೂರದ ಊರಿನಲ್ಲಿ ಕೃಷಿ ಮಾಡಿಕೊಂಡಿರುವ ನಿಮ್ಮ ತಾತನಿಗೊ, ಚಿಕ್ಕಪ್ಪನಿಗೊ ಅಥವಾ ನಿಮ್ಮ ತಂದೆಗೊ ಭಾರೀ ಉಪಯುಕ್ತ ಮಾಹಿತಿ ಆಗಿರಬಹುದು. ಅಂಥಾದ್ದನ್ನು ಸ್ವಲ್ಪ ಸಮಯ ಬಿಡುವು ಮಾಡಿಕೊಂಡು , ಕನ್ನಡಕ್ಕೆ ಭಾಷಾಂತರ ಮಾಡಿ, ಅವರಿಗೆ ಕಳುಹಿಸಿ ನೋಡಿ. ಅವರಿಗಾಗುವ ಆನಂದ ಅಷ್ಟಿಷ್ಟಲ್ಲ.

ಹೀಗೆ ಕನ್ನಡ ಭಾಷೆಯ ಬಗ್ಗೆ ಆಗಾಗ ಚಿಂತನೆ ಮಾಡಿ. ನಿಮಗೆ ಗೊತ್ತಿಲ್ಲದಂತೆ ಹತ್ತು ಹಲವಾರು ದಾರಿಗಳು ತೋರುತ್ತವೆ. ಮನಸ್ಸಿದ್ದಲ್ಲಿ ಖಂಡಿತ ಮಾರ್ಗವಿದೆ. ಎಲ್ಲರಲ್ಲೂ ಶಕ್ತಿ ಇದೆ, ಎಲ್ಲರಲ್ಲೂ ಸಮಯ ಇದೆ. ಬೇಕಿರುವದು ಈ ಕನ್ನಡ ನಾಡಿನ ಋಣ ತೀರಿಸುವೆನೆಂಬ ವಿಚಾರ, ಹಂಬಲ. ಇದಕ್ಕೆ ಬೇರೆ ಯಾವ ಸಹಾಯವೂ ಬೇಕಿಲ್ಲ.

ಅಂಥಾ ಒಂದು ವಿಚಾರ ನಿಮ್ಮಲ್ಲಿ ಮೂಡಿ ಬರಲಿ, ಈ ನಾಡಿಗೆ ನಿಮ್ಮಿಂದ ಒಂದು ಅಲ್ಪ ಸೇವೆ ಆಗಲಿ.

# 'ಮನಸೆಲ್ಲಾ ಅವಳೇ..' ಟಿವಿ ಮೆಗಾ ಧಾರಾವಾಹಿ

ನಲುಮೆಯ ಮಿತ್ರರೆ,

ಇತ್ತೀಚೆಗೆ ನಿಮಗೆಲ್ಲ ತಿಳಿದಂತೆ ನಾನು ಹಾಗೂ ನನ್ನ ಆತ್ಮೀಯ ಸ್ನೇಹಿತ ವಿಜಯ್‌ಕುಮಾರ ಅವರು ಸೇರಿ ಕನ್ನಡ ಕಲಾಭಿಮಾನಿಗಳಿಗೆ ಕೆಲವು ಒಳ್ಳೆ ಗುಣ ಮಟ್ಟದ ಮನರಂಜನಾ ಕಾರ್ಯಕ್ರಮಗಳನ್ನು ನೀಡುವ ಉದ್ದೇಶದಿಂದ "ವಿಜಯಾನಂದ್ ಎಂಟರ್ಟೇನರ್ಸ್' ಎಂಬ ಹೊಸ ಕಂಪನಿಯನ್ನು ತೆರೆದಿದ್ದೇವೆ. ನಮ್ಮ ಚೊಚ್ಚಿಲ ಕಾಣಿಕೆ 'ಮನಸೆಲ್ಲಾ ಅವಳೇ..' ಎಂಬ ಟಿವಿ ಮೆಗಾ ಸಿರಿಯಲ್ ಇದೀಗ ಆರಂಭವಾಗಿದ್ದು , ಮೊದಲ ಹಂತದ ಚಿತ್ರೀಕರಣ ಭರದಿಂದ ಸಾಗಿದೆ. ಬರುವ ಏಪ್ರಿಲ್‌ನಲ್ಲಿ ಈ ಸಿರಿಯಲ್‌ನ್ನು ಕಿರು ತೆರೆಗೆ ತರುವ ಯೋಜನೆ ಇದೆ.

ಉಳಿದ ವಿವರಗಳು ಈ ರೀತಿ ಇವೆ.

| | |
|---|---|
| ಧಾರಾವಾಹಿ ಹೆಸರು | : **ಮನಸೆಲ್ಲಾ ಅವಳೇ** |
| ಕಥೆ | : ಖ್ಯಾತ ತೆಲುಗು ಲೇಖಕ ಮಲ್ಲಾದಿ ವೆಂಕಟಕೃಷ್ಣಮೂರ್ತಿ ಅವರ ಕಾದಂಬರಿ 'ಯಮಪಾಶ' ಆಧಾರಿತ |
| ಸಂಗೀತ–ಸಾಹಿತ್ಯ | : ಹಂಸಲೇಖ |
| ಸಂಭಾಷಣೆ | : ಕುಣಿಗಲ್ ನಾಗಭೂಷಣ, ವಿ.ಆನಂದ್ |
| ತಾರಾಗಣ | : ಡಾ. ಸಂಜಯ್ ಶಾಂತಾರಾಮ್, ಭವ್ಯಶ್ರೀ ರೈ, ಹರೀಶ್ ಪಂಚಮುಖಿ ಮತ್ತಿತರರು |
| ಸಂಕಲನ–ಗ್ರಾಫಿಕ್ಸ್ | : ಆನಂದ ಯಾದವಾಡ |
| ನಿರ್ದೇಶನ | : ವಿಜಯಕುಮಾರ್ |

ನಮ್ಮ ಈ ಧಾರಾವಾಹಿಗೆ, ಈ ಚೊಚ್ಚಿಲು ಪ್ರಯತ್ನಕ್ಕೆ ನಿಮ್ಮೆಲ್ಲರ ಆಶೀರ್ವಾದ, ಪ್ರೋತ್ಸಾಹ ನಿರಂತರವಾಗಿರಲಿ.

ನಿಮ್ಮ,

**ಆನಂದ ಯಾದವಾಡ, ವಿಜಯಕುಮಾರ್**

## 'ಮನಸೆಲ್ಲಾ ಅವಳೇ..' ಛಾಯಾಂಕಣ :



← ಭವ್ಯಶ್ರೀ ರೈ

ಹರೀಶ್ ಪಂಚಮುಖಿ →





← ಸಂಜಯ್ ಶಾಂತಾರಾಂ ಹಾಗೂ ಹರೀಶ್ ಪಂಚಮುಖಿ

## ಊಟವಾದ ಮೇಲೆ ಇವನ್ನಂತೂ ಖಂಡಿತ ಮಾಡಬೇಡಿ.. – ಪುಂಡಲೀಕ ಡಿ. ಸತ್ಯನಾಯಕ. ಸೈಪ್ರಸ್



ಬಿಜಾಪುರ ಜಿಲ್ಲೆಯಲ್ಲಿ ಹುಟ್ಟಿ ಬೆಳೆದು, ಸೈನಿಕ ಸ್ಕೂಲಿನಲ್ಲಿ ಹೈಸ್ಕೂಲ್, ಧಾರವಾಡದಲ್ಲಿ ಪಿಯುಸಿ, ಬಾಗಲಕೋಟೆಯಲ್ಲಿ ಬಿ.ಇ. ವಿದ್ಯಾಭಾಸ ಮುಗಿಸಿ ಇದೀಗ ಸೈಪ್ರಸ್ ದೇಶದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿರುವ ಪುಂಡಲೀಕಗೆ, ಬರೆಯುವದಕ್ಕಿಂತಲೂ ಮಾತಿನಲ್ಲಿ, ಪ್ರಶ್ನೆ ಕೇಳುವದರಲ್ಲಿ, ಒಂದು ವಿಷಯದ ಬಗ್ಗೆ ಸಾಕಷ್ಟು ಮಾಹಿತಿ ಸಂಗ್ರಹಿಸುವದರಲ್ಲಿ ಜಾಸ್ತಿ ಆಸಕ್ತಿ. ಒಂದು ಕಾಲದಲ್ಲಿ ನಮ್ಮ ಎಲ್ಲಾ ಗೆಳೆಯರು ಪುಂಡಲೀಕರನ್ನು 'ವರ್ಲ್ಡ್ ದಿಸ್ ವೀಕ್'ನ 'ಪ್ರಣಯ್ ರಾಯ್' ಎಂದು ಕರೆಯುತ್ತಿದ್ದೆವು.

1. ಧೂಮಪಾನ ಮಾಡಬೇಡಿ. ಊಟದ ನಂತರ ಸೇದುವ ಒಂದು ಸಿಗರೇಟು ಹತ್ತು ಸಿಗರೇಟಿಗೆ ಸಮ ಹಾಗೂ ಹಾಗೆ ಮಾಡಿದರೆ ಕ್ಯಾನ್ಸರ್ ಆಗುವ ಸಾಧ್ಯತೆ ಜಾಸ್ತಿ.
2. ಊಟದ ನಂತರ ಕೂಡಲೇ ಹಣ್ಣುಗಳನ್ನು ತಿನ್ನಬೇಡಿ. ಇದರಿಂದ ಗ್ಯಾಸ್ ಟ್ರಬಲ್ ಬರುವ ಸಾಧ್ಯತೆ ಇರುತ್ತದೆ. ಸಾಮಾನ್ಯವಾಗಿ ಊಟಕ್ಕೆ 1–2 ಘಂಟೆ ಮೊದಲು ಅಥವಾ ಅರ್ಧ ಘಂಟೆ ನಂತರ ಹಣ್ಣುಗಳನ್ನು ತಿನ್ನುವದು ಒಳ್ಳೆಯದು.
3. ಊಟದ ನಂತರ ಚಹ ಕುಡಿಯಬೇಡಿ. ಏಕೆಂದರೆ ಚಹದಲ್ಲಿರುವ ಅಸಿಡಿಕ್ ಗುಣವು, ನಮ್ಮ ಆಹಾರದಲ್ಲಿರುವ ಪ್ರೋಟಿನ್‌ಗಳನ್ನು ಗಟ್ಟಿಯಾಗಿಸುವದರಿಂದ , ಜೀರ್ಣ ಕ್ರಿಯೆಗೆ ತೊಂದರೆಯಾಗುತ್ತದೆ.



4. ನಿಮ್ಮ ಬೆಲ್ಟನ್ನು ಸಡಿಲಿಸಬೇಡಿ. ಇದರಿಂದ ನಿಮ್ಮ ಕರುಳು ಸುತ್ತಿಕೊಳ್ಳುವದು ಅಥವಾ ಬ್ಲಾಕ್ ಆಗುವ ಸಾಧ್ಯತೆಗಳು ಇರುತ್ತವೆ.
5. ಸ್ನಾನವನ್ನಂತೂ ಮಾಡಲೇಬೇಡಿ. ಸ್ನಾನ ಮಾಡುವದರಿಂದ ನಿಮ್ಮ ಕೈ ಕಾಲುಗಳು ಹಾಗೂ ದೇಹದ ಉಳಿದ ಭಾಗಗಳಿಗೆ ರಕ್ತ ಪರಿಚಲನೆ ಜಾಸ್ತಿಯಾಗುವದರಿಂದ , ಹೊಟ್ಟೆಯ ಸುತ್ತ ಮುತ್ತ ರಕ್ತ ಪರಿಚಲನೆ ಕಡಿಮೆ ಆಗಿ ಜೀರ್ಣ ಕ್ರಿಯೆಯ ಮೇಲೆ ಪರಿಣಾಮವಾಗುವ ಸಾಧ್ಯತೆ ಇರುತ್ತದೆ.
6. ವಾಕಿಂಗ್ ಹೋಗಬೇಡಿ. ಇದರಿಂದ ನಿಮ್ಮ ದೇಹಕ್ಕೆ ಆಹಾರದಲ್ಲಿನ ಪೌಷ್ಟಿಕಾಂಶಗಳನ್ನು ಹೀರಿಕೊಳ್ಳುವದು ಕಷ್ಟವಾಗುತ್ತದೆ.
7. ನಿದ್ರೆ ಮಾಡಬೇಡಿ . ಇದು ಜೀರ್ಣ ಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ ಹಾಗೂ ಗ್ಯಾಸ್ ಟ್ರಬಲ್ ಮತ್ತು ಕರುಳಿನ ಇನ್‌ಫೆಕ್ಷನ್ ಆಗುವ ಸಾಧ್ಯತೆ ಇರುತ್ತದೆ.



**ಆರೋಗ್ಯವೇ ಭಾಗ್ಯ.. ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿದೆ. ಅದರ ಬಗ್ಗೆ ಕೊಂಚ ನಿಗಾ ಇರಲಿ.**

(ಆಧಾರ)

## ನಗೆಹೂವಿನ ಬಳ್ಳಿ – ಶ್ರೀಮತಿ. ಶುಭಶ್ರೀ ಜಿ. ಬೆಳಂದೂರ , ಯು.ಎಸ್.ಎ

ನಲಿಯುತಿಹುದು ಬೆಳೆಯುತಿಹುದು ಒಂದು ಲತಾಪಲ್ಲವ
ಮನೆಮನದೊಳು ವ್ಯಾಪಿಸುತ್ತ ತನ್ನಿರುವಿನ ಹರವು

ತನುವಿನಿರುವಿಕೆಯ ಮರೆಸುತಿಹುದು
ಮನದ ಮಾಯಾಲೋಕ ತೆರೆಸುತಿಹುದು
ಚಿದಂಬರವನೆ ಸೂರೆಗೈದು
ಹಬ್ಬಿ ತಬ್ಬಿ ಮೆರೆಯುತಿಹುದು!

ಚೆಂದುಟಿಯಲಿ ಅರಳುತಿಹುದು ನಗೆ ಬುಗ್ಗೆಯ ಮೊಗ್ಗು
ಮೇರೆ ಮೀರಿ ಕುಣಿಯುತಿಹುದು ನನ್ನೊಳಗಿನ ಹಿಗ್ಗು
ಸುರಿಯುತಿಹುದು ಸಿಹಿ ಜೇನು ನಗೆಯ ಹೂವಿನಲ್ಲಿ
ಹೇಳಲೆಂತು ನನ್ನ ಸುಖವ ಯಾವ ಮಾತಿನಲ್ಲಿ!

ಯಾವ ಪೂರ್ವ ಪುಣ್ಯಕಾಗಿ ದೇವನಿತ್ತ ಫಲವಿದು?
ಬಾಳಪಯಣದಲ್ಲಿ ಬೆಸೆದ ದೈವಿಕ ಒಲವಿದು
ಕ್ಷಣ ಕ್ಷಣವನು ಮಾಡುತಿಹುದು ನವ್ಯ ಭವ್ಯ ಪಾವನ
ಜೀವಕೆಂದು ಇರಲಿ ಇದುವೆ ನಿತ್ಯ ಸತ್ಯ ಚಿರಂತನ



## ಅಂತರ್ಮುಖಿಗಳಾಗಿ

**– ಪ್ರಶಾಂತ್ ಶಿವಶಂಕರ್, ಬೆಂಗಳೂರು**



ಬೆಂಗಳೂರಿನ ಹೆಸರಾಂತ ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿಯಲ್ಲಿಯೊಂದರಲ್ಲಿ ಮಾನವ ಸಂಪನ್ಮೂಲ ವಿಭಾಗದಲ್ಲಿ ಉದ್ಯೋಗಿಯಾಗಿರುವ ಪ್ರಶಾಂತ್, ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರಿನಲ್ಲಿ. ಸಾಕಷ್ಟು ಕನ್ನಡ ಪುಸ್ತಕಗಳನ್ನು ಓದಿರುವ ಇವರು ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಗಳಿಗೆ ಸಂಬಂಧಿಸಿದ ಚಟುವಟಿಗೆಳಲ್ಲಿ ಸದಾ ನಿರತರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ನಿರರ್ಗಳವಾಗಿ ಮಾತನಾಡಬಲ್ಲರು. ಇಂಥಾ ಒಂದು ಸಂವಾದದಲ್ಲೇ ಇವರು ನಮ್ಮ ಮಿತ್ರ ಅರುಣ ಅವರಿಗೆ ಪರಿಚಯವಾದದ್ದು. ಟಿಪಿಬಳಗ ನಡೆಸುತ್ತಿರುವ ಚಟುವಟಿಕೆಗಳನ್ನು ಮೆಚ್ಚಿರುವ ಪ್ರಶಾಂತ್, ಅದಕ್ಕಾಗಿಯೇ ಇಲ್ಲಿ ಒಂದೆರಡು ಕವನಗಳನ್ನು ಬರೆದು ಕಳಿಸಿದ್ದಾರೆ. ಓದಿ ನಿಮ್ಮ ಅಭಿಪ್ರಾಯ ತಿಳಿಸಿ.

ಆವರಿಸಿದೆ ನಿನ್ನ ಅತಿರೇಕದ ಸಹನೆಯ ಛಾಯೆ
ಸಹಿಸುವುದದಾರೂ ಹೇಗೆ ನೀನು ತಾಯೇ
ಅಂದಿನಿಂದ ಇಂದಿನವರೆಗೂ ದಾಸ್ಯವೇ ಸಿಂಹಾಸನ
ಆಳುತ್ತಿದೆ ಇಲ್ಲಿ ಅಜ್ಞಾನದ ಮಾಯೆ

ಜಾತಿ ಧರ್ಮಗಳೆ ನಿನ್ನ ಮಕ್ಕಳ ಪೂರ್ವಾರ್ಜಿತ ಸ್ವತ್ತು
ಪರಕೀಯರ ಮಸಲತ್ತಿಗೆ ಇಲ್ಲಿ ಸಕಲ ಸವಲತ್ತು
ಬಂದವರೆಲ್ಲ ದೋಚಿರುವುದು ನಮಗೆಲ್ಲ ಗೊತ್ತು
ಆದರೂ ಅಧಿಕಾರದ ಮತ್ತು ಏನೀ ನಿರ್ಧಾರಗಳ ಗತ್ತು

ಬುದ್ಧ ಬಸವ ಗಾಂಧಿ ಬಂದ ಸುವಿಜಯದ ಸೂನೆ
ಮೌಢ್ಯತೆಯ ಮರುಭೂಮಿಗೆ ಇವರೆಲ್ಲ ಎಷ್ಟು ತಾನೆ
ಶೋಷಣೆ ಅಸ್ಪೃಶ್ಯತೆ ಇಲ್ಲಿ ಕೊಯ್ಯದ ತೆನೆ
ಹಸಿರಾಗೇ ಇದೆ ಒಣಗಿಲ್ಲ ಎಂದಿಗೆ ಕೊನೆ

## ಸ್ವರ್ಗ ಬೇಕೋ, ಏನ್ ನರಕ ಬೇಕೋ? – ಪ್ರೊ. ಆರ್. ಪಿ. ಪುನಗಿನ, ಬೆಂಗಳೂರು

ನಮ್ಮ ಊರು ಧಾರವಾಡ ಜಿಲ್ಲೆಯ ಒಂದು ಚಿಕ್ಕ ಹಳ್ಳಿ. ಸೇತುರಾಮ ನಮ್ಮ ಕಣ್ಣ ಮುಂದೇನೇ ಬೆಳೆದ ಹುಡುಗ. ಅವನಿಗೆ ಚಿಕ್ಕಂದಿನಿಂದಲೂ ವ್ಯಾಪಾರ ಮಾಡೋ ಹುಚ್ಚು. ನಮ್ಮ ಮಕ್ಕಳ ಜೊತೆ ಆಡೂವಾಗ ಅಂವ ತಲಿ ಮ್ಯಾಲೆ ಒಂದು ಬುಟ್ಟಿ ಇಟಗೊಂದು 'ಹಣ್ಣ ಬೇಕೇನ್ರೆವ್ವೂs ಹಣ್ಣು' ಅಂತ ಆಡೋದನ್ನ ನಾವು ಭಾಳ ಸಲ ನೋಡಿದ್ವಿ. ಆಡತ ಆಡತ ನಮ್ಮ ಹತ್ತರೂನೂ ಬಂದು 'ಅಜ್ಜಿ ಅಜ್ಜಿ ಹಣ್ಣ ಬೇಕೇನು? ಪ್ಯಾರಲ, ಮಾವು, ನೀರಲ ಎಲ್ಲ ಅದಾವು. ಅಜ್ಜಿ ಬೇಕಾದರs ಒಂದು ನೀರಲ ಹಣ್ಣು ತಿಂದರ ನೋಡಜ್ಜಿ, ಸ್ಯಾಂಪಲ್' ಅಂತಿದ್ದ. ಮುಂದ ಇಂವ ಒಳ್ಳೆಯ ವ್ಯಾಪಾರಸ್ಥ ಆಗತಾನಾ ಅಂತ ಆಗಲೇ ನಮಗ ಅನಿಸಿತ್ತು. ಈಗ ಸೇತು ಒಬ್ಬ ದೊಡ್ಡ ಸೇಲ್ಸಮನ್. ಅಂತರ್ ರಾಷ್ಟ್ರೀಯ ಕಂಪನಿಯೊಳಗ ಕೆಲಸ ಮಾಡತಾನ. ಕೈತುಂಬ ಪಗಾರ ಐತಿ. ವರ್ಷ ವರ್ಷ ಸಾಕಷ್ಟು ಬೋನಸ್ ಬರತೈತಿ. ಛಂದನ ಹೇಣ್ತಿ ಅದಾಳ. ದೊಡ್ಡ ಮನಿ ಕಟ್ಟ್ಯಾನ. ಆದರೂನು ಸೇತುಗ ತೃಪ್ತಿ ಅನ್ನೋದಿಲ್ಲ. ಆಶಾ ಭಾಳ ಐತಿ. ಖೋಡಿ, ಇನ್ನೂ ಬೇಕ ಬೇಕ ಅಂತೈತಿ. ಅವನ ಹೇಣ್ತಿ ಸುಮಿತ್ರ ಉರಿಯೋದ್ರೊಳಗ ತುಪ್ಪ ಉಗ್ಗಾಕಿ. ನನಗ ನತ್ತ ಬೇಕ್ರಿ, ನನಗ ಒಂಕಿ ಬೇಕ್ರಿ. ಅದು ಇಲ್ಲ, ಇದು ಇಲ್ಲ ಅಂತs ಮನಿಗೆ ಬಂದಕೂಡ್ಲೆ ಸೇತುನ ತಲಿ ತಿನ್ನಾಕಿ.

ಒಂದು ದಿನ ಸೇತು ಬ್ಯಾಸರಾಗಿ ಮನಿಗೆ ಬಂದಿದ್ದನಂತ. ಗಂಡಗ ಏನಾಗೇತಿ? ಯಾಕs ಸಪ್ಪ ಅದಿರೆಲ್ಲ. ಏನ್ ನಡೀತು ಅಂತ ಕೇಳೋದು ಬಿಟ್ಟು, ಸುಮ್ಮಿ ಯಥಾ ಪ್ರಕಾರ ತನ್ನ ಪುರಾಣ ಚಾಲೂ ಮಾಡಿದ್ಲು. 'ಇವತ್ತs ಮಾಲಿನಿ ಮನಿಗೆ ಬಂದಿದ್ಲು. ಅಕಿ ಕೊಳ್ಳಗಿನ ನೆಕ್‌ಲೇಸ ನೋಡಬೇಕಿತ್ತ ನೀವು, ಏನ್ ಛಂದ ಇತ್ತ ಅಂತೀರಿ' ಅಂತ ಇನ್ನೂ ಮುಂದ ಹೇಳಾಕಿದ್ಲು. 'ಸುಮ್ಮೀ ಸ್ವಲ್ಪ ಸುಮ್ಮನಿರತೀಯಾ. ನನಗ ಯಾಕ ಭಾಳ ಸುಸ್ತಾಗೇತಿ. ' ಅಂತ ಇಬ್ಬರೂ ಗಡಿಬಿಡೀಲೆ ಊಟ ಮಾಡಿ ಮಲಕೊಂಡ್ರು. ಸೇತುಗ ಇನ್ನೂ ಜಂಪ ಹತ್ತಿದ್ದಿಲ್ಲ. ಯಾಕ ಎದಿ ನೋವು ಬಂದಹಂಗ ಅನಿಸ್ತು. ಮೆತ್ತನ ಗಾದಿ ಮ್ಯಾಲೆ ಇದ್ದ ಕೈನ ಎದಿಮ್ಯಾಲೆ ಇಟಗೊಂಡ. ಢವ ಢವ ಅನ್ನೋದು ಹೆಚ್ಚಾಗಿತ್ತು. ಸ್ವಲ್ಪ ಅಂಜಿಕ್ಯಾದಹಂಗಾತು. ಏನಾಗಾಕ ಹತ್ತೇತಿ ಅಂತ ತಿಳಕೊಳ್ಳೋದರೊಳಗ ಕಣ್ಣ ಬಿಟ್ಟು ನೋಡತಾನಾ. ಎದುರಿಗೆ ಭರಾಟಲೆ ಬೆಳದಿದ್ದು ಒಂದು ಕೋಣ ನಿಂತೈತಿ. ಅದರ ಮ್ಯಾಲೆ ವೀರಪ್ಪನ್‌ನಕಿಂತ ಹುಲುಸಾಗಿ ಮೀಸಿ ಇಟಗೊಂಡು ಯಮರಾಜ ಕುಂತಾನು. ಕೈಯ್ಯಾಗ ಯಮಪಾಶ ಹಿಡಕೊಂಡಾನು. ಭರಾ ಭರ್ರ ಅಂತ ಬೀಸಾಕ ಹತ್ಯಾನು. ನೋಡ ನೋಡದರೊಳಗ ಯಮರಾಜ ಪಾಶ ಬೀಸಿದ. ಸೇತುನ ಕೊಳ್ಳಾಗ ಬಂದ ಬಿತ್ತು.

ಸೇತು 'ಯಾಕ ಯಾಕ ಯಮರಾಜ? ನನ್ನ ಕೊಳ್ಳಗ ಯಾಕ ಪಾಶ ಒಗದಿ' ಅನ್ನ ಅನ್ನೋದ್ರೊಳಗ ಕೋಣ ಠಣ್ ಅಂತ ಜಿಗಿತ ನೋಡ್ರಿ. ಒಂದ ಜಿಗಿತಕ್ಕ ಸೇತು ಆಕಾಶದಾಗ ಜೋತಾಡಾಕ ಹತ್ತಿದ್ದ. ಸತ್ಯವಾನ ಸಾವಿತ್ರಿ ಹಂಗ ಹಿಂದ ಏನರ ಸುಮ್ಮಿ ಬರಾಕ ಹತ್ಯಾಳನ ಅಂತ ಕೆಳಗ ನೋಡತಾನು. ಸುಮ್ಮೀನೂ ಇಲ್ಲ, ಗುಮ್ಮೀನೂ ಇಲ್ಲ. ಕೋಣ ಅಕಾಶದಾಗ ಹಾರೋ ಸ್ಪೀಡ ನೋಡಿ ಸೇತುರಾಮಗ ಅನಿಸ್ತು 'ಇತ್ತಿತ್ಲಾಗಿ ಕೋಣದ ಹೊಟ್ಟ್ಯಾಗೂನೂ ಜೆಟ್ ಕೂಡಸ್ಯಾರೇನೋ!!' ಅಂತ. ಅಂತೂ ಕೆಲವೇ ಕ್ಷಣದೊಳಗ ಜಂಬೋ ಜಟ್ ಸ್ಪೀಡನ್ಯಾಗ ಹಾರಿಸಿಕೋತ ಯಮರಾಜ ಸೇತುನ್ನ ಚಿತ್ರಗುಪ್ತನ ಎದುರಿಗೆ ನಿಲ್ಲಿಸಿದ್ದ. ಅಲ್ಲೀ ವ್ಯವಸ್ಥಾ ನೋಡಿ ಸೇತುರಾಮ ಬಾಯಿ ಮ್ಯಾಲೆ ಕೈ ಇಟಗೊಳ್ಳೋ ಹಂಗ ಅನಿಸ್ತು. ಚಿತ್ರಗುಪ್ತ ಮಲ್ಟಿನ್ಯಾಶನಲ್ ಕಂಪನಿ ಸಿಇಓ ಕುಂತಂಗ ಎಗ್ಜಿಕ್ಯುಟಿವ್ಹ ವ್ಹೀಲಚೇರಿನೊಳಗ ಕುಂತಾನು. ಎದುರಿಗೆ ಒಂದ ಲ್ಯಾಪಟೊಪ ಐತಿ. ಇಂಟರ್ನೆಟ್ ಕನೆಕ್ಶನ್ ಐತಿ. ಫೋನ ಐತಿ. ಫ್ಯಾಕ್ಸ ಐತಿ. ಪ್ರಿಂಟರ್ ಐತಿ. ಆಫೀಸೆಲ್ಲ ಏರಕಂಡಿಶಂಡ ಐತಿ. ಅಲ್ಲೆ ಒಂದು ಸುಪರ ಕಂಪ್ಯೂಟರ್ ನೆಟ್‌ವರ್ಕ ಕೆಲಸ ಮಾಡಾಕ ಹತ್ತೇತಿ. ಆಫೀಸ ತುಂಬೆಲ್ಲ ವೀಡಿಯೋ ಮಾನಿಟರ ಅದಾವು. ಜಗತ್ತಿನ ತುಂಬ ಇದ್ದ ಎಲ್ಲಾ ಜನರ ಮಾಡೋದೆಲ್ಲಾನೂ ರೆಕಾರ್ಡ ಮಾಡೋ ವ್ಯವಸ್ಥಾ ಅಲ್ಲೆ ಇತ್ತು. ಸೇತು ಇದನ್ನೆಲ್ಲ ನೋಡಿ ಅಬಬಾ ಅಂತ ಬಾಯಿ ಮ್ಯಾಲೆ ಬಟ್ ಇಟಗೊಂಡ.

'ಓ, ವೆಲ್ಕಮ್, ವೆಲ್ಕಮ್ ಮಿಸ್ಟರ್ ಸೇತು. ಪ್ಲೀಜ ಟೇಕ ಯುವರ್ ಸೀಟ್.' ಅಂತ ಚಿತ್ರಗುಪ್ತ ಭಾಳ ಮರ್ಯಾದಿಯಿಂದ ಸೀಟ್ ಆಫರ್ ಮಾಡಿದ್ದ. ಸೇತು ಸಹಿತ ಅಷ್ಟ ಮರ್ಯಾದಿ ಕೊಟ್ಟು 'ಥ್ಯಾಂಕ್ಯು ಸರ್.' ಅಂತ ಖುರ್ಚಿ ಮ್ಯಾಲೆ ಕುಂತ. ಯಮಪಾಶ ಇನ್ನೂ ಕೊಳ್ಳಾಗ ಇತ್ತು. ಯಮರಾಜಾನೂ ಬಾಜು ಖುರ್ಚಿ ಮ್ಯಾಲೆ ಕುಂತ. 'ಯಾ, ಯುವರ್ ನೇಮ ಇಜ ಸೇತುರಾಮ್. ಲೆಟ್ ಮಿ ಓಪನ್ ಯುವರ್ ಅಕೌಂಟ್' ಅಂತ ಹೆಸರ ಎಂಟರ ಮಾಡಿದ. ಭರ್ ಭರ್ ಅಂತ ಸೇತುನ ಪೂರ ಇತಿಹಾಸ ಹೊರಬಿತ್ತು. ಸೇತು ಮತ್ತ ಸುಮ್ಮಿ ಕಾಟ ಮ್ಯಾಲೆ ಮಲಗಿದ್ದ ವಿಡಿಯೋ ಸೇತುಗ ಕಂಡಹಂಗ ಆತು. ಚಿತ್ರಗುಪ್ತನ ಮುಖದ ಮ್ಯಾಲೆ ಮಂದಹಾಸ ಮೂಡೋದು ನೋಡಿ 'ರೀ,ರೀ ನೀವು ಏನೇನು ವೀಡಿಯೋ ಮಾಡಿಕೊಂಡೀರಿ' ಅಂದಾಗ 'ಮಿಸ್ಟರ್ ಸೇತುರಾಮ್, ಕೆಲವೊಂದು ಹಿಡನ್ ಫಾಯಿಲ್ಸ ಇರತಾವು. ಅವನ್ನೆಲ್ಲ ನಿಮಗ ತೋರಸಂಗಿಲ್ಲ.' ಅಂದ. ಸೇತೂಗೂ ಕಸಿವಿಸಿ ಆದಂಗ ಆದ್ರೂ ಖುಸಿ ಅನಸಾಕ ಹತ್ತ್ಯ. ಚಿತ್ರಗುಪ್ತ ಹೇಳಿದ. 'ಫಾಯಿನ್, ಮಿಸ್ಟರ ಸೇತು, ಯುವರ ಅಕೌಂಟ ಇಜ ಕ್ಲಿಯರ್. ಯುವರ್ ಗುಡ್ ಅಂಡ ಬ್ಯಾಡ್ ಡೀಡ್ಸ ಆರ್ ಅಲ್ಮೋಸ್ಟ ಇಕ್ವಲ್. ದೇರ್ ಫರ್, ಆಯ್ ಅಮ್ ಗಿವಿಂಗ ಯು ಅನ್ ಆಫರ. ಯು ಕ್ಯಾನ್ ಚೂಜ ಆಯ್ದರ್ ಹೆಲ್ ಆರ್ ಹೆವನ್. ಇಂಥ ಆಪರ್ಚ್ಯುನಿಟಿ ಮಿಲಿಯನ್ ದಾಗ ಒಬ್ಬರಿಗೆ ಅಥವಾ ಇಬ್ಬರಿಗೆ ಸಿಗತೈತಿ.' ಅಂದಾಗ ಸೇತುಗ ಮತ್ತಷ್ಟು ಆನಂದ ಆತು.

'ಚಿತ್ರಗುಪ್ತ ಸಾಹೇಬರ್, ನೀವು ಹೇಳೊದೆಲ್ಲ ಒಪ್ಪಿಗೋತೀನ್ರಿ. ಆದರ ನಂದೊಂದು ಸಮಸ್ಯೆ ಐತ್ರಿ. ನೀವು ಏನೂ ತಿಳಕೊಳ್ಳೋದಿಲ್ಲ ಅಂದ್ರ ಹೇಳತೀನ್ರಿ.' ಅಂತ ಸೇತು ಅಂದಾಗ 'ಏನ್ ಅಡ್ಡಿ ಇಲ್ಲಪ ಸೇತು. ಇಲ್ಲೆ ಬಂದ ಮ್ಯಾಲೆ ನಿಮ್ಮದು ಏನ ಸಮಸ್ಯೆ ಇದ್ದರುನು ನಾವು ಸಾಲ್ವ ಮಾಡತೀವಿ ಹೇಳು.' ಅಂತ ಚಿತ್ರಗುಪ್ತ ಸೇತುನ್ನ ಹುರಿದುಂಬಿಸಿದ್ದ. ಸೇತುಗ ಸಮಾಧಾನ ಆತು. ಕೇಳಿದ, ' ಸಾಹೇಬರ, ನಾನು ಏನ ಆರಿಸಿಕೊಂಡ್ರೂನೂ ಮೊದಲ ಸ್ವಲ್ಪ ಸ್ಯಾಂಪಲ್ ನೋಡೇನ ಚೂಜ ಮಾಡಿಕೋತೀನ್ರಿ. ಅದಕ ದಯಮಾಡಿ ನೀವು ಸ್ವರ್ಗ ಮತ್ತ ನರಕಾನ ಸ್ವಲ್ಪ ನೋಡಿ ಬರಾಕ ಅವಕಾಶ ಮಾಡಿ ಕೊಟ್ಟರ ಛಲೋ ಆಗತೈತ್ರಿ. ಆ ಮ್ಯಾಲೆ ನಾ ಎಲ್ಲಿ ಹೋಗಬೇಕು ಅಂತ ನನ್ನ ನಿರ್ಧಾರ ಹೇಳತೀನ್ರಿ.' ಅಂದ. 'ಭಲೆ ಸೇತು, ನೀನು ಭಾರೀ ಕ್ಯಾಲ್ಕ್ಯುಲೇಟೆಡ್ ಅದಿ ಬಿಡು. ಅದಕ ನಿನ್ನ ಅಕೌಂಟು ಇಷ್ಟ ಬ್ಯಾಲನ್ಸ್ಡ ಐತಿ ಅನ್ನೋದು ನನಗ ಈಗ ಅರ್ಥಾತು. ಪರವಾಗಿಲ್ಲ, ಯಮರಾಜರ, ಸೇತೂಗ ಮೊದಲು ಸ್ವರ್ಗದ ಬಾಗಲ ತೋರಸ್ರಿ. ಪಾಶ ಬಿಚ್ಚ ಬ್ಯಾಡ್ರಿ ಮತ್ತ. ಸ್ವಲ್ಪ ನೋಡಿಕೊಂಡ ಬರತಾನಂತ. ಆ ಮ್ಯಾಲೆ ನರಕಾನೂ ತೋರಸ್ರಿ. ಹೋಗಿ ಬರಲಿ.' ಅಂತ ಯಮರಾಜನಿಗೆ ಇನ್ಸ್ಟ್ರಕ್ಶನ್ಸ ಕೊಟ್ಟರು.

ಸೇತು ಸಾವಕಾಶ ಸ್ವರ್ಗದ ಬಾಗಿಲ ಹತ್ರ ಬಂದ. ಚಿಲಕ ಮುಟ್ಟಿ ನೋಡಿದ. ತಣ್ಣಗ ಇತ್ತು. ಸಾವಕಾಶ ಹೊಚ್ಚಲ ದಾಟಿ ಒಳಗ ಬಂದ. ಪ್ರಶಾಂತ ವಾತಾವರಣ ಐತಿ. ಗಿಡ ಮರ ಹುಲುಸಾಗಿ ಬೆಳದಾವು. ಜಾಜಿ, ಮಲ್ಲಿಗಿ, ಕೆಂದಸಂಪಿಗಿ ಇನ್ನೂ ಅನೇಕ ಹೂಗಳು ಅರಳ್ಯಾವು. ಮುಂಜಾನೆಯ ಹೊಂಬಿಸಿಲು ಇತ್ತು, ಅಲ್ಹಾದಕರ ವಾತಾವರಣ ಇತ್ತು. ಹಿತವಾದ ತಂಪ ಗಾಳಿ ಬೀಸಾಕ ಹತ್ತೈತಿ. ಯಾವುದೇ ಗಲಾಟೆ ಇಲ್ಲ. ಕೂಗಾಟ ಇಲ್ಲ. ಎಲ್ಲಾರೂ ತಮ್ಮ ತಮ್ಮ ಕೆಲಸ ಮಾಡಿಕೊಳ್ಳಾಕ ಹತ್ಯಾರು. ಕೆಲವರು ಓದಾಕ ಹತ್ಯಾರು. ಕೆಲವರು ಸಂಗೀತ ಕೇಳಾಕ ಹತ್ಯಾರು. ಕೆಲವರು ಕಥಕ್ಕಳಿ ನಡಿಸ್ಯಾರು. ಕೆಲವರು ಭರತ ನಾಟ್ಯ ಮಾಡಾಕ ಹತ್ಯಾರು. ಕೆಲವರು ಧ್ಯಾನಕ ಕುಂತಾರು. ಒಂದ ಹತ್ತ ನಿಮಿಷ ನಿಂತು ನೋಡಿದ. ಸೇತುಗೇನ ವಿಷೇಷ ಅನಸಲಿಲ್ಲ.

ನಡಿರಿ ಯಮರಾಜರ. ಸ್ವಲ್ಪ ನರಕಾನೂ ನೋಡಿ ಬರೂನು ಅಂದ. ಸೇತು ಮನಸ್ಸಿನ್ಯಾಗ ವಿಚಾರ ಮಾಡತಿದ್ದ. ನರಕ ಅಂದ್ರ ಭಾಳ ಭಯಾನಕ ಇರಬೇಕು. ಅಲ್ಲೆ ಎಲ್ಲಾ ಕಡೆ ಕೊಳ್ಳಿ, ದೊಂಬಿ, ಕೊಲೆ, ಸುಲಿಗಿ ನಡೀತಿರಬೇಕು. ಅಲ್ಲಿ ಇರೋರೆಲ್ಲ ನರಕ ಯಾತನೆ ಅನುಭವಿಸತಿರಬೇಕು. ಅಂತ ವಿಚಾರ ಮಾಡ ಮಾಡೋದರೊಳಗ ನರಕದ ಬಾಗಿಲ ಹತ್ತರ ಬಂದಿದ್ದ. ಯಮರಾಜ ಹೇಳಿದ. 'ಸೇತುರಾಮು, ಲಗೂನ ನೋಡಿಕೊಂಡು ಬಂದಬಿಡು, ಇಲ್ಲ ಅಂದರ ಇಲ್ಲೇ ಪಾಶ ಬಿಚ್ಚಿ ನಿನ್ನ ಬಿಟ್ಟು ಹೋಕ್ಕಿನಿ ನೋಡು.' ಅಂದಾಗ 'ಇಲ್ಲಳ್ರಿ, ಯಮರಾಜರ, ನಾ ಏನ ಹಂಗ ಮಾಡಾಕ ಹುಚ್ಚ ಅಂತ ತಿಳಕೊಂಡೀರೇನ್ರಿ ನೀವು? ಹೀಂಗ

ಹೋಗಿ, ಹಾಂಗ ಬಂದ ಬಿಡತೀನಿ ನೋಡ್ರಿ.' ಅಂತ ನರಕದ ಚಿಲಕಾನೂ ಮುಟ್ಟಿ ನೋಡಿದ. ಅದೂ ತಂಪ ಇತ್ತು. ಸವಕಾಶ ಹೊಚ್ಚಲ ದಾಟಿ ಒಳಗ ಬಂದ. ಸೇತುಗ ಆಶ್ಚರ್ಯ ಆತು. ನೋಡತಾನ, ಇಲ್ಲೂ ಸ್ವರ್ಗದಾಗ ಇದ್ದಹಂಗ ಎಲ್ಲ ಶಾಂತ ಐತಿ. ಎಲ್ಲಾರು ಅಲ್ಲೆಲ್ಲೆ ಕುತಗೊಂಡು ಗಂಭೀರ ಚರ್ಚೆ ನಡಿಸ್ಯಾರು. ಕೆಲವರು ಕುಣ್ಯಾಕ ಹತ್ತಿದ್ದರ, ಕೆಲವರು ಮ್ಯುಜಿಕ ಕೊಡಾಕ ಹತ್ಯಾರು. ಕೆಲವರು ಧ್ಯಾನ ಮಾಡಾಕ ಹತ್ಯಾರು. ಇಲ್ಲೂ ಒಂದ ಹತ್ತ ನಿಮಿಷ ನಿಂತು ನೋಡಿದ. ವಿಚಾರ ಮಾಡಾಕ ಹತ್ತಿದ. 'ಏನಪಾ ಇದು, ನಮಗರ ಅಲ್ಲೆ ಭೂಮಿ ಮ್ಯಾಲೆ ನರಕ ಅಂದ್ರ ಹೆದರಿಸಿ ಬಿಟ್ಟಾರು. ಎಲ್ಲರಿಗುನೂ ಪಾಪ ಮಾಡ ಬ್ಯಾಡ್ರಿ. ರವ ರವ ನರಕಕ್ಕ ಹೋಗತೀರಿ.' ಅಂತ ತಪ್ಪ ಅಭಿಪ್ರಾಯ ಕೊಟ್ಟರು ಅಂತ ಒಂದ ನಿರ್ಧಾರಕ  ಬಂದ.

ಹೊರಗ ಬಂದವನs 'ನಡೀರಿ ಯಮರಾಜರ, ಹೋಗೋಣು, ಚಿತ್ರಗುಪ್ತರ ಕಡಿಗೆ ಅಂದ. ಇಬ್ಬರೂ ತಿರಿಗಿ ಚಿತ್ರಗುಪ್ತರ ಸಿಇಒ ಆಫಿಸಗೆ ಬಂದ್ರು. ಯಮಪಾಶ ಇನ್ನೂ ಸೇತುನ ಕೊಳ್ಳಗ ಇತ್ತು. 'ಬಾರಪ, ಸೇತು. ಎಲ್ಲಿಗೆ ನಿನ್ನ ಡೆಪ್ಯೂಟ್ ಮಾಡ್ಲಿ ಹೇಳು.' ಅಂತ ಚಿತ್ರಗುಪ್ತ ಕೇಳಿದ. 'ಸಾಹೇಬರ್, ನಾನು ನರಕಕ್ಕ ಹೋಗತೀನ್ರಿ.' ಅಂತ ಸೇತು ತನ್ನ ನಿರ್ಧಾರ ಹೇಳಿದ. ಚಿತ್ರಗುಪ್ತಗೂನೂ ಬಹಳ ಆಶ್ಚರ್ಯ ಆತು. 'ಯಲಾ ಇವನ, ಭಾಳ ಮಂದಿ ಸ್ವರ್ಗಕ್ಕ ಹೋಗಾಕ ಇಷ್ಟ ಪಡತಾರು. ಇದೇನಿದು ವಿಚಿತ್ರ? ಸರಿಯಾಗಿ ನೋಡಿಕೋಂಡು ಬಂದೀಯ ಇಲ್ಲಪಾ ಸೇತು? ಅಲ್ಲೆ ಹೋದ ಮ್ಯಾಲೆ ಮತ್ತ ತಿರಗಿ ಬರಂಗಿಲ್ಲ ನೋಡ ಮತ್ತ.' ಅಂತ ಚಿತ್ರಗುಪ್ತ ಸಮಜಾಯಿಸಿ ಕೇಳಿದ್ದ. 'ನಾ ಎಲ್ಲ ಬರೋಬರೀನ ನೋಡಿಕೊಂಡು ಬಂದೀನ್ರಿ. ನೀವೇನ ಚಿಂತಿ ಮಾಡಬ್ಯಾಡ್ರಿ. ನನಗ ನರಕಕ್ಕ ಕಳಿಸ್ರಿ.' ಅಂದ. 'ಆತಪಾ ನಿನ್ನ ಇಚ್ಛಾ ಹೆಂಗೈತಿ ಹಂಗ ಆಗ್ಲಿ.' ಅಂತ ' ಯಮರಾಜರ, ಸೇತುನ್ನ ನರಕಕ್ಕ ಬಿಡ್ರಿ. ಅವನ ಪಾಶ ತಗದು ಒಳಗ ದೂಡಿ ಬಿಡ್ರಿ' ಅಂದಾಗ ಚಿತ್ರಗುಪ್ತನ ಮಾತು ಯಾಕ ಸ್ವಲ್ಪ ಬಿರಸ ಆದಹಂಗ ಆತಲ್ಲ ಅಂತ ಸೇತುಗ ಅನಿಸಿದ್ರೂನೂ 'ಇಲ್ಲೀ  ತನಕ ನನ್ನ ಮರ್ಯಾದೀಲೆ ನೋಡಿಕೊಂಡಿದ್ದ ಹೆಚ್ಚಾತು ಅಂತ' ಸೇತು ನರಕದ ಕಡೆಗೆ ನಡೆದ.

ಯಮರಾಜ ಸೇತುರಾಮನ ಕುತಿಗಿ ಮೇಲೆ ಕೈ ಹಾಕಿ ದೂಡಾಕ ಹತ್ತಿದ. 'ಯಾಕ್ರಿ ಯಮರಾಜರ, ನಾನ ಬೇಕಂತ ನರಕ ಆರಿಸಿಕೊಂಡೇನಿ. ನಾ ಎಲ್ಲಿs ಹೋಗದಿಲ್ಲ, ಅಲ್ಲೇ ಹೋಕ್ಕೇನಿ. ಬಿಡ್ರಿ ನನ ಕುತಿಗೀನ' ಅಂದ. ಅಷ್ಟರೊಳಗ ನರಕದ ಬಾಗಲ ಕಾಣಾಕ ಹತ್ತಿತು. ಯಮರಾಜ ತನ್ನ ಯಮಪಾಶನ ಹಿಂದ ತಕ್ಕೊಂಡ. ಸೇತು ಧೈರ್ಯದಿಂದ ಮುಂದ ಮುಂದ ಹೋಗಾಕ ಹತ್ತಿದ. ನರಕದ ಬಾಗಿಲ ಸಮೀಪ ಬಂತು, ಒಳಗಲಿಂದ ಸೊಂಯ್ ಸೊಂಯ್ ಅಂತ ಬೆಂಕಿ ಝಳಕ ಹೊರಗ ಬರಾಕ ಹತ್ಯಾವು. ಸಾವಕಾಶ ಹೋಗಿ ಬಾಗಲದ ಚಿಲಕ ಮುಟ್ಟಿ ನೋಡತಾನಾ. ಬೆಂಕಿ ಚಂಡ ಹಿಡದಂಗಾತು. ಭರ್ರನ ಕೈ ಹಿಂದ ತಕ್ಕೊಂಡ. ಠಣ್‌ನ ಹೊಚ್ಚಲ ಜಿಗದ ಒಳಗ ಹೋದ. ಸೀನ್ ಎಲ್ಲ ಛೇಂಜ ಆಗಿ ಬಿಟ್ಟೈತಿ. ಚೀರಾಟ, ಹೊಡದಾಟ, ಖೂನಿ, ದರೋಡೆ, ಕೊಲೆ, ಸುಲಗಿ ಎಲ್ಲ ನಡದ ಬಿಟ್ಟೈತಿ. ಗಿಡ ಮರ ಎಲ್ಲಾ ಬೆಂಕಿ ಹತ್ತಿ ಉರೆಕ ಹತ್ಯಾವು. ಎಲ್ಲಿ ನೋಡಿದರೂ ಹಾಹಾಕಾರ ತುಂಬೈತಿ. ಸೇತು ಇನ್ನೂ ಹತ್ತ ಹೆಜ್ಜಿ ಇಟ್ಟಿದ್ದಿಲ್ಲ. ಎಂಟ್‌ಹತ್ತ ಮಂದಿ ಗುಂಪು ಸೇತುರಾಮನ ಕಡೆ ಓಡಿ ಬಂದರು. ಒಂದ ಸಲ ಸೇತು ಕಣ್ಣ ತಗದ ನೋಡತಾನಾ, ಎಲ್ಲಾರೂ ರಾಕ್ಷಸರಂಗ ಕಾಣಾಕ ಹತ್ಯಾರ. ಕೆಟ್ಟ ಜೋರಾಗಿ ಚೀರಾಡಾಕ ಹತ್ಯಾರ. ಸೇತುರಾಮಗ  ಮೊದಲನೇ ಸಲ ಸ್ವಲ್ಪ ನಡಗ ಬಂದಹಂಗಾತು.

ಆ ಗುಂಪು ಸೇತುರಾಮನ ಸಮೀಪ ಬಂದು 'ಬರ್ರಿ ಸೇತುರಾಮ ಸಾಹೇಬರ. ನೀವು ಭಾರಿ ಸಕ್ಸೆಸ್ಸಫುಲ್ ಸೇಲ್ಸಮನ್‌ರು ಅಂತ ನಮಗೆಲ್ಲ ಗೊತ್ತಾಗೇತ್ರಿ. ಭೂಮಿ ಮೇಲೆ ನಿಮ್ಮ ಕೆಲಸ ಮುಗಿಸಿ ಇಲ್ಲೇನ ಮಾರಾಕ ಬಂದೀರಿ. ನಿಮ್ಮ ಆಟ ಇಲ್ಲೆ ನಡೆಂಗಿಲ್ಲರಿ.' ಅಂತ ಒಬ್ಬೊಬ್ಬರ ಒಬ್ಬೊಬ್ಬರ ಸರತಿಮೇಲೆ ಸೇತುರಾಮನ್ನ ದನ ಬಡದಹಂಗ ಬಡ್ಯಾಕ ಹತ್ತಿದರು. ಸೇತುರಾಮ 'ಸ್ವಲ್ಪ ತಡೀರೆಪಾ, ಹೀಂಗ್ಯಾಕ ನನ್ನ ಹೊಡ್ಯಾಕ ಹತ್ತೀರಿ. ನಾ ಏನ್ ತಪ್ಪ ಮಾಡೇನಿ. ನಾನs ಸ್ವಇಚ್ಛಾದಮೇಲೆ ಈ ನರಕ ಆರಿಸಿಗೊಂಡು ಬಂದೇನಿ. ನನ್ನ ಮಾತರs ಸ್ವಲ್ಪ ಕೇಳ್ರಿ' ಅಂತ ವಿನಂತಿ ಮಾಡಿಕೊಂಡ. ಅವರಿಗೆ ಕನಿಕರ ಬಂತು. ಬಡೇದ ನಿಲ್ಲಿಸಿದರು. ಸೇತು ಪ್ರಶ್ನೆ ಕೇಳಿದ.

'ಅಲ್ಲರಿ, ನಾನು ಈಗ ಬಂದು ನರಕ ನೋಡಿಕೊಂಡು ಹೋಗೇನಿ. ಅವಾಗ ಸ್ವರ್ಗದಾಗ ಇದ್ದಹಂಗ ಎಲ್ಲ ಶಾಂತ ಇತ್ತು. ಈಗ ನೋಡಿದರ ಎಲ್ಲ ಉಲ್ಟಾ ಆಗಿಬಿಟ್ಟೈತಿ. ಏನಿದು?' ಅಂತ ಕೇಳಿದಾಗ ಅವರು ಹೇಳಿದರು. 'ಸೇತುರಾಮ್ ಸೇಲ್ಸಮನ್ ಸಾಹೇಬರ್, ನೀವು ಮೊದಲು ಬಂದು ನೋಡಿದ್ದು ಬರೆ ಡೆಮೋ ವರ್ಶನ್‌ರಿ. ಈಗ ನೋಡತಾ ಇರೋದು ಫುಲ್‌ಫ್ಲೆಜ್ಡ ಪ್ರಾಡಕ್ಟರಿ.' ಅಂದಾಗ ಸೇತುರಾಮ ಅಯ್ಯೋ ಅಂತ ಜೋರಾಗಿ ಚೀರಬೇಕಂದರೂ ದನಿ ಹೊರಗ ಬರಲಿಲ್ಲ. ಮೂರ್ಛೆ ಹೋಗಿ ಧೊಪ್ಪಂತ ಕುಸದ ಬಿದ್ದ.

ಜೋರಾಗಿ ಚೀರಿದ್ದ ಕೇಳಿ ಸುಮಿತ್ರಾಗ ಎಚ್ಚರ ಆತು. ಎದ್ದು ನೋಡತಾಳ. ಸೇತುರಾಮ ಕಾಟ ಕೆಳಗ ಬಿದ್ದನ. ಗದ ಗದ ನಡಗಾಕ ಹತ್ಯಾನ. ಮೈತುಂಬ ಬೆವರ ಬರಾಕ ಹತ್ತೇತಿ. ಸುಮ್ಮಿಗೆ ಹೆದರಿಕಿ ಆತು. ಘಾಬರಿ ಆದ್ಲು. ಸೇತುರಾಮನ ಎರಡೂ ರಟ್ಟಿಗೆ ಕೈ ಹಾಕಿ ಜೋರಾಗಿ ಅಲಗಾಡಿಸಿದಲು. ಸೇತುನ ಕಣ್ಣ ರೆಪ್ಪಿ ಸವಕಾಶ ಮಿಸಗಲಿಕ್ಕೆ ಹತ್ತಿದವು. ಸುಮ್ಮಿಗೆ ಸ್ವಲ್ಪ ಧೈರ್ಯ ಬಂತು. 'ಯಾಕ್ರಿ ಏನಾತು. ಹಂಗ್ಯಾಕ ಬಿದ್ರಿ. ಏನರ ಕೆಟ್ಟ ಕನಸ ಕಂಡ್ರೇನು? ಸಾರಿರಿ. ಇನ್ನಮೇಲೆ ನಾನು ನಿಮಗ ಏನು ತ್ರಾಸ ಕೊಡಂಗಿಲ್ಲ. ಏನೂ ಕೇಳಂಗಿಲ್ಲ. ನೀವು ಕಾಳಜಿ ಮಾಡಬ್ಯಾಡ್ರಿ.' ಅಂತ ಸಮಾಧಾನ ಹೇಳಿದಳು. ಸೇತುಗ ಸುಧಾರಿಕೊಳ್ಳಾಕ ಒಂದೆರಡು ತಾಸ ಬೇಕಾತು. ಅಂತ ಈ ಕನಸನ್ನ ಸೇತುನs ನಮಗ ಒಂದ ಸಲ ಹೇಳಿದ್ದ.

## ಏಕೈಕ ಪರಮಾತ್ಮನನ್ನು ಗುರುತಿಸುವದು ಹೇಗೆ?

– ಬ್ರಹ್ಮಕುಮಾರಿ ಮಾಲಾ (ಎಮ್.ಬಿ.ರಾಜಗೋಳಿ, ನಿವೃತ್ತ ಮುಖ್ಯೋಪಾಧ್ಯಾಯಿನಿ), ಯರಡಾಲ.

1) ಸ್ವಯಂ ಪ್ರಭು: ಪರಮಾತ್ಮ ಜಗತ್ತಿನ ತಾಯಿ ತಂದೆ ಸದ್ಗುರುವಾಗಿದ್ದಾನೆ. ಸ್ವಯಂಪ್ರಕಾಶನಾಗಿದ್ದಾನೆ.
2) ಅಜನ್ಮ: ಪರಮಾತ್ಮ ಜನನ ಮರಣರಹಿತ
3) ಅಯೋನಿಜ: ಪರಮಾತ್ಮ ತಾಯಿಯ ಗರ್ಭದಿಂದ ಜನಿಸಿದವನಲ್ಲ.
4) ಮೃತ್ಯುಂಜಯ: ಪರಮಾತ್ಮನಿಗೆ ಸಾವು ಎಂಬುದಿಲ್ಲ.
5) ಅಶರೀರಿ: ಪರಮಾತ್ಮನಿಗೆ ಸ್ಥೂಲ ಮತ್ತು ಸೂಕ್ಷ್ಮ ಶರೀರವಿಲ್ಲ.
6) ನಿರಾಕಾರ: ಪರಮಾತ್ಮನು ಜ್ಯೋತಿಬಿಂದು ಸ್ವರೂಪನು. ಸತ್ ಚಿತ್ ಆನಂದ ಸ್ವರೂಪನು.
7) ಅಭೋಕ್ತ: ಪರಮಾತ್ಮನು ಯಾವ ಭೋಗವನ್ನು(ಆಹಾರ) ತೆಗೆದುಕೊಳ್ಳುವದಿಲ್ಲ.
8) ಅವ್ಯಕ್ತ: ಪರಮಾತ್ಮನನ್ನು ಚರ್ಮ ಚಕ್ಷುಗಳಿಂದ ನೋಡಲು ಸಾಧ್ಯವಿಲ್ಲ. ದಿವ್ಯ ಚಕ್ಷುಗಳಿಂದ ಮಾತ್ರ ಅರಿಯಬಹುದು.
9) ಸರ್ವಜ್ಞ; ಪರಮಾತ್ಮನು ಸೃಷ್ಠಿ ಸ್ಥಿತಿ ಲಯಗಳಿಗೆ ಮೂಲನು. ಸೃಷ್ಠಿಯ ಆದಿ ಮಧ್ಯ ಅಂತ್ಯಗಳನ್ನು ಬಲ್ಲವನು.
10) ಸರ್ವಶಕ್ತಿವಾನ: ಪರಮಾತ್ಮ ವಿಶ್ವದ ಸರ್ವಾತ್ಮರಿಗೆ ಕರ್ಮಗಳಿಗೆ ಅನುಸಾರವಾಗಿ ಕರ್ಮ ಫಲ ನೀಡುವವನು ಮತ್ತು ಮುಕ್ತಿದಾತನು ಆಗಿದ್ದಾನೆ.

## ದೀಪ ದೊಡ್ಡದು ಮಾಡು – ಪ್ರಕಾಶ ಸಿ. ರಾಜಗೋಳಿ, ಬೆಂಗಳೂರು.

ಪರಂಪರಾನುಗತವಾಗಿ ನಾವು ಬೆಳಕಿಗೆ ಮಹತ್ವ ಕೊಡುತ್ತಾ ಬಂದಿದ್ದೇವೆ. ಜಗತ್ತಿನ ನೈಸರ್ಗಿಕ ಶಕ್ತಿಯ ಮೂಲ ಸೂರ್ಯನಿಗೆ ನಾವು ಸದಾ ಋಣಿಗಳು. ಅದೇ ರೀತಿ ದೇವರ ಮುಂದಿನ ದೀಪ, ಪಣತಿ, ಮೇಣಬತ್ತಿ ಇತ್ಯಾದಿಗಳಿಗೆ ನಾವು ಮಹತ್ವ ನೀಡುತ್ತೇವೆ. ಇನ್ನು ಆಧುನಿಕ ಯುಗದ ಆವಿಷ್ಕಾರವಾದ ಇಲೆಕ್ಟ್ರಿಕ್ ದೀಪಕ್ಕೂ ಕೂಡ ನಾವು ಮಹತ್ವ ನೀಡುತ್ತೇವೆ. ನಮ್ಮ ಕಡೆ ನಾವು ಸಣ್ಣವರಿದ್ದಾಗ ಹಳ್ಳಿಗಳಲ್ಲಿ ರಾತ್ರಿ ಮಲಗುವಾಗ ಚಿಮಣಿ ದೀಪವನ್ನು ಆರಿಸಬೇಕಾಗುತ್ತಿತ್ತು ಈಗ ನಾವು ಸಲೀಸಾಗಿ ಏ ಲೈಟ್ ಆಫ್ ಹಿ ಮಾಡಿ ಗುಡ್ ನೈಟ್ ಹೇಳಿದಂತೆ ಆಗ ದೀಪ ಆರಿಸು ಅನ್ನುವ ಬದಲು ಮನೆಯಲಿನ ಹಿರಿಯರು ಏ ದೀಪ ದೊಡ್ಡದು ಮಾಡು ಹಿ ಎಂದು ಹೇಳುತ್ತಿದ್ದರು. ಬಹುಶಃ ಕಳೆ, ಆರಿಸು, ಆಫ್ ಮಾಡು ಎಂದರೆ ಅಶುಭ ಎಂದು ಅವರು ಭಾವಿಸಿದ್ದಿರಬಹುದು?

## ನಮ್ಮ ಕಡೆ ಹಿಂಗ.. ನಿಮ್ಮ ಕಡೆ ಹ್ಯಾಂಗ...? – ಅರುಣ ಆರ್. ಯಾದವಾಡ., ಬೆಂಗಳೂರು

ನೀವು ಬೆಂಗಳೂರು ನಗರದಲ್ಲಿ ನೋಡಿರಬಹುದು.. ಎಲ್ಲರನ್ನೂ 'ಏನ್ ಗುರು' , 'ಸಾರ್', 'ಯಜಮಾನ್ರೆ' ಅಂತೆಲ್ಲಾ ಕರೀತೆವಿ. ಈ 'ಗುರು' ಶಬ್ದ ಹೇಗೆ ಬಂತೋ ಗೊತ್ತಿಲ್ಲ. ದೊಡ್ಡವರು–ಸಣ್ಣವರೆನ್ನದೇ ಎಲ್ಲರಿಗೂ ಎಲ್ಲರೂ 'ಗುರು' ಅಂತಾನೇ ಕರೀತಾರೆ.. ! ಇತ್ತೀಚೆಗೆ ಈ 'ಗುರು' ಸ್ವಲ್ಪ ಪ್ರೊಮೊಶನ್ (?) ಹೊಂದಿ 'ಶಿಷ್ಯಾ' ಆಗಿದ್ದಾನೆ. 'ಏನ್ ಶಿಷ್ಯಾ , ಏನ್ ಸ್ಕೆಚ್ ಹಾಕ್ತಾ ಇದ್ದಿಯಾ.. ? ' ಅನ್ನೊದು ಸ್ವಲ್ಪ ಸಾಮಾನ್ಯವಾಗಿದೆ.

ಇಲ್ಲಿ ಹೀಗಿರಬೇಕಾದರೆ , ನಮ್ಮ ಕಡೆ ಹೇಗೆ ಸ್ವಲ್ಪ ನೋಡಿ.. ! ಒಂದು ವೇಳೆ ನಿಮಗೆ ಒಬ್ಬ ಹುಡುಗನ ಹೆಸರು ಗೊತ್ತಿಲ್ಲದಿದ್ದರೆ ಮತ್ತು ಆತ ನಿಮಗಿಂತ ಸಣ್ಣವ ಇದ್ದರೆ 'ಏ ರಾಜಾ, ಬಾ ಇಲ್ಲಿ' ಅಂತಾರ. ಇಲ್ಲವೆ 'ಏ ತಮ್ಮಾ ಇಲ್ಲಿ ಬಾ ಒಂದೀಟ' ಅನ್ನುತ್ತಾರೆ... ಇಲ್ಲವೆ ' ಏ ಟಮಾಟಿ , ಒಂದು ಲೋಟ ನೀರು ತುಗೊಂಡು ಬಾ ಇಲ್ಲೆ..' ಅಂತಾನೂ ಕರೆಯುತ್ತಾರೆ. ಆ ಹುಡುಗನ ಹೆಸರೇ ಗೊತ್ತಿಲ್ಲ .. ಆದರೂ ಹೆಸರು ಹಿಡಿದು ಕೂಗುವ ಆಸೆ ಇದ್ದರೆ 'ಏ ಬಸು ಬಾ ಇಲ್ಲಿ' ಅಥವಾ 'ಏ ಬಸಲಿಂಗ' ಅಥವಾ 'ಏ ಸಿದ್ದಲಿಂಗಾ ಬಾ ಇಲ್ಲೇ..' ಅಂತಾನೂ ಅನ್ನುತ್ತಾರೆ.

ಊರಿಗೆ ಸ್ವಲ್ಪ ದೊಡ್ಡವರಿದ್ದರೆ 'ನಮಸ್ಕಾರ್ರಿ ಗೌಡ್ರ' ಅಥವಾ 'ನಮಸ್ಕಾರ್ರಿ ದೇಸಾಯರ' ಅಥವಾ 'ನಮಸ್ಕಾರ್ರಿ ಕುಲಕರ್ಣ್ಯಾರ' ಅಥವಾ ಅವರು ಊರಲ್ಲಿ ಅಂಗಡಿ ಇಟ್ಟಿದ್ದರೆ ''ನಮಸ್ಕಾರ್ರಿ ಶೆಟ್ಟರ' ಅಂತಾ ಕರೆಯುವ ರೂಢಿ. ಸ್ವಲ್ಪಾ ನೌಕರಿ ಮಾಡತಿದ್ದರು ಅಂದರೆ ''ನಮಸ್ಕಾರ್ರಿ ಸರ್' ಅಂತಾ ಕರೀತಾರ. ಅಥವಾ ಅವರು ಸ್ವಾಮಿಗಳು ಅಂದರೆ ಹಿರೇಮಠ ಅಥವಾ ಮಠಪತಿ ಇತ್ಯಾದಿ ಇದ್ದರೆ 'ನಮಸ್ಕಾರ್ರಿ ಗುರುಗೋಳ' ಅಂತಾ ಬಾಯಿ ತುಂಬಾ ಕರೆಯುತ್ತಾರೆ. ಒಂದು ವೇಳೆ ಆ ವ್ಯಕ್ತಿ ಮಹಿಳೆ ಆಗಿದ್ದು ನಿಮ್ಮ ಊರಲ್ಲಿ ನೌಕರಿ ಮಾಡುತ್ತಿದ್ದರೆ 'ನಮಸ್ಕಾರ್ರಿ ಬಾಯಾರ' ಅನ್ನುತ್ತಾರೆ. ಇನ್ನೂ ಒಂದು ವೇಳೆ ಆ ವ್ಯಕ್ತಿ ಒಬ್ಬ ದೊಡ್ಡ ಅಧಿಕಾರಿ ಆಗಿದ್ದರೆ ' ನಮಸ್ಕಾರ್ರಿ ಸಾಹೇಬರ' ಅಂತಾ ಪೂರ್ತಿ ಬಾಯ್ತುಂಬ ಪ್ರೀತಿಯಿಂದ ಕರೆಯುತ್ತಾರೆ.


# ಪ್ರಭಾವಳಿ – ಶ್ರೀಮತಿ ಶುಭಶ್ರೀ ಜಿ. ಬೆಳಂದೂರ. ಡೆನ್‌ವೇರ್, ಕೊಲೆರಾಡೊ, ಯು.ಎಸ್.ಎ.

**ವೊ**ನ್ನೆ ಹೀಗೇ ಒಂದು ದಿನ ಶ್ರೀಯುತ ಬನ್ನಂಜೆ ಗೋವಿಂದಾಚಾರ್ಯರ "ಜೀವನ ಯೋಗ" ಎನ್ನುವ ಆಡಿಯೋ ಸಿ.ಡಿ.ಯನ್ನ ಕೇಳುತ್ತಾ ಇದ್ದೆ. ಇವರ ಉಪನ್ಯಾಸಗಳು, ಪ್ರವಚನಗಳು ಅದರಲ್ಲಿ ಅಡಗಿರುವ ಸಂದೇಶ, ಆ ತತ್ವದ ಸತ್ವವನ್ನ ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವಷ್ಟು, ಜೀರ್ಣಿಸಿಕೊಳ್ಳುವಷ್ಟು ಪ್ರಬುದ್ಧತೆ ನನ್ನಲ್ಲಿ ಖಂಡಿತವಾಗಿಯೂ ಇಲ್ಲ. ಆದರೂ ಅವರು ಮಾತನಾಡುವ ವಿಷಯಗಳು( ನನ್ನ ಗ್ರಹಣಶಕ್ತಿಗೆ ಸುಲಭವಾಗಿ ನಿಲುಕದ ವಸ್ತುವಾದರೂ ಕೂಡ), ಅದನ್ನು ಅವರು ವಿವರವಾಗಿ ಹೇಳುವ ರೀತಿ, ಕೆಲವು ಸಂದರ್ಭಗಳಲ್ಲಿ ನವಿರಾಗಿ ಬೆರೆಸುವ ಹಾಸ್ಯದ ಲೇಪನ ಹಾಗು ಕೇಳುಗರನ್ನು ಸೆಳೆಯುವ ಅವರ ಧ್ವನಿ ಇವೆಲ್ಲವೂ ಅವರ ಪ್ರವಚನವನ್ನು ಕೇಳಲು ನನ್ನನ್ನು ಬಹುವಾಗಿ ಆಕರ್ಷಿಸುವ ಸಂಗತಿಗಳು. ಅವರ ಮಾತನ್ನು, ಉಪನ್ಯಾಸವನ್ನು ಮುಖತಃವಾಗಲಿ ಅಥವಾ ಧ್ವನಿಮುದ್ರಿತವಾದ ಸಾಧನಗಳಲ್ಲಾಗಲಿ ಕೇಳಿರುವವರಿಗೆ ಇದು ಅನುಭವವಿರುವ ವಿಷಯವೇ. ಭಾರತದಲ್ಲಿ ಒಂದು ಐದಾರು ಬಾರಿ ಇವರ ಮಾತುಗಳನ್ನು ನೇರವಾಗಿ ಕೇಳುವ ಅವಕಾಶ ಸಿಕ್ಕಿತ್ತು.

ಈ "ಜೀವನ ಯೋಗ" ಅಂದರೆ ನಿಜವಾದ ರೀತಿಯಲ್ಲಿ ನಮ್ಮ ವ್ಯಕ್ತಿತ್ವದ ವಿಕಸನಕ್ಕೆ ಬೇಕಾಗುವಂತಹ ಚಿಂತನೆಗಳನ್ನು ನಮ್ಮ ಪ್ರಾಚೀನ ಗ್ರಂಥಗಳಿಂದ(ವೇದ, ಉಪನಿಷತ್ತು) ಪಡೆದುಕೊಂಡು, ಆ ಚಿಂತನೆಗಳನ್ನು ನಮ್ಮ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು, ಎಷ್ಟರ ಮಟ್ಟಿಗೆ ಅದನ್ನು ಉಳಿಸಿಕೊಳ್ಳಬಹುದು ಎಂಬುದರ ಬಗ್ಗೆ ಅವರು ಮಾಡಿರುವ ಒಂದು ವ್ಯಾಖ್ಯಾನ. ಕೇಳುವುದಕ್ಕಂತೂ ಅದ್ಭುತವಾಗಿದೆ. ಅದರಲ್ಲಿನ ವಿಚಾರಗಳನ್ನು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಂಡು ಪಾಲಿಸಬಹುದು ಎನ್ನುವುದು ಕೇಳುಗರಿಗೆ ಬಿಟ್ಟದ್ದು. ಯಾವ ರೀತಿಯಲ್ಲಿ ಈ ಸಮಾಜ(ನಾವು) ಮೌಲ್ಯಗಳೇ ಇಲ್ಲದ ಜೀವನವೆಂಬ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾ ಇದೆ(ಇದ್ದೇವೆ). ಹೇಗೆ ನಾವು ಸುಶಿಕ್ಷಿತರಾದರೂ ಕೂಡ ಸಂಸ್ಕೃತಿಯೇ ಇಲ್ಲದ ಒಂದು ವಾತಾವರಣದಲ್ಲಿ ಬದುಕು ಸಾಗಿಸುತ್ತಿದ್ದೇವೆ ಅನ್ನುವುದನ್ನ ಮನಸ್ಸಿಗೆ ಮುಟ್ಟುವಂತೆ ವಿವರಿಸಿದ್ದಾರೆ.

ಹಿಂದೂ ಧರ್ಮದ ಅಡಿಪಾಯವಾದ ವೇದ, ಉಪನಿಷತ್ತುಗಳು, ತತ್ವ ಜ್ಞಾನ ಇವೆಲ್ಲವುದರಲ್ಲೂ ಅಡಕವಾಗಿರುವ ಮನಶಾಸ್ತ್ರ, ಹೇಗೆ ನಮ್ಮ ಧರ್ಮದಲ್ಲಿ ಈ ಮನಶಾಸ್ತ್ರ ಮತ್ತು ತತ್ವಜ್ಞಾನಗಳೆರಡೂ ಒಂದಕ್ಕೊಂದು ಹೊಸೆದುಕೊಂಡಿವೆ ಮತ್ತು ನಮ್ಮ ಹಿಂದಿನವರು ಇದನ್ನೆಲ್ಲ ಎಷ್ಟು ಚೆನ್ನಾಗಿ ಅರ್ಥೈಸಿದ್ದರು ಎಂಬುದನ್ನು ತಮ್ಮ ವಿಚಾರಗಳಲ್ಲಿ ಮಂಡಿಸುತ್ತ ವಿವರಿಸಿ ಹೇಳುವಾಗ ಅವರು ಒಂದು ಸಂದರ್ಭದಲ್ಲಿ ಉಲ್ಲೇಖಿಸಿದ ಸಂಗತಿ ಮನುಷ್ಯರ ದೇಹದ ಸುತ್ತ ಇರುವ ಪ್ರಭಾವಳಿ. ಅದೇ ನಮ್ಮೆಲ್ಲರ ದೇಹದ ಸುತ್ತಲೂ ಇರುವ ಓಜಸ್ಸಿನ ಆವರಣ ಅಥವಾ ದಿವ್ಯಪ್ರಭೆಯಿಂದಾವೃತವಾದಂತಹ ಒಂದು ತೇಜಸ್ಸಿನ ಮಂಡಲ(Physical Aura) ಅಥವಾ ಇಡೀ ವಿಶ್ವದ ಪ್ರತಿಯೊಂದು ಜೀವಿಯನ್ನೂ ಆವರಿಸಿಕೊಂಡಿರುವ ವಿದ್ಯುತ್ಕಾಂತಿಯ ವಲಯ(Electromagnetic Field) .

ಇದು ನಮ್ಮ ದೇಹದಿಂದ ೧೨ ಅಂಗುಲಗಳಷ್ಟು ಪ್ರಮಾಣದ ಪರಿಧಿಯಲ್ಲಿ ಇರುವಂತಹುದು. ದೇಹದ ಸುತ್ತಲೂ ಇರುವ ಈ ದಿವ್ಯ ಪ್ರಭೆಯ ಆವಳಿಯು ದೇಹದಿಂದ ಹೊರಬರುತ್ತಿರುವ ವಿವಿಧ ಸಾಂದ್ರತೆಯ ವಿದ್ಯುತ್ಕಾಂತ ಶಕ್ತಿಗಳ ಸಮುಚ್ಚಯವಾಗಿ ಪ್ರತಿಯೊಂದು ಶರೀರವನ್ನೂ ಅಂಡಾಕಾರದಲ್ಲಿ ಸುತ್ತುವರಿಯಲ್ಪಟ್ಟಿದೆ. ಈ ಒಂದು ಪ್ರಭಾವಳಿ ಮತ್ತೇನು ಅಲ್ಲ, ಇದು ನಮ್ಮ ದೇಹವು ಹೊರಸೂಸುತ್ತಿರುವ ನಮ್ಮ ವ್ಯಕ್ತಿತ್ವದ ಪ್ರಭೆ. ನಮ್ಮ ಮನಸ್ಸಿನಲ್ಲಿರುವ/ಉಂಟಾಗುವ ಭಾವನೆಗಳ ಪ್ರತಿಫಲನ. ಈ ಅಂಡಾಕಾರದ ತೇಜೋಮಂಡಲವು ಹಲವಾರು ವರ್ಣಗಳಿಂದ ಮತ್ತು ಒಟ್ಟು ಏಳು ಸ್ತರ/ಪದರಗಳಿಂದ ಕೂಡಿರುವುದು. ಮನದಲ್ಲುಂಟಾಗುವ ಭಾವನೆಗಳನ್ನವಲಂಬಿಸಿ ಇದರಲ್ಲಿರುವ ಬಣ್ಣಗಳು ಬದಲಾಗುತ್ತಿರುವವು.



(Photo of Physical Aura taken with Advanced Kirlian Aura Capturing System)

ಈ ಬಣ್ಣಗಳು ಮತ್ತು ನಮ್ಮ ಮಾನಸಿಕ ಸ್ಥಿತಿ ಹೇಗೆ ಒಂದೊಕ್ಕೊಂದು ಸಂಬಂಧಿಸಿವೆ ಮತ್ತು ಯಾವ ಯಾವ ಬಣ್ಣಗಳು ಯಾವ ಒಂದು ಮನಸ್ಥಿತಿಯನ್ನು ಬಿಂಬಿಸುತ್ತವೆ ಎಂದು ನೋಡೋಣ.

**ಹಸಿರು ಬಣ್ಣ:** ಆನಂದವಾಗಿರುವ , ಹಾಯಾಗಿರುವ ಮನಸ್ಥಿತಿ. ನಮ್ಮ ಹೃದಯ ಮತ್ತು ಶ್ವಾಸಕೋಶಕ್ಕೆ ಸಂಬಂಧಿಸಿದ ಬಣ್ಣ. ಸಾಮಾನ್ಯವಾಗಿ ಪ್ರಗತಿಯನ್ನು, ಮನಸ್ಸಿನ ಸಮಾಧಾನದ, ಸಮತೂಕದ ಅವಸ್ಥೆಯನ್ನು ತೋರಿಸುವ ಬಣ್ಣ.

**ಕೇಸರಿ ಬಣ್ಣ:** ಜೀವನ ಶಕ್ತಿ, ಪೌರುಷ, ಒಳ್ಳೆಯ ಆರೋಗ್ಯ ಮತ್ತು ಜೀವನೋತ್ಸಾಹವನ್ನು ಪ್ರತಿಬಿಂಬಿಸುವ ಬಣ್ಣ. ಈ ವರ್ಣವೇನಾದರೂ ನಮ್ಮ ಪ್ರಭಾವಳಿಯಲ್ಲಿದ್ದರೆ ಅದು ನಮ್ಮಲ್ಲಿರುವ ಶಕ್ತಿ, ಕ್ರಿಯಾಶೀಲತೆ, ಸಕಾರಾತ್ಮಕ ಹಾಗೂ ಸಾಹಸೀ ಮನೋಭಾವವನ್ನು ತೋರಿಸುತ್ತದೆ.

**ಹಳದಿ ಬಣ್ಣ:** ಇದು ನಮ್ಮ ಪ್ಲೀಹಕೋಶ(Spleen) ಮತ್ತು ಪ್ರಾಣಶಕ್ತಿಗೆ ಸಂಬಂಧಿಸಿದ ಒಂದು ವರ್ಣ. ನಮ್ಮಲ್ಲಿರುವ ಆಶಾವಾದತ್ವ, ಸ್ಫೂರ್ತಿ, ಉಚ್ಚಮಟ್ಟದ ಅರಿವು, ಪ್ರೇರಣಾ ಶಕ್ತಿ ಮತ್ತು ಬುದ್ಧಿಮತ್ತೆ ಇವುಗಳನ್ನು ಬಿಂಬಿಸುತ್ತದೆ.

**ಕೆಂಪು ಬಣ್ಣ:** ಬೌತಿಕ ಶರೀರ ಮತ್ತು ರಕ್ತಪರಿಚಲನೆಗೆ ಸಂಬಂಧ ಪಟ್ಟಿದೆ.

**ಕಡುಗೆಂಪಿ**ದ್ದರೆ ಒಳ್ಳೆಯ ಸಂಕಲ್ಪ ಶಕ್ತಿ, ವಸ್ತುನಿಷ್ಠ, ಸಕಾರಾತ್ಮಕ, ಸಕ್ರಿಯ ಮನೋಭಾವದ ವ್ಯಕ್ತಿತ್ವ.

**ಕೇಸರಿನ** ಬಣ್ಣವಿದ್ದರೆ ಕೋಪ, ತಾಪ , ದ್ವೇಷ , ಕಿಚ್ಚು ಈ ತರಹದ ಮಾನಸಿಕ ಸ್ಥಿತಿ.
**ತಿಳಿಗೆಂಪು** ಅಥವಾ **ಗುಲಾಬಿ ಕೆಂಪಿನ** ವರ್ಣವಿದ್ದರೆ ಪ್ರೀತಿ, ಸಹಾನುಭೂತಿ ತೋರಿಸುವ, ಮೃದು ಹೃದಯದ, ಸೂಕ್ಷ್ಮ ಮನಸ್ಸಿನ ವ್ಯಕ್ತಿತ್ವ.
**ಮಬ್ಬಾದ** ಅಥವಾ **ಮಸುಕಾದ ಗುಲಾಬಿ** ವರ್ಣ ಅಪ್ರಬುದ್ಧ ಮತ್ತು/ಅಥವಾ ಅಪ್ರಾಮಾಣಿಕ ಮನೋಭಾವವನ್ನು ತೋರಿಸುತ್ತದೆ.

**ನೀಲಿ ಬಣ್ಣ:** ಗಂಟಲು ಮತ್ತು ತೈರಾಯ್ಡ್ ಗ್ರಂಥಿಗೆ ಸಂಬಂಧಿಸಿದ್ದು. ಸೌಮ್ಯವಾದ, ಸಮಾಧಾನದಿಂದ ಕೂಡಿದ, ಸ್ವಸ್ಥ ಮನಸ್ಸುಳ, ಜ್ಞಾನಿಯ ವ್ಯಕ್ತಿತ್ವ. ಜ್ಞಾನದ ಆಳಕ್ಕೆ ಹೋದರೆ ಈ ನೀಲಿ **ಕಡು ನೀಲಿ**ಯಾಗುತ್ತೆ. ಅದಕ್ಕೇ ಭಗವಂತನನ್ನ ನೀಲಮೇಘಶ್ಯಾಮ ಎಂದು ಕರೆಯುವುದು. ಅಗಾಧವಾದ ಜ್ಞಾನವನ್ನು ಬಿಂಬಿಸುವ ಬಣ್ಣ **ಕಡು ನೀಲಿ.**

**ಬಂಗಾರ ವರ್ಣ:** ಜ್ಞಾನೋದಯದ, ಆತ್ಮ ಸಾಕ್ಷಾತ್ಕಾರ ಹೊಂದಿದ ವ್ಯಕ್ತಿಗಳ ಸುತ್ತ ಇರುವ ವರ್ಣ.

**ಕಪ್ಪು ಬಣ್ಣ:** ಬೇರೆಯ ಬೆಳಕಿನ ಶಕ್ತಿಯನ್ನು ತನ್ನೆಡೆಗೆ ಸೆಳೆದುಕೊಂಡು ಅದನ್ನು ಪರಿವರ್ತಿಸುವ ಗುಣ ಈ ಕಪ್ಪು ಬಣ್ಣಕ್ಕಿದೆ. ಸಾಮಾನ್ಯವಾಗಿ ಬಹಳ ಸಮಯದಿಂದ ಮನದಲ್ಲಿ ಹೆಪ್ಪುಗಟ್ಟಿರುವ ದ್ವೇಷ, ಅಸೂಯೆ, ಬೇರೆಯವರನ್ನು ಕ್ಷಮಿಸದೇ ಜಿದ್ದು ಸಾಧಿಸುವ ಬುದ್ಧಿ ಅಥವಾ ಮಡುಗಟ್ಟಿರುವ ಹಳೆಯ ದುಃಖ, ದುಮ್ಮಾನಗಳು, ಅಥವಾ ಯಾವುದಾದರೂ ಗಂಭೀರ ಸ್ವರೂಪದ ಖಾಯಿಲೆಗಳು ಇಂತವುಗಳೇನಾದರೂ ಇರುವ ವ್ಯಕ್ತಿಯ ಸುತ್ತ ಇರುವ ಬಣ್ಣ.

**ಶ್ವೇತ ವರ್ಣ:** ಬೇರೆಯ ಬೆಳಕಿನ ಶಕ್ತಿಯನ್ನು ಪ್ರತಿಫಲಿಸುವ ಗುಣ ಶ್ವೇತ ವರ್ಣಕ್ಕಿದೆ. ಬೆಳಕಿನ ಸ್ವಚ್ಛ ರೂಪವಾದ ಇದು ಸಾಮಾನ್ಯವಾಗಿ ಹೊಚ್ಚ ಹೊಸದಾದ, ಇನ್ನೂ ಯಾವ ಒಂದು ಭಾವನೆಯ ಶಕ್ತಿಗೂ ಒಳಪಡದ ಒಂದು ಬೆಳಕನ್ನು ಬಿಂಬಿಸುತ್ತದೆ. ಆಧ್ಯಾತ್ಮಿಕ, ಸ್ವಚ್ಛ, ಸತ್ಯ ಹಾಗು ದಿವ್ಯ ಚಿಂತನೆಗಳನ್ನು ಹೊಂದಿದ ವ್ಯಕ್ತಿಗಳಲ್ಲಿ ಈ ಬಿಳಿಯ ಬಣ್ಣದ ಪ್ರಭೆಯನ್ನು ಕಾಣಬಹುದು.
ದಿವ್ಯ ಪುರುಷರಲ್ಲಿ ಮತ್ತು ಗರ್ಭಿಣಿಯಾದ ಅಥವಾ ಸದ್ಯದಲ್ಲೇ ಗರ್ಭ ಧರಿಸುವ ಸ್ತ್ರೀಯರಲ್ಲಿ ಬಿಳಿಯ ಬೆಳಕಿನ ಕಿಡಿಗಳು/ಕಿರಣಗಳು ಹೊರಹೊಮ್ಮುತ್ತವಂತೆ.

**ಮಣ್ಣಿನ ಬಣ್ಣ:** ಮಣ್ಣು, ಮರ ಗಿಡ ಮತ್ತು ಖನಿಜಗಳಿಗೆ ಸಂಬಂಧಿಸಿದ್ದು. ಹೊರಗಡೆ ಕೆಲಸ ಮಾಡುವ ಕಾರ್ಮಿಕರಲ್ಲಿ, ಉದಾಹರಣೆಗೆ ಕಟ್ಟಡದ ಕಾಮಗಾರಿ, ಹೊಲ, ಗದ್ದೆ ಮುಂತಾದ ತರಹದ ಜಾಗಗಳಲ್ಲಿ ಕೆಲಸ ಮಾಡುವಂತ ವ್ಯಕ್ತಿಗಳ ಸುತ್ತ ಇರುವಂತ ಬಣ್ಣ. ಇದೊಂದು ಬಹಳ ಮುಖ್ಯವಾದ ಮತ್ತು ಶುಭಸೂಚಕವಾದ ಬಣ್ಣ.

**ಕೆಟ್ಟ ಕಂದು ಬಣ್ಣ:** ನಮ್ಮಲ್ಲಿರುವ ಅಭದ್ರತೆ, ಅನಿಶ್ಚಿತತೆಯನ್ನು ತೋರಿಸುತ್ತದೆ. ನಮ್ಮ ಬೇರೆಯ ಒಳ್ಳೆಯ ಶಕ್ತಿಗಳೆಲ್ಲಾ ಇದರ ಹಿಡಿತಕ್ಕೊಳಪಟ್ಟಿರುತ್ತವೆ.

**ಬೂದು ಬಣ್ಣ:** ಬೇರೆ ಬೆಳಕನ್ನು, ಶಕ್ತಿಯನ್ನು ತಡೆಗಟ್ಟುವಂತ ಗುಣವಿರುವ ಬಣ್ಣ. ಸಾಮಾನ್ಯಜ್ಞಾನ ಹೊಂದಿರುವ, ಮುಂಜಾಗರೂಕತೆಯುಳ್ಳ, ತಕ್ಕಮಟ್ಟಿಗೆ ವಿವೇಚನಾಶಕ್ತಿಯಿರುವಂತಹ ವ್ಯಕ್ತಿಯಲ್ಲಿ ಇರುವ ಒಂದು ಬಣ್ಣ. ಇದು ಒಬ್ಬ ಸಾಧಾರಣ ಮನುಷ್ಯನಲ್ಲಿ ಸಾಮಾನ್ಯವಾಗಿ ಇರುವಂತಹ ಬಣ್ಣವೂ ಹೌದು.

ಯಾವ ಯಾವ ಶರೀರದ ವಲಯದಲ್ಲಿ ಯಾವ ರೀತಿಯ ಬಣ್ಣಗಳಿವೆ ಎನ್ನುವುದು ನಮಗಂತೂ ಗೊತ್ತಾಗುವುದಿಲ್ಲ. ಹಾಗೇನಾದ್ರೂ ಗೊತ್ತಾಗುವ ಹಾಗಿದ್ದಿದ್ರೆ ನಮ್ಮ ನಮ್ಮ ನಿಜವಾದ ಬಣ್ಣ ಉಳಿದವರಿಗೆಲ್ಲಾ ಗೊತ್ತಾಗಿ ಬಣ್ಣ ಬಯಲಾಗಿ ಹೋಗಿರೋದು ಅಲ್ವಾ?!!!

ಶ್ರೀಯುತ ಬನ್ನಂಜೆಯವರು ಹೇಳುತ್ತಾ ಇದ್ದರು, ಅವರ ಊರಿನಲ್ಲಿ ಬೆಳ್ಳಿ ಕೆಲಸ ಮಾಡುವ ಒಬ್ಬ ಮುಸ್ಲಿಂ ವ್ಯಕ್ತಿ ಇದ್ದರಂತೆ. ಅವರದು ದೇವಾಲಯದ ದೇವರ ವಿಗ್ರಹಗಳಿಗೆ ಪ್ರಭಾವಳಿ ಮಾಡುವ ಕಸುಬು. ಆ ವ್ಯಕ್ತಿ ಯಾರೇ ಎದುರು ಬರಲಿ ಅವರ ಸುತ್ತ ಈ ತರಹದ ಬಣ್ಣಗಳಿವೆ ಎಂದು ಹೇಳುತ್ತಿದ್ದರಂತೆ. ಅವರಿಗೆ ಶರೀರದ ಸುತ್ತಲಿರುವ ಈ ಶಕ್ತಿಯ ಬಗ್ಗೆ ಕಿಂಚಿತ್ತೂ ಜ್ಞಾನವಿರಲಿಲ್ಲವಂತೆ. ತಮ್ಮ ಕಣ್ಣಿಗೇ ಏನೋ ರೋಗವಿರಬೇಕು ಎಂದುಕೊಂಡು ಕಣ್ಣಿನ ವೈದ್ಯರ ಹತ್ತಿರ ಹೋದರೂ ಯಾವ ಅನಾರೋಗ್ಯದ ಸೂಚನೆಯೂ ಕಾಣದೆ ವಾಪಾಸಾದರಂತೆ!!

ದೇಹವು ಹೊರಸೂಸುವ ಈ ಪ್ರಾಣಶಕ್ತಿಯನ್ನೇ ರೇಕಿ ಎನ್ನುವ Spiritual Healing Methodನಲ್ಲೂ ಬಳಸುವುದು.

**(ಚಿತ್ರಕೃಪೆ ಮತ್ತು ಸಹಾಯ:** ಅಂತರ್ಜಾಲ)

## ಬೆಂಗಳೂರೆಂಬ ದ್ರೌಪದಿ – ಬಸವರಾಜ. ಯಾದವಾಡ, ಬೆಂಗಳೂರು.

ಬೆಂಗಳೂರೆಂಬ ಈ ದ್ರೌಪದಿಯು ಐದು ವರ್ಷದಲಿ ಐದು ಪತಿಯರನ್ನು (ಸಿ.ಎಮ್‌ಗಳನ್ನು)..ಹೊಂದಿರಲು..
ವೀಪರೀತ ವಾಹನಗಳೆಂಬ ದುಶ್ಯಾಸನರು ದ್ರೌಪದಿಯ
ರಸ್ತೆಗಳೆಂಬ ವಸ್ತ್ರವನ್ನು ಇಂಚಿಂಚು ಬಿಡದೆ ಅಪಹರಣ ಮಾಡಿರಲು..
ಈ ಧರ್ಮರಾಯ ಮೌನದಿ ತಲೆ ತಗ್ಗಿಸಿ ತನ್ನ ಅಧಃಪತನವನ್ನು ತಾನೆ ನೋಡುತಿರುವನು..
ಪರ ರಾಜ್ಯ ಪಾಲನೆಯಲ್ಲಿ ತೊಡಗಿರುವ ಶ್ರೀ ಕೃಷ್ಣ ಪರಮಾತ್ಮಾ ಬೇಗನೆ ಕಣ್ಣು ತೆರೆಯಪ್ಪಾ..
ಈ ದ್ರೌಪದಿಯ ಮೇಲೆ ಒಂದಿಂಚಾದರೂ ವಸ್ತ್ರವ ಕರುಣಿಸಪ್ಪಾ.

**ಸ್ಫೂರ್ತಿ: ಧರಮ್–ದೇವೆಗೌಡ ಸರಕಾರ ಪತನದ ಪ್ರಸಂಗ**

## ಪಂಢರಪುರದ ಪಾದಯಾತ್ರೆ – ಅರುಣ ಆರ್. ಯಾದವಾಡ, ಬೆಂಗಳೂರು.

ಪಂಢರಪುರದ ಪಾಂಡುರಂಗನಿಗೆ ದೇಶಾದ್ಯಂತ ಸಾಕಷ್ಟು ಸಂಖ್ಯೆಯಲ್ಲಿ ಭಕ್ತರಿದ್ದಾರೆ. ಹಾಗೆಯೇ ನಮ್ಮ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ, ಗಡಿ ಭಾಗದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಭಕ್ತರಿದ್ದಾರೆ. ಈ ಭಕ್ತರ ವಿಶೇಷತೆ ಏನೆಂದರೆ, ಪ್ರತಿವರ್ಷ ಇವರು ಪಂಢರಪುರಕ್ಕೆ ನಡೆದುಕೊಂಡೇ ಹೋಗಿ ದರ್ಶನ ಪಡೆದುಕೊಂಡು ತಮ್ಮ ಯಾತ್ರೆಯನ್ನು ಮುಗಿಸಿಕೊಂಡು ಬರುತ್ತಾರೆ.ಇಂಥಾ ಒಂದು ಕಾಲ್ನಡಿಗೆಯ ಯಾತ್ರೆಯಿಂದ ಪಂಢರಪುರ ತಲುಪಲು ಸುಮಾರು 9–10 ದಿನಗಳು ಬೇಕು. ಅದಕ್ಕಾಗಿ ಬೇಕಾಗುವ ಎಲ್ಲ ಸರಂಜಾಮು, ಬಟ್ಟೆ–ಬರೆ, ಆಹಾರ ಇತ್ಯಾದಿಗಳನ್ನು ತೆಗೆದುಕೊಂಡೇ ಇವರು ದಾರಿಗುಂಟ ವಿಠಲ–ರುಕ್ಮಿಣಿಯರ ನಾಮವನ್ನು ನೆನೆಯುತ್ತ, ಭಜನೆ ಮಾಡುತ್ತ ಹೋಗುತ್ತಾರೆ. ಸಂಜೆಯಾದಾಗ ಸಮೀಪದ ಹಳ್ಳಿಯಲ್ಲಿ ವಸತಿ ಮಾಡಿ ಬೆಳಿಗ್ಗೆ ಮತ್ತೇ ತಮ್ಮ ಪ್ರಯಾಣ ಮುಂದುವರೆಸುತ್ತಾರೆ. ಇಂಥ ಗುಂಪುಗಳಲ್ಲಿ ಪುರುಷರು, ಸ್ತ್ರೀಯರು ಇದ್ದು, ಈ ವಿಠಲನ ಭಕ್ತರನ್ನು ಸಂತರೆಂದು ಕರೆಯುತ್ತಾರೆ. ಈ ಟಿವಿಯಲ್ಲಿ ಇತ್ತಿಚೇಗೆ ಮೂಡಿಬಂದ "ಮೂಡಲ ಮನೆ" ಧಾರಾವಾಹಿಯಲ್ಲಿ ಇಂಥ ಪಂಢರಪುರ ಪಾದಯಾತ್ರೆಯ ಬಗ್ಗೆ ಪ್ರಸ್ತಾಪ ಇದೆ.

## ಒನ್ ಸೆಕ್.. ! – ಪ್ರಕಾಶ ಸಿ. ರಾಜಗೋಳಿ, ಬೆಂಗಳೂರು.

ಸಾಫ್ಟವೇರ್ ಇಂಜಿನೀಯರ್ ಒಬ್ಬ ಯಾವುದೊ ಪ್ರೊಗ್ರಾಮ್ ಬರೆಯೊದ್ರಲ್ಲೊ, ಕೋಡಿಂಗಿನಲ್ಲೊ ಬ್ಯೂಸಿಯಾಗಿದ್ದಾಗ ಹಿಂದಿನಿಂದ ಯಾರೋ ಕರೆದಂತಾಯಿತು. ಅಭ್ಯಾಸ ಬಲದಿಂದ ಆತ " ಒನ್ ಸೆಕ್" ಅಂದು ಸ್ವಲ್ಪ ಸಮಯದ ನಂತರ ಕಂಟ್ರೋಲ್+ಆಲ್ಟ್+ಡೆಲ್ ಒತ್ತಿ ಹಿಂತಿರುಗಿ ನೋಡಿದ. ಸಾಕ್ಷಾತ್ ಸೃಷ್ಟಿಕರ್ತ ಬ್ರಹ್ಮ ಎದುರಿಗೆ ನಿಂತಿದ್ದಾನೆ. "ಮಗು ನಿನ್ನ ಪ್ರೊಗ್ರಾಮ್ಮಿಂಗ್ ಕಲೆಗೆ ನಾನು ಮೆಚ್ಚಿದ್ದೇನೆ ಏನು ವರ ಬೇಕು ಕೇಳಿಕೊ" ಎಂದಾಗ ಆನಂದ ತುಂದಿಲಿತನಾದ ಆತ

"ಎಲೆ ಸೃಷ್ಟಿ ಕರ್ತ ಬ್ರಹ್ಮನೆ... ನನ್ನ ಪ್ರೊಗ್ರಾಮುಗಳು ಎರ್ರರ್ ಫ್ರೀ ಆಗಿರಲಿ,
ಕೋಡಿಂಗುಗಳು ಬಗ್ ಫ್ರೀ ಆಗಿರಲಿ,
ನನ್ನ ಪಿಎಮ್ ನನ್ನ ಕೆಲಸದಲ್ಲಿ ಪೀಡಿಸದೆ ನನಗೆ ಇಂಕ್ರಿಮೆಂಟು, ಪ್ರೊಮೊಷನ್ನು ಕೊಡುತ್ತಿರಲಿ,
ನಾನು ಲವ್ ಮಾಡುತ್ತಿರುವ ಹುಡುಗಿ ನನಗೇ ಒಲಿಯಲಿ,
ತಿಂಗಳು ಕೊನೆಗೆ ಕೂಡ ನನ್ನ ವಾಲೆಟ್ ತುಂಬಿರಲಿ,
ಯಾವಾಗ ಸ್ವೈಪ್ ಮಾಡಿದರೂ ನನ್ನ ಕ್ರೆಡಿಟ್ ಕಾರ್ಡ್ ಕೈಕೊಡದಿರಲಿ,
ವೀಕ್ ಎಂಡಿನಲ್ಲಿ ಕ್ಲೈಂಟ್ ಆಗಲಿ, ಪಿಎಮ್ ಆಗಲಿ ಕೆಲಸಕ್ಕೆ ಬಾ ಅಂತ ಕಿರಿಕ್ ಮಾಡದಿರಲಿ,
ನಾನು ಎಲ್ಲೇ ಬೆಂಗಳೂರಿನಲ್ಲಿ ಗಾಡಿ ಓಡಿಸಿದರೂ ಟ್ರಾಫಿಕ್ ಜಾಮ್ ಇಲ್ಲದೆ ಇರಲಿ,
ಬೀರು ಸಿಗರೇಟುಗಳ ರೇಟು ಇಳಿಯಲಿ, ಎಲ್ಲೆಡೆ ಬರ್ಡ್ ಫ್ಲೂ ಇಲ್ಲದ ಚಿಕನ್ ಸಿಗಲಿ,
ರಾತ್ರಿ ಹನ್ನೊಂದುವರೆ ನಂತರವೂ ಬಾರುಗಳು ಓಪನ್ನಾಗಿರಲಿ,
ಬೆಂಗಳೂರಿನಲ್ಲಿ ಇತರ ಭಾಷಿಕರಿಗಿಂತ ಕನ್ನಡಿಗರಿಗೆ ಜಾಸ್ತಿ ಒಳ್ಳೆಯ ಅವಕಾಶಗಳು ಸಿಗಲಿ ಹಾಗೂ ಅವರು ಅದರ ಸದುಪಯೋಗ ಪಡೆಯಲಿ_.. . . . . ."

ಒಂದು ಕ್ಷಣ ಕಕ್ಕಾಬಿಕ್ಕಿಯಾದ ಬ್ರಹ್ಮ ತನ್ನ ನಾಲ್ಕೂ ತಲೆಗಳನ್ನು at a time ಕೆರೆದುಕೊಂಡು,

ವಿಚಾರ ಮಾಡಿ...

ವಿಚಾರ ಮಾಡಿ...

ವಿಚಾರ ಮಾಡಿ...

ಕೊನೆಗೆ "ಒನ್ ಸೆಕ್" ಅಂತ ಹೇಳಿ ಅಂತರ್ಧಾನನಾದ.
ಅವನ ಒನ್ ಸೆಕ್ ಮುಗಿಯಿತೋ ಇಲ್ಲವೋ ಗೊತ್ತಾಗಲಿಲ್ಲ.
ಆದರೆ ಬ್ರಹ್ಮನ ತಥಾಸ್ತು ಪಡೆಯಲು ನಮ್ಮ ಸಾಫ್ಟವೇರ್ ಇಂಜಿನೀಯರ್ ಇನ್ನೂ ಕಾಯುತ್ತಲೆ ಇದ್ದಾನೆ.....

## ಸಾವು – ಹತ್ತು ಹಲವು ವಿಧ – ಅರುಣ. ಆರ್. ಯಾದವಾಡ, ಬೆಂಗಳೂರು

ಇದು ಸುಮಾರು 14 ವರ್ಷಗಳ ಹಿಂದಿನ ಮಾತು. ನಾನು, ಗುಡ್ಯಾ (ಶ್ರೀನಿವಾಸ ಗುಡಿ) ಹಾಗೂ ಆನ್ಯಾ (ಆನಂದ ಹಿರೇಮಠ) ತೃತೀಯ ಬಿ.ಇ.ಯಲ್ಲಿ ಓದುತ್ತಿದ್ದೆವು ಹಾಗು ಸಾಮಾನ್ಯವಾಗಿ ಒಂದೇ ಡೆಸ್ಕಿನಲ್ಲಿ ಕೂಡ್ರುತ್ತಿದ್ದೆವು. ಕಾಲೇಜು ಎಂದ ಮೇಲೆ ಎಲ್ಲಾ ತರಹದ ಲೆಕ್ಚರರ್ಸ್ ಇರತಿದ್ದರು. ಕೆಲವೊಂದು ಪಿರೀಯಡ್ ಅಂತೂ ತುಂಬಾ ಬೋರ್ ಹೊಡೆಸುತ್ತಿದ್ದವು. ಆದರೂ ಅಟ್ಟೆಂಡೆನ್ಸ್ ಸಲುವಾಗಿಯಾದರೂ ಕ್ಲಾಸ್ಸಿಗೆ ಕೂಡ್ರಲೇ ಬೇಕಾಗಿತ್ತು.ಬೋರು ಹೊಡೆದರೆ ಸಮಯ ಕಳೆಯುವ ಸಲುವಾಗಿ ಏನಾದರೂ ಮಾಡಲೇಬೇಕಲ್ಲಾ..? ನಮ್ಮ ಬಳಗದ ಕವಿ ಗುಡ್ಯಾ ಅಲ್ಲೇ ತಲೆ ಕೆಳಗೆ ಹಾಕಿ ಯಾವುದೋ ಒಂದು ಕವನ ಬರೀತಿದ್ದ. ನಮಗೆ ಆಮೇಲೆ ಓದಿ ಹೇಳುತ್ತಿದ್ದ. ಒಮ್ಮೊಮ್ಮೆ ಅವುಗಳನ್ನು ಆಕಾಶವಾಣಿ ಧಾರವಾಡ ಕೇಂದ್ರಕ್ಕ ಹೋಗಿ ಓದಿಯೂ ಬರತಿದ್ದ. ಅದಕ್ಕೆ ಆಕಾಶವಾಣಿ ಸೂಕ್ತ ಸಂಭಾವನೆಯನ್ನು ನೀಡುತ್ತಿತ್ತು. ಆದರ ನಾನು, ಆನ್ಯಾ ಅಂಥಾ ಮಹಾ ಬರಹಗಾರರು ಏನು ಆಗಿರಲಿಲ್ಲ. ಆದರೂ ಏನಾದರೂ ಇಂಟರೆಸ್ಟಿಂಗ್ ಆದದ್ದನ್ನ ಮಾಡತಾ ಕೂಡತಿದ್ದೆವು. ಹಿಂಗ ನಡದಿರಬೇಕಾದರ ಒಂದ ದಿನಾ ನಾನು 'ಅಲ್ಲಲೇ ಆನ್ಯಾ, ಕನ್ನಡದೊಳಗ ಸತ್ತರು ಅನ್ನೋದನ್ನ ಎಷ್ಟು ವಿಧವಾಗಿ ಹೇಳಬಹುದು..? " ಅಂತಾ ಕೇಳಿದೆ. ಅದಕ್ಕ ಆನ್ಯಾ "ಅಲ್ಲಾ ದೋಸ್ತಾ, ನಾವ್ಯಾಕ ಇದನ್ನ ಲಿಸ್ಟ್ ಮಾಡಬಾರದು..? ಬರದ ಬಿಡು .. ನೋಡೊಣು" ಅಂದ. ನನಗೂ ಅಷ್ಟೇ ಬೇಕಾಗಿತ್ತು. 'ಸಾವು' ಎಂಬ ಒಂದು ಸರಳ ಶಬ್ದದೊಂದಿಗೆ ನಮ್ಮ ಕನ್ನಡ Vocabulary Exploration ಶುರು ಆಗೇ ಬಿಟ್ಟಿತು. ಆಗ ಇದು ನಮಗೆ ಬರೇ ಹಾಸ್ಯದ ವಸ್ತು ಆಗಿತ್ತು. ಆದರ ನೋಡತಾ ನೋಡತಾ ಈ ಕನ್ನಡ ಭಾಷೆ ಎಷ್ಟು Powerful ಆಗಿದೆ ನಮಗೆಯೇ ಅರಿವಾಯಿತು.

ಆಗ ನಾವು ಸಂಗ್ರಹಿಸಿದ ಎಲ್ಲಾ ಶಬ್ದ, ವಾಕ್ಯಗಳು ಈಗ ನೆನಪಿನಲ್ಲಿ ಇಲ್ಲ. ಆದರೂ ಸಾಧ್ಯವಾದಷ್ಟನ್ನು ಇಲ್ಲಿ ಕೊಡಲು ಪ್ರಯತ್ನಿಸಿದ್ದೇನೆ. ಓದಿ ನೋಡ್ರಿ . ಇಂಟರೆಸ್ಟಿಂಗ್ ಐತಿ ಅನಿಸಿದರೆ ದಯಮಾಡಿ ತಿಳಿಸ್ರಿ.

- ಆ ದಿನ ಆ ಮನೆಯ ದೀಪ ಆರಿ ಹೋಯಿತು
- ಆಗ ಎಳೆದುಕೊಂಡ ಆ ದೀರ್ಘ ಉಸಿರು ಮತ್ತೆ ಹೊರಬರಲಿಲ್ಲ
- ಐಕ್ಯವಾದರು
- ಅಕಾಲ ಮರಣಕ್ಕಿಡಾದರು
- ಆಕಸ್ಮಿಕ ನಿಧನ ಹೊಂದಿದರು
- ಅಲ್ಲಿ ಕುಸಿದವರು ಮತ್ತೇ ಮೇಲೆಳಲಿಲ್ಲ
- ಅರಳುವ ಮುನ್ನವೇ ಬಾಡಿ ಹೋದರು
- ಅಸು ನೀಗಿದರು
- ಅವರನ್ನ ಎತ್ಹಾಕ್ಬುಟ್ರು
- ಅವರು ಇನ್ನಿಲ್ಲ.
- ಅವರು ಮುಚ್ಚಿದ ಕಣ್ಣು ಮತ್ತೇ ತೆರೆಯಲಿಲ್ಲ
- ಬಲಿಯಾದರು
- ಬಾರದ ಲೋಕಕ್ಕೆ ತೆರಳಿದರು
- ಬೆಂಕಿಯ ಜ್ವಾಲೆಗೆ ಆಹುತಿಯಾದರು
- ಭಾರಿ ಸ್ಫೋಟಕ್ಕೆ ಛಿದ್ರ–ಛಿದ್ರವಾದರು
- ಚಕ್ರಕ್ಕೆ ಸಿಲುಕಿ ನೊರೆ ನೊರೆಯಾದರು
- ದುರ್ಮರಣವನ್ನಪ್ಪಿದರು
- ಗಲ್ಲಿಗೇರಿಸಲ್ಪಟ್ಟರು

- ಹತರಾದರು
- ಹೊತ್ತಿ ಉರಿದು ಅವಶೇಷವಾದರು
- ಹೃದಯ ಸ್ತಂಭನವಾಯಿತು
- ಹೃದಯಾಘಾತ ಹೊಂದಿದರು
- ಹುತಾತ್ಮರಾದರು
- ಇಹಲೋಕ ಯಾತ್ರೆಯನ್ನು ಮುಗಿಸಿದರು
- ಇನ್ನು ಮೇಲೆ ಅವರು ಬರೀ ನೆನಪು ಮಾತ್ರ
- ಜಲ ಸಮಾಧಿ ಹೊಂದಿದರು
- ಜವರಾಯ ಅವರನ್ನು ಕರೆದುಕೊಂಡು ಹೋಗೇ ಬಿಟ್ಟ
- ಕೈಲಾಸ ವಾಸಿಗಳಾದರು
- ಕಾಲವಾದರು
- ಕಣ್ಮರೆಯಾದರು
- ಕೊನೆಯುಸಿರೆಳೆದರು
- ಕ್ರಿಸ್ತನಿಗೆ ಪ್ರಿಯವಾದರು
- ಮೇಲಕ್ಕೆ ಹೋದರು
- ಮುಟ್ಟಿ ನೋಡಿದರೆ ಅವರು ನಿಶ್ಚಲರಾಗಿದ್ದರು. ದೇಹ ತಣ್ಣಗಾಗಿತ್ತು.
- ನೆಗೆದು ಬಿದ್ರು
- ನಿಧನರಾದರು
- ಪ್ರಾಣ ಪಕ್ಷಿ ಹಾರಿ ಹೋಯಿತು
- ಪ್ರಾಣವನ್ನೇ ಬಲಿ ಕೊಟ್ಟರು
- ರೈಟ್ ಹೇಳಿದ್ರು
- ಸತ್ತರು
- ಸಾವನ್ನಪ್ಪಿದರು
- ಸಾವನ್ನು ಹೊಂದಿದರು
- ಸಾವಿಗೀಡಾದರು
- ಶವವಾಗಿ ಮರಳಿದರು
- ಸ್ವರ್ಗ ವಾಸಿಗಳಾದರು
- ಟಿಕೆಟ್ ತೆಗೆಸಿದ್ರು
- ವೈಕುಂಠ ವಾಸಿಗಳಾದರು
- ಯಮಲೋಕಕ್ಕೆ ತೆರಳಿದರು

# ತಾಹೀರ ಸನದಿ – ಟೆನಿಸ್ ಜೀವನದ ಆರಂಭದಲ್ಲಿ ..



ನಮ್ಮ ಬಳಗದ ಪ್ರಮುಖ ತಾರೆಯರಲ್ಲಿ ಒಬ್ಬರಾದ ತಾಹೀರ್ ಓದಿದ್ದು, ಬೆಳೆದಿದ್ದು ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ. ಚಿಕ್ಕಂದಿನಿಂದಲೂ ಇದ್ದ ಟೆಬಲ್ ಟೆನ್ನಿಸ್ ಆಡುವ ಹವ್ಯಾಸ ಇವರನ್ನು ಕರೆತಂದಿದ್ದು ಧಾರವಾಡಕ್ಕೆ. ಅಲ್ಲಿ ಈ ಕ್ರೀಡೆಯಲ್ಲಿ ಸಾಕಷ್ಟು ಕೃಷಿ ಮಾಡಿದ ತಾಹೀರ್ ಅದರಲ್ಲಿ ಗಣನೀಯ ಯಶಸ್ಸನ್ನು ಕಂಡರು. ಜೆ.ಎಸ್.ಎಸ್. ಕಾಲೇಜು, ಧಾರವಾಡ ಹಾಗು ಹುಬ್ಬಳ್ಳಿಯ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿರುವ ತಾಹೀರ್ ಟೆಬಲ್ ಟೆನ್ನಿಸ್‌ನಲ್ಲಿ ರಾಜ್ಯ ಮಟ್ಟದ ಆಟಗಾರನಾಗಿ ಬೆಳೆದು ಕರ್ನಾಟಕ ಹಾಗೂ ಗೋವ ರಾಜ್ಯಗಳನ್ನು ಸಾಕಷ್ಟು ಸಲ ಪ್ರತಿನಿಧಿಸಿದ್ದಾರೆ. ಕಳೆದ ಸುಮಾರು ಒಂದು ದಶಕದಿಂದ ಸಾಫ್ಟ್‌ವೇರ್ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಇವರು ಈಗ ಮುದ್ದಿನ ಮಡದಿ ಶ್ರೀಮತಿ ನೂರ್ ಅವರೊಂದಿಗೆ ಇದೀಗ ಆಗಮಿಸಿರುವ ತಮ್ಮ ಮುದ್ದು ಮಗನ ನಾಮಕರಣದ ಗಡಿಬಿಡಿಯಲ್ಲಿದ್ದಾರೆ. ಕಳೆದ ಸಂಚಿಕೆಯಲ್ಲಿ ಅವರು ಲೇಖನವೊಂದನ್ನು ಓದಿದಿರಿ. ಈ ಸಲ ಅವರ ಟೆನಿಸ್ ಯಾತ್ರೆ ಆರಂಭವಾದಾಗ ಇಪ್ಪತ್ತು ವರ್ಷಗಳ ಹಿಂದೆಯೇ ಸುಧಾ ವಾರಪತ್ರಿಕೆಯಲ್ಲಿ ಬಂದ ಒಂದು ಲೇಖನ ಓದಿ. 'ಬೆಳೆವ ಸಿರಿವನ್ನು ಮೊಳಕೆಯಲ್ಲೆ ನೋಡು' ಎಂಬಂತೆ ತಾಹೀರ್ ಅವರ ಬಗ್ಗೆ ಆಗಲೇ ಪತ್ರಿಕೆಗಳಲ್ಲಿ ಸುದ್ದಿಗಳು ಪ್ರಕಟವಾಗಿದ್ದವು.



ಆಟದ ಬಯಲು

ಟೇಬಲ್ ಟೆನಿಸ್

## ಇಬ್ಬರು ಪ್ರತಿಭಾವಂತರು


ಈ ಇಬ್ಬರು ಪ್ರತಿಭಾವಂತ ಟೇಬಲ್ ಟೆನಿಸ್ ಬಾಲಕರನ್ನು ಭೇಟಿಯಾಗಿ ಇವರಲ್ಲಿರುವ ವ್ಯತ್ಯಾಸ ಎಂದರೆ ಒಬ್ಬನಿಗೆ ಪ್ರಶಸ್ತಿ ಗೆಲ್ಲುವುದು ಸುಲಭವೆನಿಸತೊಡಗಿದ್ದರೆ, ಇನ್ನೊಬ್ಬನಿಗೆ ತನ್ನ ಗೆಲುವಿಗೆ ಅಡ್ಡವಾಗುತ್ತಿರುವ ಮೊದಲಿನವನನ್ನು ಮೀರಿಸುವುದರತ್ತ ಗಮನ. ಸಾಮ್ಯ ಎಂದರೆ– ಇಬ್ಬರೂ ಗ್ರಾಮೀಣ ಭಾಗದವರು. 350 ಕ್ಕೂ ಹೆಚ್ಚು ಕಿಲೊಮೀಟರ್ ಪಯಣಿಸಿ, ಬೆಳಗ್ಗೆ ಬೆಂಗಳೂರು ತಲುಪಿ 4-5 ದಿನ ಸತತವಾಗಿ ಟೇಬಲ್ ಟೆನಿಸ್ ಆಡಬೇಕು. ಮುಖ್ಯವಾಗಿ ಖರ್ಚಿಗೆ ಹಣ ಬೇಕು. ಖರ್ಚು ಸ್ವಲ್ಪ ಹೊರೆಯಾದರೂ ಮಕ್ಕಳ ಆಟಕ್ಕೆ ಹೆಚ್ಚಿನ ಪ್ರೋತ್ಸಾಹ ಮನೆಯವರಿಂದ.

ಸೊಂಡೂರು ತಾಲ್ಲೂಕು ದೋಣಿಮಲೈನ ಮಾಸ್ಟರ್ ವಾಸು ಹಾಗೂ ಧಾರವಾಡದಲ್ಲಿ ಓದುತ್ತಿರುವ ರಾಮದುರ್ಗದ ತಾಹಿರ್ ಸನದಿ ಬೆರಳೆಣಿಕೆಯಲ್ಲಿರುವ ಗ್ರಾಮಾಂತರ ಭಾಗದ ಟೇಬಲ್ ಟೆನಿಸ್ ಆಟಗಾರರಲ್ಲಿ ದಿನದಿಂದ ದಿನಕ್ಕೆ ಪ್ರಗತಿ ಸಾಧಿಸುತ್ತಿರುವ ಆಟಗಾರರು. ಇಬ್ಬರು ಆಟಗಾರರು ಇದೇ ವರ್ಷ ಸಬ್-ಜೂನಿಯರ್‌ನಿಂದ ಜೂನಿಯರ್ ಮಟ್ಟಕ್ಕೆ ಬೆಳೆದವರು.

ಕಳೆದ ಮೂರು ವರ್ಷಗಳಲ್ಲಿ ಮಾಸ್ಟರ್ ವಾಸು ಸಬ್-ಜೂನಿಯರ್ ವಿಭಾಗದ ಸಾರ್ವಭೌಮ. ಅಲ್ಲೊಂದು ಇಲ್ಲೊಂದು ಬಿಟ್ಟರೆ ವಾಸು ಸೋತಿದ್ದೇ ವಿರಳ. ರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ನಿರೀಕ್ಷಿತ ಯಶಸ್ಸು ಸಿಗದಿದ್ದರೂ, ಎರಡು ವರ್ಷ ಸತತ ರಾಜ್ಯ ನಂಬರ್-1 ಆಗಿದ್ದ ವಾಸು ಈ ವರ್ಷದಿಂದ ಜೂನಿಯರ್ ವಿಭಾಗದಲ್ಲೂ ತನ್ನ ಮಟ್ಟ ಕಾಯ್ದುಕೊಳ್ಳುವ ಛಲ ತೊಟ್ಟಿದ್ದಾನೆ.

ತನ್ನ ಒಂಬತ್ತನೇ ವಯಸ್ಸಿನಲ್ಲಿ ಟೇಬಲ್ ಟೆನಿಸ್ ಆಡಲು ಆರಂಭಿಸಿದ ವಾಸುಗೆ ಕ್ರೀಡಾಸಕ್ತಿಯ ಮೊದಲ ಪಾಠ ಮನೆಯಲ್ಲೇ. ತಂದೆ ಎಂ. ಸುಬ್ಬರಾವ್ 1959-60 ರಲ್ಲಿ ಆಂಧ್ರಪ್ರದೇಶ ಜೂನಿಯರ್ ಬಾಲ್‌ಬ್ಯಾಡ್ಮಿಂಟನ್ ತಂಡದ ಪರ ಆಡಿದವರು. 1983 ರಲ್ಲಿ ರಾಜ್ಯ ರ‍್ಯಾಂಕಿಂಗ್ ಟೂರ್ನಿಗಳಲ್ಲಿ ಆಡಲು ಆರಂಭಿಸಿದ ವಾಸು ಮೊದಲ ವರ್ಷವೇ ಗಮನ ಸೆಳೆದ. ಪರಿಶ್ರಮಕ್ಕೆ ಪ್ರತಿಫಲವಾಗಿ ಸಬ್-ಜೂನಿಯರ್‌ನಲ್ಲಿ 1983-84ರ ಸಾಲಿಗೆ ನಾಲ್ಕನೇ ಕ್ರಮಾಂಕ. ಈ ಹಂತದಲ್ಲಿ ಹುಬ್ಬಳ್ಳಿಯ ಜಿ. ಪುರುಷೋತ್ತಮರಾವ್ (ಹುಬ್ಬಳ್ಳಿ ಕಂಡಿರುವ ಕೆಲವೇ ಅತ್ಯುತ್ತಮ ಆಟಗಾರರಲ್ಲಿ ಒಬ್ಬರು) ಅವರಿಂದ ಅಮೂಲ್ಯ ತರಬೇತಿ ದೊರೆಯಿತೆಂದು ವಾಸು ನೆನಸುತ್ತಾನೆ. ಈಗ ಹಿಂದಿನ ರಾಜ್ಯ ಆಟಗಾರ ಜಯಸಿಂಹ ಅವರಿಂದ ಮಾರ್ಗದರ್ಶನ.

ಮರು ವರ್ಷ, ಅಂದರೆ–1984-85 ವಾಸು ಗುರಿ ಈಡೇರಿದ ವರ್ಷ. ಸತತ 5 ರ‍್ಯಾಂಕಿಂಗ್ ಟೂರ್ನಿಗಳಲ್ಲಿ ಚಾಂಪಿಯನ್ ಆದ ವಾಸು ಕ್ರಮಾಂಕದಲ್ಲಿ ನಂಬರ್-1 ಸ್ಥಾನಕ್ಕೆ ಬಡ್ತಿ ಪಡೆದ. ರಾಜ್ಯ ಚಾಂಪಿಯನ್ ಆದ ವಾಸು



1985 ರಲ್ಲೂ ಇದೇ ಸಾಧನೆ ಕಾಯ್ದುಕೊಂಡನು. ಆಡಿದ 6 ಟೂರ್ನಿಗಳಲ್ಲಿ ಒಂದರಲ್ಲಿ ಮಾತ್ರ ಸೋಲು. ಕಳೆದ ಜುಲೈನಲ್ಲಿ ಮೀರತ್‌ನಲ್ಲಿ ನಡೆದ ಇಂಟಾಚ್ ಕಪ್ ಮಿನಿ ಜೂನಿಯರ್ ರಾಷ್ಟ್ರೀಯ ಟೂರ್ನಿಯಲ್ಲಿ ವಾಸು ಜೂನಿಯರ್ ವಿಭಾಗದಲ್ಲಿ ಮೂರನೇ ಹಾಗೂ ಸಬ್-ಜೂನಿಯರ್ ವಿಭಾಗದಲ್ಲಿ ಎರಡನೇ ಸುತ್ತಿನಲ್ಲೇ ನಿರ್ಗಮಿಸಿದರೂ, ಆ ಸೋಲು ರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಹೆಚ್ಚಿನ ಪರಿಶ್ರಮ ಅಗತ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದೆ.


ಕೇಂದ್ರೀಯ ವಿದ್ಯಾಲಯದಲ್ಲಿ ಹತ್ತನೇ ವರ್ಗದಲ್ಲಿ ಓದುತ್ತಿರುವ ವಾಸುಗೆ 1985ರ ಅಕ್ಟೋಬರ್‌ನಲ್ಲಿ ಪಟ್ನಾದಲ್ಲಿ ನಡೆದ ಕೇಂದ್ರೀಯ ವಿದ್ಯಾಲಯ ರಾಷ್ಟ್ರೀಯ ಟೂರ್ನಿಯಲ್ಲಿ ಹೈದರಾಬಾದ್ ವಲಯದ ನಾಯಕತ್ವ. ಶಾಲಾ ಕ್ರೀಡಾ ಫೆಡರೇಷನ್ ನಡೆಸುವ ರಾಷ್ಟ್ರೀಯ ಕೂಟದಲ್ಲಿ ಕೇಂದ್ರೀಯ ವಿದ್ಯಾಲಯ ಸಂಘಟನವನ್ನು ಪ್ರತಿನಿಧಿಸಿದ್ದ ವಾಸುಗೆ ಶಾಲೆಯ ಪ್ರಾಂಶುಪಾಲರಿಂದ ಸಕಲ ಪ್ರೋತ್ಸಾಹ. ವಾಸು ಓದಿನಲ್ಲೂ ಕೂಡ ಮುಂದು.

"ಜೂನ್ ಬಂತೆಂದರೆ ಸುಮಾರು 5000 ರೂಗಳನ್ನು ವಾಸುವಿನ ಟೇಬಲ್ ಟೆನಿಸ್ ಖರ್ಚಿಗಾಗಿಯೇ ತೆಗೆದಿಟ್ಟುಬಿಡುತ್ತೇನೆ." ಎಂದು ಹೇಳಿದ ಎಂ. ಸುಬ್ಬರಾವ್‌ಗೆ ಮಗನ ಪ್ರಗತಿ ಬಗ್ಗೆ ಅಪಾರ ಕಾಳಜಿ. ವಾಸು ಜೊತೆ ಪ್ರತಿಯೊಂದು ಟೂರ್ನಿಗೂ ಹೋಗುವ ಅವರು ಅನುಭವಿ ಆಟಗಾರರ ಜೊತೆ ಮಗನ ಆಟದ ಬಗ್ಗೆ ಚರ್ಚಿಸುತ್ತಾರೆ. ವಾಸುವಿನ ಪ್ರತಿಭಾ ವಿಕಾಸಕ್ಕಿರುವ ಅಡ್ಡಿ ಎಂದರೆ– ಪೈಪೋಟಿಯ ಕೊರತೆ. ದೋಣಿಮಲೈನಲ್ಲಿ ಹೆಚ್ಚಿನ ಸ್ಪರ್ಧಾತ್ಮಕ ಅನುಭವ ದೊರೆಯುವುದಿಲ್ಲ. ಇದು ವಾಸುವಿನದಷ್ಟೇ ಅಲ್ಲ, ಎಲ್ಲ ಗ್ರಾಮೀಣ ಕ್ರೀಡಾಪಟುಗಳ ದೊಡ್ಡ ಸಮಸ್ಯೆ.



ಮಾಸ್ಟರ್ ವಾಸು- ದೋಣಿ ಮಲ್ಲೈನ ಈ ಹುಡುಗ ಗ್ರಾಮಾಂತರ ಪ್ರತಿಭೆ

ರಾಮದುರ್ಗದ ತಾಹಿರ್ ಸನದಿ ಗ್ರಾಮಾಂತರದ ಇನ್ನೊಂದು ಪ್ರತಿಭಾ ಕುಡಿ.



ಬೆಂಗಳೂರಿನ ಪ್ರಮುಖ ಆಟಗಾರರನ್ನು ರಾಮದುರ್ಗ ಎಲ್ಲಿದೆಯೆಂದು ಕೇಳಿ. ತಟ್ಟನೆ ಉತ್ತರ ಬರುವುದಿಲ್ಲ. ಅಲ್ಲಿಯ ಆಟಗಾರನೊಬ್ಬ ಬೆಂಗಳೂರಿಗೆ ಬಂದು ಅದಿ ಗಮನ ಸೆಳೆದಾಗ ಅವರು ಮೊದಲು ಕೇಳಿದ್ದು, ಆ ಊರು ಎಲ್ಲಿದೆಯೆಂದು. ತಾಹಿರ್ ಸನದಿ ಒಂದೇ ವರ್ಷದ ಅವಧಿಯಲ್ಲಿ ಚಾಂಪಿಯನ್ ಆಗದಿದ್ದರೂ, ತನ್ನಲ್ಲೂ ಪ್ರತಿಭೆ ಇದೆ ಎಂಬುದನ್ನು ತೋರಿಸಿಕೊಟ್ಟ ಆಟಗಾರ.

"ಹುಡುಗ ಭಲೇ ಅದಾನೋ. ಆದರೆ ಧಾರವಾಡದಲ್ಲೇ ಇದ್ದರೆ ಅಲ್ಲಿಯ ಹೀರೋ ಆಗಿ ಮಾತ್ರ ಉಳೀತಾನ" ಎಂದು ಧಾರವಾಡದಿಂದ ಬೆಂಗಳೂರಿಗೆ ಬಂದು ನೆಲೆಸಿ ರಾಜ್ಯದ ಪ್ರಮುಖ ಆಟಗಾರರೊಡನೆ ಸರಿಸಮಾನಾಗಿ ನಿಂತ ಆಟಗಾರ ಅಶ್ಫಾಕ್ ಕೇದಾರಿ, ತಾಹಿರ್ ಬಗ್ಗೆ ಹೇಳಿದ ಮಾತಿದು.

ತಾಹಿರ್ ಇತ್ತೀಚೆ ಕೆ. ಜಿ. ಎಸ್. ಕ್ಲಬ್ ರ‍್ಯಾಂಕಿಂಗ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದವರ ಸಾಲಿಗೆ ಸೇರಿದ. ಪ್ರಶಸ್ತಿ ಗೆದ್ದುದವರ (ಹಾಫ್-ಮಿಡಲ್ಸ್) ವಿಭಾಗದಲ್ಲಿ. ತಾಹಿರ್‌ಗೆ ವಾಯುಸ್ ಜೊತೆ ಡಬಲ್ಸ್ ಪ್ರಶಸ್ತಿ, ಇಬ್ಬರೂ ಧಾರವಾಡದ ಜಸ್ಟಿಸ್ ಕ್ಲಬ್ ಆಟಗಾರರು. ಹಲವು ವರ್ಷಗಳ ಹಿಂದೆ ಹುಬ್ಬಳ್ಳಿ- ಧಾರವಾಡದ ನಂಬರ್-1 ಆಟಗಾರರಾಗಿದ್ದ ರವಿ ಒಡೆಯರ್ ಅವರಿಂದ ಇವರಿಗೆ ತರಬೇತಿ.

ಕಳೆದ ವರ್ಷ ಸಬ್-ಜೂನಿಯರ್ ವಿಭಾಗದಲ್ಲಿ ನಾಲ್ಕನೇ ಕ್ರಮಾಂಕದಲ್ಲಿದ್ದ ತಾಹಿರ್ ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದ.

ಸಬ್-ಜೂನಿಯರ್‌ಗಿಂತ ಜೂನಿಯರ್ ವಿಭಾಗದಲ್ಲಿ ಈ ವರ್ಷ ಹೆಚ್ಚಿನ ಪೈಪೋಟಿ ಎದುರಿಸಬೇಕೆಂಬುದನ್ನು ಅರಿತಿರುವ ತಾಹಿರ್ ಆ ದಿಸೆಯಲ್ಲಿ ತೀವ್ರ ಅಭ್ಯಾಸ ನಡೆಸುವ ಪಣ ತೊಟ್ಟಿದ್ದಾರೆ. ಪ್ರೊ| ಎ. ಎ. ಸನದಿ ಅವರೂ ಕೂಡ ಮಗನ ಆಟದ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿದ್ದು, ಶಿಕ್ಷಣದ ಬಗ್ಗೆ ಯೋಚನೆ ಮಾಡುವುದಿಲ್ಲ. ಕೆ. ಇ. ಬೋರ್ಡ್ಸ್ ಹೈಸ್ಕೂಲಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿ ತಾಹಿರ್‌ಗೆ ಟೆನಿಸ್, ಕೇರಂ ಹಾಗೂ ಕ್ರಿಕೆಟ್‌ನಲ್ಲೂ ಆಸಕ್ತಿ. ಆದರೆ ಗುರಿ ಇರುವುದು ಒಮ್ಮೆಯಾದರೂ ರಾಜ್ಯ ಚಾಂಪಿಯನ್ ಆಗಬೇಕೆನ್ನುವುದು. ಆದರೆ ಅದು ಧಾರವಾಡ ಪೇಡೆ ಸವಿದಷ್ಟು ಸುಲಭ ಅಲ್ಲ, ಎನ್ನುವುದು ತಾಹಿರ್‌ಗೂ ಗೊತ್ತು.

ಗೋಪಾಲ

ಸುಧಾ, 31 ಆಗಸ್ಟ್, 1986

## ಸುಖಿಸು – ತಳಕು ಶ್ರೀನಿವಾಸ, ಮುಂಬೈ.

ಸುಖಿಸಿದವರು ಸುಖಿಸದವರು
ಸುಖಿಸಿದವರು ದು:ಖಿಸುವವರು
ದು:ಖಿಸಿದವರು ದು:ಖಿಸದವರು
ದು:ಖಿಸಿದವರು ಸುಖಿಸಿದವರು

ತನ್ನಲಿದ್ದೂ ನಾಳೆಯ ನೆನೆದು ಸುಖಿಸದವನೊಬ್ಬ
ಇಂದು ಸಿಕ್ಕಿದುದ ತಿಂದು
ನಾಳೆಗಿಲ್ಲದೇ ಪರಿತಪಿಸುವನಿನ್ನೊಬ್ಬ
ತನ್ನಲಿರದೇ ನಾಳೆಯ
ನೆನೆದು ದು:ಖಿಸುವನಿನ್ನೊಬ್ಬ
ಇರದೆಯೂ ಇದ್ದುದರಲ್ಲಿಯೇ
ತೃಪ್ತಿಸುವ ಮಗದೊಬ್ಬ

ಇಂದಿಲ್ಲದೇ ವ್ಯಥೆಪಡುವನೊಬ್ಬ
ಇಂದಿಲ್ಲದೇ ನಾಳೆ ಸುಖ ಬರಲು
ಸುಖಿಸಿದವ ಶ್ರೇಷ್ಠನೊಬ್ಬ
ಇದ್ದೂ ಸುಖಿಸಿ ನಾಳೆಯ ನೆನೆಯದವ ಇನ್ನೊಬ್ಬ

ಇಂದಿಹುದು, ಅದ ಸವಿಯುವರು
ಜೀರ್ಣಿಸಿಕೊಳ್ಳುವರು
ನಾಳೆಯ ಚಿಂತೆಯಿಲ್ಲದವರು

ನಾಳೆಯಾಗಲು
ಕೈ ಖಾಲಿಯಾಗಿಹರು
ಇದ್ದಾಗ ವ್ಯಯಿಸಿದೆನೆಂದು
ವ್ಯಥೆಪಡುವವರು

ಬರಬಾರದ ಕಾಯಿಲೆಗಳಿಗೆ
ತುತ್ತಾಗುವರು
ನಾಯಿ ನರಿಗಳಿಗೆ ಅನ್ನವಾಗುವರು

ಇಂದಿಹುದು ಸವಿಯಲಾರರು
ಚಿಂತಿಸುವವರು
ನಾಳೆ ಏನಾಗುವುದೋ ನಾಳೆಗೆ ಬೇಕಾಗುವುದೋ

ಒಬ್ಬನಾಗುವ ಭೋಗಿ
ಇನ್ನೊಬ್ಬ ರೋಗಿ
ಮಗದೊಬ್ಬ ಯೋಗಿ
ಇನ್ನೂ ಒಬ್ಬ ವೈರಾಗಿ

## ನಿರಂತರ ಕಳೆದ ಸಂಚಿಕೆಯ ಪದ ಬಂಧಕ್ಕೆ ಸರಿಯುತ್ತರಗಳು.

| | | | | | | | | | | |
|---|---|---|---|---|---|---|---|---|---|---|
| 1 ಅ | ರು | ಣ | | | | | | | 2 ಪ್ರ | |
| ಣ್ಣಾ | | | | | | 3 ಗ | | | 4 ಕಾ | ಮಾ |
| 5 ಗು | ಡಿ | | 6 ಸಿ | ದ್ಧಾ | ಪು | ರ | | | ಶ | |
| ರು | | | | | | ಗ | | | ರಾ | |
| | | | | | 7 ಬ | ಸ | ವ | ರಾ | ಜ | |
| | 8 ಸ | ದ್ದಾ | 9 ಮ | | | | | | 10 ಗೋ | ವಾ |
| | | | ಲ | | 11 ಬಾಂ | | | | ಫಿ | |
| | | 12 ಸ್ವಾ | ಮಿ | ಆ್ಯಂ | ಡ್ | ಸ್ವಾ | 13 ಮಿ | | | |
| | | | ತ್ರ | | | | ನು | | 14 ಆ | ಶಾ |
| | 15 ಶೋ | | | | 16 ವಾ | | | | ನಂ | |
| 17 ಶು | ಭ | | 18 ಪುಂ | ಡ | ಲಿ | ಕ್ | | | ದ | |

**ಅ) ಎಡದಿಂದ ಬಲಕ್ಕೆ**

1. ಟೀಪಿ ಬಳಗಕ್ಕೆ ಇವನ "ರುಣ" ತೀರಿಸಲು "ನಸುಕಿ" ನಿಂದಲೇ ದುಡಿಯಬೇಕು (3)
4. "ಪೂರ್ಣ ನಿಂತ" ಈ ಬಳಗದ ಮೌನ ಸದಸ್ಯನ ತಮ್ಮ (2)
5. ಟೀಪಿ ಬಳಗ ಕುವೆಂಪು (2)
6. "!??%?*(s!?" ಇವನ ಊರು (4)
7. ವಿದೇಶೀ ಕ್ಲೈಂಟ್‌ಗೆ ಆಟೋ ಸವಾರಿ ಮಾಡಿಸಿದ ತಾರೆ (5)
8. ಕೃಷ್ಣನ ಗೆಳೆಯ ಹೆಸರು ತಿರುಚಿ ಬಳಗ ಸೇರಿದ (3)
10. ನಮ್ಮ ಟಿಟಿ ತಾರೆ ತಾಹಿರನಿಗೆ.. ಇಲ್ಲಿ ಟಿಟಿ ಆಡೋದು ಅಂದ್ರ ಭಾಳ ಖುಶಿ. (2)
12. ನಮ್ಮ ಹಿರೇಮಠ ಮತ್ತು ಮೆಟಗುಡಮಠ ಇಬ್ಬರೂ ಕೂಡಿ ಒಂದು ಕಂಪನಿ ತೆಗದರೆ ಹೀಗೆ ಹೆಸರಿಡುವರೇನೋ (6)
14. "ಝಾಡಿಸಿ" ಅಂದಕೂಡಲೇ ನೆನಪಾಗುವರೇ ಈ ತಾರೆ (2)
17. ಮಾಜಿ ಎಣ್ಣೆ ದೊರೆಯ ಹೆಂಡತಿ(2)

18. "ಈ ಮಿತ್ರನಿಗೂ" ವರ್ಲ್ಡ್ ದಿಸ್ ವೀಕ್ ಗೂ ಏನು ಸಂಬಂಧ (4)

**ಬ) ಮೇಲಿನಿಂದ ಕೆಳಕ್ಕೆ**

1. ಬಳಗದ ಡಾ|| ರಾಜ್‌ಕುಮಾರ್ ಮತ್ತು ಮಾಸ್ತರ್ (4)
2. ಬೆಳಕಿನ ಮುಂದೆ ರಾಜ, ರಾಜನ ಮುಂದೆ ಕೊಂಬು ಎಳೆದಾಡಿದ ಎತ್ತು, ಇವನೇ ನಮ್ಮ ಬಳಗದ ಚುರುಕಾದ ಸದಸ್ಯ (7)
3. ಈ ಸ್ವಾಮಿ, ಗುಡಿ ಬರೆಯುವ ಪುಟಗಟ್ಲೆ ಇರುವ ಈ–ಮೈಲ್ ನೋಡಿದರೆ, ಇದು ನೆನಪಾಗುವುದು (4)
9. ಹೆಸರಿಗೆ ಮಾತ್ರ ಸ್ನೇಹ ಉಳಿಸಿಕೊಳ್ಳುವ "ಮಿತ್ರ" ರಿಗೆ ಕಟ್ಟಿ ಕರೆದದ್ದು ಹೀಗೆ! (4)
11. ಟೆಣ ಟೆಣವ್ .. ಡಿಶ್ಕೆವ್.. ಡಿಶ್ಕೆವ್ _007 (2)
13. ಬಳಗದ "ಹೊಳೆ"ಯುವ ತಾರೆ (2)
14. ಬಳಗದ ಏಕಮಾತ್ರ ಡೈರೆಕ್ಟರ್ (3)
15. ಎಲ್ಲರ ಮನೆಯಲ್ಲಿ ಹೊಸ ವರುಷಕ್ಕೆ ಒಂದೇ ಸೆಲೆಬ್ರೇಶನ್, ಇವರ ಮನೆಯಲ್ಲಿ ಎರಡು ಸೆಲೆಬ್ರೇಶನ್(2)
16. ಮೂರ್ತಿ ಚಿಕ್ಕ ದಾದರೂ ಕೀರ್ತಿ ದೊಡ್ಡದು ಈ ನಮ್ಮ ರಾಮ ಭಕ್ತನಿಗೆ (2)

ಅಂದು



ಇಂದು



ಬಸವರಾಜ ಯಾದವಾಡ

# ಬೆಂಗಳೂರು ದೂರದರ್ಶನ

**ರಚನೆ : ಬಸವರಾಜ. ಆರ್. ಯಾದವಾಡ (೧೯೯೪)**
**ಸ್ಫೂರ್ತಿ : ಬೆಂಗಳೂರು ದೂರದರ್ಶನದ ಆಗಿನ ಕಾರ್ಯಕ್ರಮಗಳು**

ಬೆಂಗಳೂರು ದೂರದರ್ಶನ ಟೀವಿ ಕಾರ್ಯಕ್ರಮ ಅಂದ್ರೇನೇ ಮಜಾ
ಸಂಜೆ ಐದು ಘಂಟೆ ಆದ್ರೆ ತಪ್ಪಿದ್ದಲ್ಲಾ ಈ ಸಜಾ

ಮೂರು ತಾಸಿನ ಮನರಂಜನೆಗೆ ಆರು ತಾಸಿನ ಕಾರ್ಯಕ್ರಮ ಪಟ್ಟಿ
ಅವುಗಳಲ್ಲಿರುವವು ಒಂದಕ್ಕಿಂತ ಒಂದು ಖೊಟ್ಟಿ

ಬೆಂಗಳೂರು ಜಿಲ್ಲೆ ಬಿಟ್ರೆ ಬೇರೇನೂ ನೋಡದು ಇವರ ಕ್ಯಾಮರಾ
ಮರೆತಿಹರು ಇವರು ನಮ್ಮೂರ ಆಪೂಸಿನ ಮಾಮರಾ

ಆರು ಘಂಟೆಗೆ ಆರಂಭವಾಗುವದು ಬೆಂಗಳೂರು ದರ್ಶನ
ಅದರ ಹಿಂದೆಯೇ ಬರುವದು ಒಂದು ಗೊಡ್ಡು ಸಂದರ್ಶನ

ಏಳು ಘಂಟೆಗೆ ಇದೆ ನೋಡು ಮಾರುದ್ದ ಹೆಸರಿನ ಧಾರಾವಾಹಿ
ಅದರಲ್ಲಿನ ಪಾತ್ರ ಕಥೆ ತಿಳಿದುಕೊಂಡವನೇ ಮಹಾ ಮೇಧಾವಿ

ಏಳು ಮೂವತ್ತಕ್ಕೆ ಬರುವವು ನೋಡು ವಾರ್ತೆಗಳು
ಬೆಂಗಳೂರ ಸುತ್ತಮುತ್ತಣ ಸಮಾರಂಭದ ತುಣುಕುಗಳು

ಇನ್ನೂ ಕಾರ್ಯಕ್ರಮ ನೋಡುತ ಕುಳಿತಿರಲು ನೀವು
ನಿಮಗೂ ತಪ್ಪದೇ ಬರುವದು ಹಾಳು ತಲೆ ನೋವು

## ನಮ್ಮ ಕಡೆ ಹಿಂಗ.. ನಿಮ್ಮ ಕಡೆ ಹ್ಯಾಂಗ...? – ಅರುಣ ಆರ್. ಯಾದವಾಡ. ಬೆಂಗಳೂರು

**ನಮ್ಮ ಉತ್ತರ ಕರ್ನಾಟಕದ ಹಳ್ಳಿಗಲ್ಲಿ ಅಜ್ಜಿಯಂದಿರು ( ನಾವು ಅಮ್ಮ, ಯವ್ವಾ ಇತ್ಯಾದಿಯಾಗಿ ಕರೆಯುತ್ತೇವೆ.) ತಮ್ಮ ಗಂಡು ಮೊಮ್ಮಕ್ಕಳನ್ನು ಹೆಸರು ಹಿಡಿದು ಕರೆಯುವ ಬದಲು 'ಮುದುಕಾ' ಅಂತಾ ಕರೆಯುತ್ತಾರೆ. ಯಾಕೆ ಗೊತ್ತೆ..?**
**– ಆ ಮೊಮ್ಮಕ್ಕಳಿಗೆ ಸಾಮನ್ಯವಾಗಿ ಮನೆಯಲ್ಲಿ ತೀರಿ ಹೋದ ಅಜ್ಜನ ಹೆಸರನ್ನೇ ಇಟ್ಟಿರುತ್ತಾರೆ.ಹೀಗಾಗಿ ಅಜ್ಜಿಗೆ ಅಜ್ಜನ ಹೆಸರು ಹಿಡಿದು ಕೂಗಲು ಯಾಕೋ ನಾಚಿಕೆ..! ಅದಕ್ಕೆ ಇದು ಈ ಅಜ್ಜಿಯಂದಿರೇ ಕಂಡು ಹಿಡಿದುಕೊಂಡಿರೊ ಶಾರ್ಟ್–ಕಟ್..! ಎಷ್ಟೊ ಸಲ ಇಂಥಾ ಹುಡುಗರೊಂದಿಗೆ ಆಡುವ ವಾರಿಗೆಯ ಹುಡುಗರಿಗೆ ಆತನ ಮೂಲ ಹೆಸರೇ ಗೊತ್ತಿರುವದಿಲ್ಲ.'ದೇಸಾಯರ ಮುದುಕ ಬಂದ', 'ಗೌಡರ ಮುದುಕ ಬಂದ', 'ಶೆಟ್ಟರ ಮುದುಕ ಬಂದ' ಇತ್ಯಾದಿಯಾಗಿ ಕರೆಯುತ್ತಿರುತ್ತಾರೆ.**

ನಲುಮೆಯ ಸ್ನೇಹಿತರೆ,

ನಮ್ಮ ಯೂನಿಟನಲ್ಲಿ ಸಹಾಯಕ ಕಲಾ ನಿರ್ದೇಶಕನಾಗಿ ಕೆಲಸ ಮಾಡುತ್ತಿರುವ ಪುರುಷೋತ್ತಮ ಅವರ ತಾಯಿ ರಕ್ತದಲ್ಲಿ ಹೀಮೊಗ್ಲೋಬಿನ್ ಕೊರತೆಯಿಂದ ಬಳಲುತ್ತಿದ್ದಾರೆ. ಪುರುಷೋತ್ತಮ ಅವರ ಆದಾಯ ದಿನಕ್ಕೆ ರೂ.100/–. ಸಾಧ್ಯವಾದಲ್ಲಿ ದಯವಿಟ್ಟು ಅವರಿಗೆ ಸಹಾಯ ಮಾಡಿ. ಹೆಚ್ಚಿನ ಕೆಳಗಿನ ಪತ್ರದಲ್ಲಿ ಇವೆ.

ನಿಮ್ಮ,
ಆನಂದ. ಯಾದವಾಡ.

**ST. JOHN'S NATIONAL ACADEMY OF HEALTH SCIENCES**

**ST. JOHN'S MEDICAL COLLEGE HOSPITAL**

Sarjapur Road, Bangalore – 560 034, India Tel: +91 80 22065 000 Fax: +91 80 2553 0070 Email: sjmch@vsnl.com

24/02/2006

**TO WHOMSOEVER IT MAY CONCERN**

This is to state that Mrs. Gayathrama, Female, 42 yrs, our hospital no. 1886017 has MDS. She needs treatment with Edrythropoietin and GCSF. This treatment is essential for her survival. She will need regular blood component therapy and has to be at a neutropenic facility.

The whole treatment costs approx. Rs. 1.75 lakhs. (Rupees One lakh seventy five thousand only). She needs all possible support including finance. The money may be sent in the form of a cheque favoring, "The Associate Director, St. John's Medical College Hospital" mentioning the patient's name and hospital number. This certificate is valid for 6 months from the date of issue.

*(Signed)*
DR. CECIL ROSS, MD, IHTC(London)
Professor Medicine
(Haematology)

## ಒಗಟುಗಳಿಗೆ ಸರಿಯುತ್ತರಗಳು:

1. ಗಂಧದ ಮರ
2. ಮೂಗು
3. ಹುಂಜ
4. ಗಡಿಯಾರ
5. ತಾಯಿ ಮತ್ತು ಮಗು
6. ಗಿಳಿ
7. ಕುಂಬಳಕಾಯಿ
8. ಗಾಳಿಪಟ
9. ಕೊಳಲು, ಟೆಂಗಿನಕಾಯಿ ಮತ್ತು ಸೂಜಿ
10. ಟೆಂಗಿನಕಾಯಿ.
11. ಕೋಳಿ ತತ್ತಿ
12. ಬಾಳೆಗಿಡ
13. ಹೊಳಿ/ನದಿ
14. ಭೂಪಟ(ಮ್ಯಾಪ್)
15. ನವಿಲು
16. ಎಳೆನೀರು
17. ಟೆಂಗಿನಕಾಯಿ
18. ಬಾಲೆ ಹಣ್ಣು ತಿನ್ನುವದು
19. ಬಾಳೆಹಣ್ಣು
20. ಮೆಣಸಿನಕಾಯಿ
21. ಛತ್ರಿ
22. ನಾಣ್ಯ
23. ನಮ್ಮ ಹೆಸರು






ಎಲ್ಲರಿಗೂ ನಮಸ್ಕಾರ,

ನಿಜ ಹೇಳಬೇಕೆಂದರೆ, ನಾನು ಟಿಪಿಬಳಗ ಗ್ರೂಪಿನ ಸದಸ್ಯಳಲ್ಲ. ಆದರೆ ನನ್ನ ಆತ್ಮೀಯ ಸ್ನೇಹಿತೆ ಮೃಣಾಲಿನಿಯ ವಿವಾಹವಾದಾಗ ಅವಳ ಮೂಲಕ ನನಗೆ ಈ ಸ್ನೇಹಿತರ ಪರಿಚಯವಾಯಿತು. ಈ ಬಳಗದ ತುಂಬಾ ಜನ ಸದಸ್ಯರು ನನಗೆ ಗೊತ್ತು. ಇಲ್ಲಿಯವರೆಗೆ ಅವರು ಮಾಡುವ ಸಾಮಾಜಿಕ ಸೇವೆ (ಮದುವೆ ವಿಷಯದಲ್ಲಿ ಹೆಣ್ಣು–ಗಂಡು ನೋಡಲಿಕ್ಕೆ ಸಹಾಯ ಮಾಡುವದು, ಅವರ ಮಿತ್ರ ವರ್ಗದ ಸಮಾರಂಭದಲ್ಲಿ ಓಡಾಡಿ ಕೆಲಸ ಮಾಡುವದು ಇತ್ಯಾದಿ..) ನೋಡಿದ್ದ ನನಗೆ ಈ ಬಳಗದಲ್ಲಿ ಒಳ್ಳೊಳ್ಳೆ ಬರಹಗಾರೂ ಇರುವದನ್ನು ಕಂಡು ಬಹಳೇ ಖುಶಿಯಾಯಿತು.

ಸಂಚಿಕೆ ತುಂಬಾ ಅದ್ಭುತವಾಗಿ ಮೂಡಿ ಬಂದಿದೆ.ಇಲ್ಲಿ ಬರೆದಿರುವ ಎಲ್ಲಾ ಲೇಖಕರು ನಿಜಕ್ಕೂ ಅಭಿನಂದನಾರ್ಹರು. ಇಂದಿನ ಕಾಲದಲ್ಲಿ ನಮ್ಮಂಥವರು ಇಂಥ ಸಂಚಿಕೆಗಳನ್ನು ಓದಿದರೂ ಸಹಾ, ಅದರ ಬಗ್ಗೆ ನಮಗೆ ತಿರುಗಿ ಒಂದು ಚಿಕ್ಕ ಅನಿಸಿಕೆ, ಅಭಿಪ್ರಾಯ ಕಳಿಸುವಷ್ಟು ಸಹಾ ಸಮಯವಿರುವದಿಲ್ಲ.ಈ ಎಲ್ಲ ಲೇಖಕರ ಬಳಗದಿಂದ ನಾವು ಕಲಿಯುವದು ಬಹಳಷ್ಟು ಇದೆ. ದಯವಿಟ್ಟು ಈ ಒಂದು ಒಳ್ಳೆಯ ಕಾರ್ಯವನ್ನು ಹೀಗೆ ಮುಂದುವರೆಸಿ.

ಇನ್ನು ಒಳಗಿರುವ ಲೇಖನಗಳ ಬಗ್ಗೆ ಹೇಳಬೇಕೆಂದರೆ, ಎಲ್ಲ ಲೇಖನಗಳು ನನಗೆ ಹಿಡಿಸಿದವು. ಅದರಲ್ಲೂ ನನಗೆ ಗಿರೀಶ ಬೆಳಂದೂರ ಅವರ 'ಕಂಪನಿ ಟ್ರೈನಿಂಗ್‌ನ ಕಥೆ', ಶ್ರೀನಿವಾಸ ಗುಡಿ ಅವರ ' ಆತ್ಮ–ಉಪದೇಶ', ತಾಹೀರ್ ಸನದಿ ಅವರ ಬದುಕಿನ ಮೇಲಿನ ಚಿಕ್ಕ ಹಾಗು ಚೊಕ್ಕ ಲೇಖನ ಹಾಗು ಮೃಣಾಲಿನಿ ಅವರ 'ಫ಼ಾಸ್ಟ್ ಫ಼ಾರ್ವರ್ಡ್' ಕಥೆ ಬಹಳ ಇಷ್ಟವಾಯಿತು. ಬೆಳಂದೂರ ಅವರ ಹಾಸ್ಯಮಯ ಬರವಣಿಗೆ ಶೈಲಿ ನನ್ನ ಮುಖದಲ್ಲಿ ನಗೆಯೊಂದನ್ನು ಹೊಮ್ಮಿಸಿತು. ನನಗನಿಸಿದ ಮಟ್ಟಿಗೆ ಈ ಸಂಕೀರ್ಣ ಬದುಕಿನಲ್ಲಿ ನಮ್ಮ ಸ್ವಾಸ್ಥ್ಯವನ್ನು ಸ್ವಲ್ಪವಾದರೂ ಕಾಯ್ದುಕೊಂಡು ಹೋಗಬೇಕೆಂದರೆ, ನಮ್ಮ ಪ್ರತಿನಿತ್ಯ ಜೀವನದಲ್ಲಿ ದಿನಕ್ಕೆ ಒಂದು ಒಳ್ಳೆ ನಗು ಅಥವಾ ಕನಿಷ್ಟ ಒಂದು ಮುಗುಳ್ನಗೆ ಅವಶ್ಯಕ.

ಗುಡಿಯವರ ಲೇಖನ ನಾವೀಗ ಎತ್ತ ಸಾಗಿದ್ದೇವೆಂಬುದನ್ನು ತೋರಿಸುವ ಎಚ್ಚರಿಕೆಯ ಗಂಟೆಯಾಗಿದೆ. ಸರಿಸುಮಾರು ಎಲ್ಲರ ಜೀವನದಲ್ಲೂ ಬರುವ ಒಂದು ಘಟ್ಟವನ್ನು ತಾಹೀರ ಚೆನ್ನಾಗಿ ವಿವರಿಸಿದ್ದಾರೆ.ಅವರು ಹೇಳುವಂತೆ ನಮಗೆಲ್ಲ ನೆನಪಿನ ಶಕ್ತಿ ಭಾಳಾ ಕಡಿಮೆ. ಮತ್ತೆ ಮತ್ತೆ ಮಾಡಿದ ತಪ್ಪುಗಳನ್ನೆ ಮಾಡುತ್ತಿರುತ್ತೇವೆ. ಕೆಲವೊಮ್ಮೆ ಇಂಥ ತಪ್ಪುಗಳು ನಮಗೆ ಗೊತ್ತಾಗುತ್ತವೆ. ಆದರೆ ನಮ್ಮವು ಅಲ್ಲ.. ಬೇರೆಯವರ ತಪ್ಪುಗಳು..!

ಫ಼ಾಸ್ಟ್ ಫ಼ಾರ್ವರ್ಡ್ ಕಥೆ ತುಂಬ ಸುಂದರವಾಗಿ ಮೂಡಿ ಬಂದಿದ್ದು, ಇಲ್ಲಿಯ ಪಾತ್ರಗಳೊಂದಿಗೆ ನಮ್ಮನ್ನು ನಾವೇ ಗುರುತಿಸಿಕೊಳ್ಳಬಹುದು.

ಇದನ್ನು ಹೀಗೆ ಬರೆಯುತ್ತ ಹೋದರೆ ಒಂದು ದೊಡ್ಡ ಲೇಖನವೇ ಆಗುತ್ತದೆನೊ..? ಇಲ್ಲಿಗೆ ಮುಗಿಸುತ್ತೇನೆ.

ಮುಗಿಸುವ ಮುನ್ನ , ಇಂಥಾ ಅದ್ಭುತ ಸಂಚಿಕೆಯನ್ನು ಹೊರತಂದಿರುವ ನಿಮಗೆಲ್ಲ ಮತ್ತೊಮ್ಮೆ ಅಭಿನಂದನೆಗಳು. ನಾನು , ನನ್ನ ಪತಿ ಗೋಪಾಲ್ ಭಟ್, ನಿಮ್ಮ ಮುಂದಿನ ಸಂಚಿಕೆಗಾಗಿ ಕಾತರದಿಂದ ಕಾಯುತ್ತಿದ್ದೇವೆ.

ಈ ಬಳಗದ ಈ ಒಗ್ಗಟ್ಟು, ಉತ್ಸಾಹ ಹೀಗೆಯೆ ಚಿರಕಾಲ ಇರಲಿ ಹಾಗೂ ಅದರ ಸುತ್ತ ಇರುವ ಪ್ರತಿಯೊಬ್ಬರಿಗೆ ಸ್ಪೂರ್ತಿಯಾಗಿರಲಿ.

ನಿಮ್ಮ,
**ನಾಗರತ್ನ ಗೋಪಾಲ ಭಟ್. ಯು.ಎಸ್.ಎ.**

ಏನ್ರಿಪಾ, ಏಕ್‌ದಮ್ ಸಕತ್ ಸಂಚಿಕೆ ರೀ..! ಓದಿ ಭಾರಿ ಮಜಾ ಬಂತುರೀ..! ಆದರೆ ಪೂರ್ತಿ ಓದೋಕೆ ಸ್ವಲ್ಪ ಸಮಯ ಬೇಕು.ತುಂಬ ಚೆನ್ನಾಗಿ ಬಂದಿದೆ. ಅಂತರ್ಜಾಲದಲ್ಲಿ, ಇಂಥಾ ಕನ್ನಡ ಸೇವೆ ಮಾಡತಿರೊ ನಿಮ್ಮ ಬಳಗಕ್ಕೆ, ನನ್ನ ನಮಸ್ಕಾರ..!
**ಎನ್. ಮಧುಸೂದನ್, ಬ್ಲ್ಯೂ ಸ್ಟಾರ್ ಇಂಫೋಟೆಕ್ ಲಿಮಿಟೆಡ್, ಬೆಂಗಳೂರು.**

ನಿರಂತರದ ಬಗ್ಗೆ ನಿಮ್ಮ ಮೈಲ್ ಬಂದ ತಕ್ಷಣ ನಾನು ನನ್ನ ಫ್ರೀ ಸಮಯಕ್ಕೆ ಕಾಯಲಿಲ್ಲ. ಲಂಚ್ ಟೈಮ್ ಹೋಗಿದ್ದೇ ಗೊತ್ತಾಗಲಿಲ್ಲ. ಆ ರೀತಿ ನಿರಂತರವಾಗಿ ಓದಿ ಮುಗಿಸಿದೆ. ನಿರಂತರದ ರಸದೂಟ ಪ್ರತಿದಿನದ ನೀರಸ ಊಟವನ್ನೇ ಮರೆಸಿತು.

ಓದಿ ಭಾರೀ ಖುಷಿ ಆಯಿತು. ನಿಮ್ಮ ಪ್ರತಿಭೆ ಅದ್ಭುತ..! ನಿಮ್ಮ ಬಳಗ ಹೀಗೇ ಬೆಳೆಯಲಿ ಎಂದು ಹಾರೈಸುತ್ತೇನೆ.
**– ಗಾಯತ್ರಿ ಮೇಡಮ್, IISc, ಬೆಂಗಳೂರು.**

ನಿಮ್ಮ ಟಿಪಿಬಳಗದ ಹೊಸ ವರ್ಷದ ಸಂಚಿಕೆಯನ್ನು ನೋಡಿದೆ. ನಿರ್ವಹಣೆ ಬಹಳ ಚೆನ್ನಾಗಿದೆ.

ದಿನ ನಿತ್ಯದ ತೊಳಲಾಟಗಳಲ್ಲಿ ಹುದುಗಿದ್ದೂ, ಕಥೆ, ಕವನ, ಲೇಖನ ಬರೆದು, ಪರಿಷ್ಕರಿಸಿ ತ್ರೈಮಾಸಿಕ ಸಂಚಿಕೆಯನ್ನಾಗಿ ಹೊರ ತರುತ್ತಿರುವುದು ಶ್ಲಾಘನೀಯ ಕೆಲಸ. ಎಲ್ಲ ಕಥೆ, ಕವನಗಳೂ ನನಗೆ ಇಷ್ಟವಾದುವು. ಹೆಚ್ಚಿನದಾಗಿ ಇಷ್ಟವಾದದ್ದು ಪದಬಂಧ. ಚಿಣ್ಣರ ಮುಗ್ಧ ಮುಖಗಳನ್ನು ನೋಡಲು ಸಿಕ್ಕಿದ್ದು ತುಂಬಾ ಸಂತೋಷವಾಗುತ್ತಿದೆ.

ಮುಂದಿನ ಸಂಚಿಕೆಗಾಗಿ ಕಾಯುವೆ. ವಿಶ್ವಾಸವಿರಿಸಿ ಒಳ್ಳೆಯ ಸಂಚಿಕೆಯನ್ನು ಕಳುಹಿಸಿದುದಕ್ಕೆ ವಂದನೆಗಳು.
**– ತಳಕು ಶ್ರೀನಿವಾಸ, ಮುಂಬೈ, ಅಂಕಣಕಾರರು, www.ThatsKannada.com**

ಈ ಸಂಚಿಕೆ ಅತ್ಯದ್ಭುತ..ಟಿಪಿಬಳಗಕ್ಕೆ ಅಭಿನಂದನೆಗಳು. ನಿಮ್ಮಿಂದ ಕಲಿಯೋದು ಸಾಕಷ್ಟಿದೆ ಅನಿಸುತ್ತದೆ.
Keep going..!
- **ವಿಜಯ್ ನಾಡಗಿರ್, ಯೂ.ಎಸ್.ಎ.**

ಮೀನೂ ಹಾಗೂ ಕಂಪನಿ,

That is great!!! ಎಲ್ಲವನ್ನೂ ಒಮ್ಮೆಗೆ ಜೀರ್ಣಿಸಿಕೊಳ್ಳುವದು ಆಗಲಿಲ್ಲ. ಮನೆಗೆ ಹೋಗಿ ಪೂರ್ತಿ ಓದುತ್ತೇನೆ.ಈ ಸಂಚಿಕೆ ನನಗೆ ತುಂಬಾ ಇಷ್ಟವಾಯಿತು. ಬಿಡುವಿಲ್ಲದ ನಿಮ್ಮ ಕೆಲಸದ ನಡುವೆಯೂ ಇಂಥಾ ಸಂಚಿಕೆಯನ್ನು ಹೊರತಂದಿರುವದು ನೋಡಿ ತುಂಬಾ ಖುಶಿ ಆಗುತ್ತದೆ.

Keep up the good work.
**– ಗೋಪಾಲ್ ಯು.ಎಸ್.ಎ.**

ಇದೊಂದು ಅದ್ಭುತ ಪ್ರಯತ್ನ. ನಾನು ಸಂಚಿಕೆಯನ್ನು ಪ್ರಿಂಟ್ ಮಾಡಿ ಎಲ್ಲಾ ಪೂರ್ತಿಯಾಗಿ ಓದಿದೆ. ಒಮ್ಮೆ ಆರಂಭ ಮಾಡಿದರೆ ಯೋಚನಾ ಲಹರಿಗಳು ತಾನು ತಾನಾಗೇ ಹರಿದು ಪುಟಗಳ ಮೇಲೆ ಮೂಡಬಲ್ಲವು ಅಂತ ನನಗೆ ಈ ಸಂಚಿಕೆ ಓದಿದ ಮೇಲೆ ಅನಿಸಿತು. ನಿಮ್ಮೆಲ್ಲರಿಂದ ಇಂಥಾ ಕೃತಿಗಳು ಮತ್ತಷ್ಟು ಬರಲಿ. ಯಾವದೇ ಕಾರಣಕ್ಕೂ ನಿಲ್ಲಿಸಬೇಡಿ. ನಮ್ಮಲ್ಲಿ ಯಾರೂ ಬೇಂದ್ರೆ, ಕಾರಂತರು ಇರಲಿಕ್ಕಿಲ್ಲ.. ಆದರೆ ನೀವು ಬರೆದರೆ ಇಲ್ಲಿ ಓದೋಕೆ ಖಂಡಿತ ನಾವಿದ್ದೇವೆ..! ದಯವಿಟ್ಟು ಮುಂದುವರೆಸಿ.

**– ರಾಜಿ ಮೋಹನ್, ಯು.ಎಸ್.ಏ**

Minu,

I cannot thank you enough for sending this to me. First of all congratulations on a job very very very well done. I read a few articles already but have printed it out to take it home and re-read and also share it with my parents. They are going to be mighty happy to read this. Your article Fast Forward, made me cry. Its everyone's story Minu.. Sometimes, we know how to complicate things.. We have forgotten what it means to live, to laugh, to spread happiness by being happy ourselves.. Your article was an eye opener. I just wish this is not just a "tick tick tick" that is short lived (as pointed out by Gudi in his article).. I wish this wisdon of enjoying little things in life remains with me "nirantara".

Hats off to you.
**–ಸರಸ್ವತಿ ಪುನಗಿನ, ಯು.ಎಸ್.ಏ**

ನಮಸ್ಕಾರ,

ನಿರಂತರ 2006 –ಈ ಸಂಚಿಕೆಯು ಬಹಳೇ ಚೆನ್ನಾಗಿ ಮೂಡಿ ಬಂದಿದೆ. ಈ ಸಂಚಿಕೆಯ ಸಂಪಾದಕರಿಂದ ಬರಹಗಾರರವರೆಗಿನ ಎಲ್ಲ ಆತ್ಮೀಯ ಟಿಪಿ*ಗಳಿಗೆ ನಮ್ಮ ಹಾರ್ದಿಕ ಅಭಿನಂದನೆಗಳು. ಆರುಣನ ಕಾರ್ಯ ವೈಖರಿ ಮತ್ತು ಕ್ಷಮತೆಗಳಂತೂ ಮೆಚ್ಚಿ ಕೊಂಡಾಡುವಂತಾದ್ದೇ..!

ನಾನು ಯಾವುದಾದ್ರೂ ಒಂದು ಪತ್ರಿಕೆ ಓದಲಿಕ್ಕೆ ಕೈಗೆತ್ತಿಗೊಂಡರೆ (ಕೈಗೆತ್ತಿಗೊಳ್ಳದೆ ಆಗಲೇ ಸುಮಾರು 3–4 ವರ್ಷಗಳಾದವು ಅಂತ ಅನಿಸ್ತದ....) ನಾ ಓದಲಿಕ್ಕೆ ಶುರು ಮಾಡೊದೇ 'ಸಂಪಾದಕೀಯ'ದಿಂದ. ಈ ನನ್ನ (ದುರ??)ಅಭ್ಯಾಸಕ್ಕೆ ನಿರಂತರನೂ ಅಪವಾದ ಅಲ್ಲ. ಸಂಪಾದಕೀಯ ಓದಿದೆ .. ಬಹಳ ಸೊಗಸಾಗಿ ಮೂಡಿ ಬಂದಿದೆ. ಮೃಣಾಲಿನಿ ಭಾಭಿ : Sampadakeeya is too good.

ಈ ನಿರಂತರ ಸಂಚಿಕೆ ಹೀಗೆ ನಿರಂತವಾಗಿ ಮತ್ತಷ್ಟು ಚೆನ್ನಾಗಿ ಮೂಡಿ ಬರಲಿ.. ಬರುತ್ತಾ ಇರಲಿ ಎಂಬ ಹಾರೈಕೆಯೊಂದಿಗೆ...
**–ಶ್ರೀಲತಾಕಾಂತ (ಗುರು), ಬೆಂಗಳೂರು**

"Nirantara" is very good. I think it is a great idea and the content is what makes it so dear to our hearts. I don't know many people in your TP Balaga but I can relate to each article just because I am from the same school of thought.

Obviously I will tell you that both of Shrinivas Gudi's articles are great ( I liked Atma-Updesha very much.). But the Editorial is something that standsout in the magazine. Also some other articles I really liked are ....
1. Vadapu heluva kale, Bisu kallina padagalu and all other articles by Smt.S.C.Rajagoli.
2. Bar bar elnodi bar by Girish. Metgudmath

Regards,
**-Prakash Patil , USA**

# ಕೃತಜ್ಞತೆಗಳು

-

- ಈ ಸಂಚಿಕೆಯನ್ನು ಹೊರತರುವಲ್ಲಿ ಎಲ್ಲಾ ರೀತಿ ಸಲಹೆ ಸೂಚನೆಗಳನ್ನು ನೀಡಿದ, ಪ್ರೋತ್ಸಾಹಿಸಿದ ನಮ್ಮ ಟಿಪಿಬಳಗದ ಎಲ್ಲ ಸ್ನೇಹಿತರಿಗೆ
- ಈ ಸಂಚಿಕೆಗೆ ವಿಶೇಷವಾಗಿ ತಮ್ಮ ರಚನೆಗಳನ್ನು ಕಳಿಸಿದ ಶ್ರೀ **ತಳಕು ಶ್ರೀನಿವಾಸ್** ಹಾಗೂ **ಪ್ರೊ. ಆರ್. ಪಿ. ಪುನಗಿನ** ಅವರಿಗೆ,
- ಈ ಸಂಚಿಕೆಯನ್ನು ಓದಿ , ಆನಂದಿಸಿ ತಮ್ಮ ಮುಕ್ತ ಅಭಿಪ್ರಾಯ ತಿಳಿಸಲಿರುವ ನಮ್ಮ ಎಲ್ಲ ಸ್ನೇಹಿತ ವೃಂದಕ್ಕೆ

## ಸಲಿಗೀನ ತೆಲಿಗಿ ಏರಿತಂತ..! – ಅರುಣ ಆರ್. ಯಾದವಾಡ, ಬೆಂಗಳೂರು.

ನಮ್ಮ ಕಡೇ ಈ ಮಾತು ಹಗಲೆಲ್ಲಾ ಕೇಳಿ ಬರುತ್ತದೆ. ಮನೆಯಲ್ಲಿ ಚಿಕ್ಕವರನ್ನು ಗದರಿಸುವ, ಅಥವಾ ಅವರು ಮಾಡಿದ್ದು ಅತಿಯಾಯಿತು ಅಂತ ಹೇಳುವಾಗ ಹಿರಿಯರು ಅವರನ್ನು ಬೈದು ಬುದ್ಧಿ ಹೇಳುವಾಗ " ಏನ್ ಇದು ನೀನು ಮಾಡಾಕ ಹತ್ತಿದ್ದು.. ಇದು ಅತಿ ಆತು.. ಸಲಿಗೀನ ತೆಲಿಗಿ ಏರಿತು" ಅಂತಾ ಬೈಯುತ್ತಿರುತ್ತಾರೆ.

"ಸಲಿಗೀನ ತೆಲಿಗಿ ಏರಿತಂತ..!" ಇದರ ಅರ್ಥ ಏನು ಅಂದರೆ, ನಾನು ನಿನಗೆ ಕೊಟ್ಟ ಸಲಿಗೆ ನಿನ್ನ ತಲೆಗೆ ಏರಿದೆ..ಅಂದರ ಜಾಸ್ತಿ ಆಗಿದೆ..ಅದನ್ನು ನೀನು ದುರುಪಯೊಗ ಪಡಿಸಿಕೊಳ್ಳುತ್ತಿದ್ದಿಯಾ..ಅದು ಸರಿಯಲ್ಲ ಎಂಬ ಅರ್ಥ. ಇದು ನಮ್ಮ ಉತ್ತರ ಕರ್ನಾಟಕದ ಮನೆಗಳಲ್ಲಿ ಕೇಳಿ ಬರುವ ತುಂಬಾ ಸಾಮಾನ್ಯ ಮಾತು. ಇದನ್ನ ನಾವೆಲ್ಲಾ ಚಿಕ್ಕಂದಿನಿಂದಲೂ ಕೇಳಿಸಿಕೊಂಡಿದ್ದೆವೆ.. ಕೇಳಿಸಿಕೊಳ್ಳುತ್ತಲೆ ಇದ್ದೆವೆ. ಈ ಥರಾ ನಾವೂ ಬೈಸಿಕೊಂಡಿದ್ದೇವೆ.. !

## ನೆನಪು–ನನಸು

ಬಾನಿನಂಗಳದಲ್ಲಿ ನಕ್ಷತ್ರ ರಂಗೋಲಿ
ನಿಶೆಯ ಮೈ ಸವರುವ ಬೀಸು ತಂಗಾಳಿ
ಎದೆಯ ಅಂಗಳದಲ್ಲಿ ನೆನಪುಗಳ ಕಚಗುಳಿ
ನವಿರಾಗಿ ಆಡುತಿವೆ ನನಸಿನೋಕುಳಿ

ನೀನಂದು ನಿಂತಿದ್ದೆ ಎದುರಲ್ಲಿ ಬಂದು
ನಾ ನಿಂತೆ ನಾಚಿಕೆಯ ನೀರಲ್ಲಿ ಮಿಂದು
ಹಣೆಯಲ್ಲಿ ಮೂಡಿತ್ತು ಬೆವರಿನಾ ಬಿಂದು
ಮನವಾಗಲೆಳ್ಳೂರಟಿತ್ತು ನಿನ್ನಲ್ಲಿ ಒಂದು

ತೆರಳಿದ್ದೆ ನೀನು ನಿನ್ನವರ ಜೊತೆಗೂಡಿ
ಆಗೆಂದು ಹೇಳಿ ನೀ ನನಗೆ ಒಡನಾಡಿ
ಸೆಳೆದಿತ್ತು ನನ್ನನ್ನು ಆ ನಿನ್ನ ಮೋಡಿ
ಒಲಿಸಿತ್ತು ಎಲ್ಲರನು ಈ ನಮ್ಮ ಜೋಡಿ

ನಡೆದಿಹೆವು ಒಂದಾಗಿ ಮನಸನ್ನು ಕಟ್ಟಿ
ಹೊತ್ತಿಹೆವು ಸುಂದರ ಕನಸುಗಳ ಬುಟ್ಟಿ
ಮುಂದಿರುವ ಹಾದಿಯನು ಸಮನಾಗಿ ಮೆಟ್ಟಿ
ಸವಿಯೋಣ ಜೀವನವ ಎದೆ ಮಾಡಿ ಗಟ್ಟಿ


ಹೇಗೆ ಆಗುವುದೀ ಮನಸುಗಳ ಮಿಲನ!
ಹೆಸರಿಸಿದರೇತಿದಕೆ ಇಹುದೆಂದು ಋಣ!
ಆಗಿಹುದೆ ಎಲ್ಲದಕು ಆ ದೈವ ಕಾರಣ!
ಅದರಿಂದ ನಡೆಯುವುದೆ ಈ ಬಾಳ ಬಾರಣ!
– ಶ್ರೀಮತಿ. ಶುಭಶ್ರೀ ಜಿ. ಬೆಳಂದೂರ

## ಮನವಿ – ಪ್ರಶಾಂತ್ ಶಿವಶಂಕರ್. ಬೆಂಗಳೂರು



ಅಜ್ಞಾನ ಅಂಧಕಾರ ರಾರಾಜಿಸುತ್ತಿದೆ
ಮೌಢ್ಯತೆ ಮನತುಂಬಿ ಹರಿಯುತ್ತಿದೆ
ಜಡತೆಯೂ ಆಕ್ರಮಿಸಿ ಮೆರೆಯುತ್ತಿದೆ
ಮನಸ್ಸು ಮರಳುಗಾಡಾಗಿ ಬರಡಾಗುತ್ತಿದೆ
ಜಗವು ನಿನ್ನ ಆಗಮನಕ್ಕಾಗಿ ಕಾಯುತ್ತಿದೆ

ಅಜ್ಞಾನದ ಅಂಧಕಾರಕ್ಕೆ ಜ್ಞಾನ ಜ್ಯೋತಿಯಂತೆ
ಮೌಢ್ಯತೆಯ ಕಪಿಮುಷ್ಟಿಗೆ ಜ್ಞಾನ ರವಿಯಂತೆ
ಜಡತೆಯ ಮಡುವಿಗೆ ಸುಜ್ಞಾನ ರಾಶಿಯಂತೆ
ಮನವೆಂಬ ಮರಳುಗಾಡಿಗೆ ಮಹಾನದಿಯಂತೆ
ಇರುಳ ಕತ್ತಲೆಗೆ ಮುಡಣದ ಮಹಾಶಕ್ತಿ ಉತ್ತರಿಸುವಂತೆ
ಬಾ... ನೀ ವಾಗ್ದೇವಿಯ ಕಂದ ಶ್ರೀ ವಿವೇಕಾನಂದ


ಟಿಪಿಬಳಗ ಅರ್ಪಿಸುವ
ನಿರಂತರ..
ಯುಗಾದಿ ವಿಶೇಷಾಂಕ ಮಾರ್ಚ್ ೨೦೦೬
ಸಂಪುಟ:೧ ಸಂಚಿಕೆ:೩
21 1 2005